ಸದನವು ಪುನಃ ಮಧ್ಯಾಹ್ನ 3-34 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು ಪೀಠವನ್ನಲಂಕರಿಸಿದರು

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಹಲವು ಸದಸ್ಯರು ಮತ್ತು ಜೆ.ಡಿ.(ಎಸ್) ಪಕ್ಷದ ಹಲವು ಸದಸ್ಯರು ಹಾಗೂ ಪಕ್ಷೇತರ ಸದಸ್ಯರಾದ ಶ್ರೀ ಪಿ.ಎಂ. ನರೇಂದ್ರಸ್ವಾಮಿಯವರು ಸದನದ ಬಾವಿಯಲ್ಲಿದ್ದರು)

ಅಧ್ಯಕ್ಷರು :- ಈಗ ಮಾನ್ಯ ಮುಖ್ಯಮಂತ್ರಿಯವರು statement ಮಾಡುತ್ತಾರೆ. ಮಾನ್ಯ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ.

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯ ಮಂತ್ರಿ):- ಈಗ ನಾನು statement ಮಾಡುತ್ತೇನೆ.

ಅಧ್ಯಕ್ಷರು:- ಮಾನ್ಯ ಮುಖ್ಯ ಮಂತ್ರಿಯವರು statement ಮಾಡಲಿ

ಶ್ರೀ ಸಿದ್ದರಾಮಯ್ಯ:- Statement copy ಕೊಡಲಿ

ಅಧ್ಯಕ್ಷರು:- Statement copy ಕೊಡಿಸಿ. ದಯವಿಟ್ಟು ಮಾನ್ಯ ಸದಸ್ಯರು ತಮ್ಮ ತಮ್ಮ ಸ್ಥಳಗಳಿಗೆ ಹೋಗಿ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಸದಸ್ಯರು ದಯವಿಟ್ಟು ಅವರವರ ಸ್ಥಳಗಳಿಗೆ ಹೋಗಲಿ.

(ಈ ಹಂತದಲ್ಲಿ ಸದನದ ಬಾವಿಯಲ್ಲಿದ್ದ ಎಲ್ಲಾ ಸದಸ್ಯರು ತಮ್ಮ ತಮ್ಮ ಸ್ಥಳಗಳಿಗೆ ತೆರಳಿದರು)

2. ಕಾವೇರಿ ನೀರಿನ ವಿಚಾರದ ಬಗ್ಗೆ ಸರ್ಕಾರದಿಂದ ಹೇಳಿಕೆ

ಶ್ರೀ ಜಗದೀಶ್ ಶೆಟ್ಟರ್:- ಸನ್ಮಾನ್ಯ ಅಧ್ಯಕ್ಷರೆ, ಕಾವೇರಿ ಜಲ ವಿವಾದ ಕುರಿತು ನಿನ್ನೆ ಮಾನ್ಯ Supreme Courtನಲ್ಲಿ ಆಜ್ಞೆಯಾಯಿತು. ಆ ಹಿನ್ನೆಲೆಯಲ್ಲಿ ನಿನ್ನೆಯೂ ಸಹ ಸದನದಲ್ಲಿ ಚರ್ಚೆಯಾಯಿತು. ಆ ಹಿನ್ನೆಲೆಯಲ್ಲಿ ನಾನು ಒಂದು ಹೇಳಿಕೆಯನ್ನು ತಮ್ಮ ಗಮನಕ್ಕೆ ಮತ್ತು ಈ ಸದನದ ಗಮನಕ್ಕೆ ತರುತ್ತಿದ್ದೇನೆ.

ಕಾವೇರಿ ಜಲವಿವಾದವು ಆಗಿನ ಮದ್ರಾಸ್ ಮತ್ತು ಮೈಸೂರು Presidency/ Princely States ಮಧ್ಯೆ ಏರ್ಪಟ್ಟ 1892 ಹಾಗೂ 1924ರ ಒಪ್ಪಂದಗಳ ಹಿನ್ನೆಲೆ ಹಾಗೂ ಇತಿಹಾಸವನ್ನು ಹೊಂದಿದೆ.

ಕರ್ನಾಟಕ ರಾಜ್ಯವು ತನ್ನ ಕಾವೇರಿ ಜಲಾನಯನ ಪ್ರದೇಶದ ರೈತರಿಗೆ ಮಾರಕವಾಗಿರುವ 1924ರ ಒಪ್ಪಂದವನ್ನು ಪ್ರಶ್ನಿಸುವ ಹಾಗೂ ಸಮಾಪ್ತಿ ಮಾಡುವ ಎರಡು ಸುವರ್ಣಾವಕಾಶವನ್ನು ಕಳೆದುಕೊಂಡಿದೆ. 1948ರ ಜನವರಿ 26 ರಂದು ಇಡೀ ರಾಷ್ಟ್ರವೇ ಹೊಸ ಸಂವಿಧಾನವನ್ನು ಪಡೆದುಕೊಂಡಾಗ ಸ್ವಾತಂತ್ರ್ಯ ಪೂರ್ವದ ಯಾವುದೇ ಒಪ್ಪಂದಗಳು ಮುಂದುವರೆಯಲು ಅವಕಾಶವಿಲ್ಲವೆಂದು ನಮೂದಿಸಲಾಗಿದ್ದರೂ ಅದನ್ನು ಉಪಯೋಗಿಸಿಕೊಳ್ಳಲಿಲ್ಲ.

1956ರಲ್ಲಿ ಹೊಸ ರಾಜ್ಯ ಸ್ಥಾಪನೆ ಮಾಡಿದ ಮೇಲೆ Mysore Princely ಆಡಳಿತ ಸಮಾಪ್ತಿಗೊಂಡು ಹೊಸ ಪ್ರದೇಶಗಳನ್ನು ಒಳಗೊಂಡ ಹೊಸ ರಾಜ್ಯಗಳು ಅಸ್ತಿತ್ವಕ್ಕೆ ಬಂದ ಮೇಲೆ ಹಳೆಯ ಸಂಸ್ಥಾನದ ಒಪ್ಪಂದಕ್ಕೆ ಯಾವುದೇ ರೀತಿಯ ಹೊಣೆಗಾರಿಕೆ ಅಥವಾ ಮಾನ್ಯತೆಯಿಲ್ಲವೆಂದು ಪ್ರತಿಪಾದಿಸುವ ಅವಕಾಶವನ್ನು ಉಪಯೋಗಿಸಿಕೊಳ್ಳಲಿಲ್ಲ.

1974ರವರೆಗೆ ಯಾವುದೇ ಕ್ರಮ ಜರುಗಿಸಲು ಸಾಧ್ಯವಿಲ್ಲವೆನ್ನುವ ಮನೋಭಾವನೆಯ ನೇರವಾದಂತಹ ಪರಿಣಾಮ ಕಾವೇರಿ ಜಲವಿವಾದ ನ್ಯಾಯಮಂಡಳಿಯ ಆದೇಶಗಳಲ್ಲಿ ಕಂಡು ಬರುತ್ತದೆ.

1960 ರಿಂದ 1990 ರವರೆಗೆ ಕರ್ನಾಟಕ ಸರ್ಕಾರ ಹಾಗೂ ತಮಿಳುನಾಡು ರಾಜ್ಯಗಳು ಕೇಂದ್ರ ಸರ್ಕಾರದ ಮಧ್ಯಸ್ಥಿಕೆಯಲ್ಲಿ ಕಾವೇರಿ ಜಲಾನಯನದ ವಿವಾದ ಬಗೆಹರಿಸಿಕೊಳ್ಳಲು ಸಾಕಷ್ಟು ಬಾರಿ ಮಾತುಕತೆಯನ್ನು ನಡೆಸಿರುತ್ತವೆ.

ತಮಿಳುನಾಡಿನ ಕೆಲವು ರೈತರು 1983ರ ನವೆಂಬರ್‌ನಲ್ಲಿ ಕಾವೇರಿ ಜಲವಿವಾದವನ್ನು ಬಗೆಹರಿಸುವ ನಿಟ್ಟಿನಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮೊರೆ ಹೋದಾಗ ಮೇ 1990ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ವಿವಾದವನ್ನು ಇತ್ಯರ್ಥಪಡಿಸಲು ನ್ಯಾಯಾಧೀಕರಣವನ್ನು ರಚಿಸಲು ಕೇಂದ್ರ ಸರ್ಕಾರಕ್ಕೆ ಆದೇಶ ನೀಡಿತು. ಇದರನ್ವಯ 2ನೇ ಜೂನ್ 1990ರಲ್ಲಿ ಕೇಂದ್ರ ಸರ್ಕಾರವು **ಕಾವೇರಿ ಜಲ ವಿವಾದ ನ್ಯಾಯಾಧೀಕರಣವನ್ನು** ರಚಿಸಿತು.

1990–91ರಲ್ಲಿ ನ್ಯಾಯಾಧೀಕರಣವು ರಾಜ್ಯಕ್ಕೆ ತಮಿಳುನಾಡಿನ ಬೇಡಿಕೆಗಳನ್ನು ಪೂರೈಸಲು ಅನುವಾಗುವಂತೆ 5 ಟಿ.ಎಂ.ಸಿ. ನೀರನ್ನು ಬಿಡುವ ಬಗ್ಗೆ ಪರಿಗಣಿಸಲು ಸೂಚಿಸಿತು.

ಕರ್ನಾಟಕ ಸರ್ಕಾರವು 5 ಟಿ.ಎಂ.ಸಿ. ನೀರನ್ನು ಬಿಡಲು ಪರಿಗಣಿಸಲಿಲ್ಲ. ಇದರ

ವಿರುದ್ಧ ತಮಿಳುನಾಡು ಹಾಗೂ ಪಾಂಡಿಚೇರಿ ರಾಜ್ಯಗಳು ನ್ಯಾಯಾಧೀಕರಣಕ್ಕೆ ಅರ್ಜಿ ಸಲ್ಲಿಸಿದ ಪ್ರಯುಕ್ತ ನ್ಯಾಯಾಧೀಕರಣವು ದಿನಾಂಕ 25-06-1991ರಂದು 205 ಟಿ.ಎಂ.ಸಿ. ನೀರನ್ನು (ಮೆಟ್ಟೂರು ಜಲಾಶಯದಲ್ಲಿ ಅಳತೆ ಮಾಡಿದಂತೆ) ಪ್ರತಿ ತಿಂಗಳೂವಾರು ಹಾಗೂ ಪ್ರತಿವಾರದ ಅಧಾರದ ಮೇಲೆ ಬಿಡಲು ಮಧ್ಯಂತರ ಆದೇಶವನ್ನು ಹೊರಡಿಸಿತು. ಇದಲ್ಲದೇ ಕರ್ನಾಟಕವು ತನ್ನ ನೀರಾವರಿ ಕ್ಷೇತ್ರವನ್ನು 11.2ಲಕ್ಷ ಎಕರೆವರೆಗೆ ಸೀಮಿತಗೊಳಿಸಲು ಅಂದು ಸೂಚಿಸಿತು. ಸದರಿ ಮಧ್ಯಂತರ ಆದೇಶವು ಅಂತಿಮ ಆಗುವವರೆಗೆ ಜಾರಿಯಲ್ಲಿರಬೇಕೆಂದು ಆದೇಶಿಸಿತು.

ಆದರೆ ಈ ಮಧ್ಯಂತರ ಆದೇಶವನ್ನು ಜಾರಿಗೊಳಿಸದೇ ಅಂದಿನ ಸರ್ಕಾರವು 25ನೇ ಜುಲೈ 1991ರಂದು ಈ ಕೆಳಕಂಡಂತೆ ಸುಗ್ರೀವಾಜ್ಞೆಯನ್ನು ಹೊರಡಿಸಿತು.

"The Provisions of this Ordinance, (and of any Rules and Orders made thereunder), shall have effect notwithstanding anything contained in any order, report or decision of any Court or Tribunal (whether made before or after the commencement of this Ordinance), save and except a final decision under the provisions of sub-section (2) of Section 5 read with Section 6 of the Inter-State Water Disputes Act, 1956".

ಈ ರೀತಿ ಅಂದು ಸುಗ್ರೀವಾಜ್ಞೆಯನ್ನು ಹೊರಡಿಸಿತ್ತು. ಗೌರವಾನ್ವಿತ ರಾಷ್ಟ್ರಪತಿಗಳು ಈ ಸುಗ್ರೀವಾಜ್ಞೆಯು ಸಂವಿಧಾನಾತ್ಮಕವಾಗಿದೆಯೇ ಎನ್ನುವ ಕುರಿತು ಪರಿಶೀಲಿಸಲು ಸರ್ವೋಚ್ಚ ನ್ಯಾಯಾಲಯವನ್ನು ಕೋರಿದರು. ಈ ಸುಗ್ರೀವಾಜ್ಞೆಯು ಸಂವಿಧಾನಕ್ಕೆ ವಿರುದ್ಧವಾಗಿದೆಯೆಂದು ಮಾನ್ಯ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯ ಪಟ್ಟಿತು ಮತ್ತು 25ನೇ ಜುಲೈ 1991ರ ನ್ಯಾಯಾಧೀಕರಣದ ಮಧ್ಯಂತರ ಆದೇಶವು ಅಂತರಾಜ್ಯ ಜಲವಿವಾದದ ಕಾಯ್ದೆಗೆ ಅನುಗುಣವಾಗಿದೆಯೆಂದು ಹಾಗೂ ಇದನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ರಾಜ್ಯ ಪತ್ರದಲ್ಲಿ ಪ್ರಕಟಿಸಲು ಸೂಚಿಸಿತು.

ಜುಲೈ 1991ರಂದು ಕರ್ನಾಟಕ ಸರ್ಕಾರವು ಸುಗ್ರೀವಾಜ್ಞೆಯನ್ನು ಹೊರಡಿಸಲು ತೆಗೆದುಕೊಂಡು ಕ್ರಮದಿಂದಾಗಿ ಕಾವೇರಿ ಜಲವಿವಾದ ನ್ಯಾಯಮಂಡಳಿಯ ಮಧ್ಯಂತರ ಆದೇಶವು ಮಾನ್ಯ ಸರ್ವೋಚ್ಚ ನ್ಯಾಯಾಲಯದಿಂದ ಸ್ಥಿರೀಕರಣಗೊಳಿಸಲ್ಪಟ್ಟಿತು. ಕರ್ನಾಟಕಕ್ಕೆ 1924ರ ಒಪ್ಪಂದವು ಎಷ್ಟು ಮಾರಕವೋ ತಮಿಳುನಾಡಿಗೆ 205 ಟಿ.ಎಂ.ಸಿ. ನೀರನ್ನು

ಬಿಡಬೇಕೆನ್ನುವ ಹಾಗೂ ಪ್ರತಿ ತಿಂಗಳು ಬಿಡುಗಡೆ ಮಾಡಬೇಕಾದ ನೀರನ್ನು ನಿಗಧಿ ಮಾಡುವ ಕಾವೇರಿ ಜಲವಿವಾದ ನ್ಯಾಯಾಧೀಕರಣದ 1991ರ ಮಧ್ಯಂತರ ಆದೇಶವೂ ಕೂಡ ಅಷ್ಟೇ ಮಾರಕವಾಗಿದೆ.

O.S. 1 of1992ರಲ್ಲಿ ತಮಿಳುನಾಡು ಸರ್ಕಾರವು ಸಲ್ಲಿಸಿದ ಮಧ್ಯಂತರ ಅರ್ಜಿಯು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿಯಿದ್ದಾಗ ಆಗಸ್ಟ್ 1995ರಲ್ಲಿ ತಮಿಳುನಾಡಿಗೆ 5 ರಿಂದ 6 ಟಿ.ಎಂ.ಸಿ. ನೀರನ್ನು ಬಿಡಲು ಅಂದಿನ ಜಲವಿವಾದದ ಹಿರಿಯ ನ್ಯಾಯವಾಧಿಗಳು ಕರ್ನಾಟಕ ಸರ್ಕಾರಕ್ಕೆ ಸಲಹೆ ಮಾಡಿದ ಪ್ರಯುಕ್ತ 5 ಟಿ.ಎಂ.ಸಿ. ನೀರನ್ನು ತಮಿಳುನಾಡಿಗೆ ಬಿಡುಗಡೆ ಮಾಡಿ ಮಾನ್ಯ ಸರ್ವೋಚ್ಚ ನ್ಯಾಯಾಲಯದಿಂದ ಬರಬಹುದಾಂತಹ ವ್ಯತಿರಿಕ್ತ ಆದೇಶವನ್ನು ತಡೆಯಲಾಗಿತ್ತು. ಇದೇ ರೀತಿ ಡಿಸೆಂಬರ್ 1995ರಲ್ಲಿ ನ್ಯಾಯಾಧೀಕರಣವು ನೀಡಿದ 11 ಟಿ.ಎಂ.ಸಿ. ನೀರನ್ನು ಬಿಡುಗಡೆ ಮಾಡುವ ಆದೇಶವನ್ನು ಕರ್ನಾಟಕವು ಪಾಲಿಸುತ್ತಿಲ್ಲವೆಂದು ತಮಿಳುನಾಡು ಸರ್ಕಾರವು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮೊರೆ ಹೋದಾಗ ಸದರಿ ವಿಷಯವನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಮಾನ್ಯ ಪ್ರಧಾನಮಂತ್ರಿಗಳಿಗೆ ವಹಿಸಿತು. ಅಂದಿನ ಪ್ರಧಾನ ಮಂತ್ರಿಗಳು ಎರಡೂ ರಾಜ್ಯಗಳ ಮುಖ್ಯ ಮಂತ್ರಿಗಳೊಂದಿಗೆ ಸಮಾಲೋಚಿಸಿ 6 ಟಿ.ಎಂ.ಸಿ. ನೀರನ್ನು ಬಿಡಬೇಕೆಂದು ಸೂಚಿಸಿದರು. ಅದನ್ನು ಅಂದಿನ ಸರ್ಕಾರವು ಪಾಲಿಸಿತು.

2002ನೇ ಇಸವಿಯಲ್ಲಿ ತಮಿಳುನಾಡಿನ ಮಧ್ಯಂತರ ಅರ್ಜಿಯ ಮೇಲೆ ಸರ್ವೋಚ್ಚ ನ್ಯಾಯಾಲಯವು ದಿನಾಂಕ 03–09–2002ರಂದು ಪ್ರತಿ ದಿನಕ್ಕೆ 1.25 ಟಿ.ಎಂ.ಸಿ. ನೀರನ್ನು, ಕಾವೇರಿ ನದಿ ಪ್ರಾಧಿಕಾರವು ಸಭೆ ಸೇರಿ ನಿರ್ಣಯ ಕೈಗೊಳ್ಳುವವರೆಗೆ, ಬಿಡುವಂತೆ ಕರ್ನಾಟಕ ಸರ್ಕಾರಕ್ಕೆ ಆದೇಶಿಸಿತು. ದಿನಾಂಕ 08–09–2002ರಂದು ಕಾವೇರಿ ನದಿ ಪ್ರಾಧಿಕಾರವು ಸೆಪ್ಟೆಂಬರ್ ಮತ್ತು ಅಕ್ಟೋಬರ್ 2002 ರವರೆಗೆ ಪ್ರತಿ ದಿನ 9000 ಕ್ಯೂಸೆಕ್ಸ್ ನೀರನ್ನು ತಮಿಳುನಾಡಿನ ಮೆಟ್ಟೂರು ಜಲಾಶಯಕ್ಕೆ ಬಿಡುಗಡೆ ಮಾಡುವಂತೆ ಆದೇಶಿಸಿತು. ಆದರೆ ಕರ್ನಾಟಕ ಸರ್ಕಾರವು ತನ್ನ ರೈತರ ಹಿತಾಸಕ್ತಿಯನ್ನು ಕಾಪಾಡುವ ದೃಷ್ಟಿಯಿಂದ ಈ ಎರಡೂ ಆದೇಶಗಳನ್ನು ಪಾಲನೆ ಮಾಡದ ಸ್ಥಿತಿಯಲ್ಲಿದ್ದಾಗ ನೀರನ್ನು ಬಿಡುಗಡೆ ಮಾಡಲಿಲ್ಲ. ದಿನಾಂಕ 13–09–2002ರಂದು ಸರ್ವೋಚ್ಚ ನ್ಯಾಯಾಲಯವು ಕೇಂದ್ರ ಸರ್ಕಾರಕ್ಕೆ ಕರ್ನಾಟಕ ಸರ್ಕಾರವು ಸಿ.ಆರ್.ಎ. ಆದೇಶವನ್ನು ಪಾಲಿಸಿರುವ ಬಗ್ಗೆ ಪ್ರಮಾಣ ಪತ್ರವನ್ನು ದಿನಾಂಕ 20–09–2002ರ ಒಳಗೆ ಸಲ್ಲಿಸಲು ಸೂಚಿಸಿತು. ತಮಿಳುನಾಡು ಸರ್ಕಾರವು ಕೂಡ ನ್ಯಾಯಾಂಗ ನಿಂದನಾ ಅರ್ಜಿಯನ್ನು ಮಾನ್ಯ ಸರ್ವೋಚ್ಚ

ನ್ಯಾಯಾಲಯಕ್ಕೆ ಸಲ್ಲಿಸಿತು. ದಿನಾಂಕ 28–10–2002ರಂದು ಕರ್ನಾಟಕ ಸರ್ಕಾರದ ಅಂದಿನ ಮಾನ್ಯ ಮುಖ್ಯ ಮಂತ್ರಿಗಳು ಸರ್ವೋಚ್ಚ ನ್ಯಾಯಾಲಯದಲ್ಲಿ ಬೇಷರತ್ ಕ್ಷಮೆಯಾಚಿಸಿ ಈಗಾಗಲೇ ನೀರನ್ನು ಬಿಡಲು ಪ್ರಾರಂಭಿಸಿರುವುದರಿಂದ ಸರ್ವೋಚ್ಚ ನ್ಯಾಯಾಲಯ ಹಾಗೂ ಸಿ.ಆರ್.ಎ. ಆದೇಶಗಳನ್ನು ಪಾಲಿಸಲಾಗಿದೆ ಎಂಬ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ. ದಿನಾಂಕ 01–11–2002ರಂದು ಸರ್ವೋಚ್ಚ ನ್ಯಾಯಲಯವು 9000 ಕ್ಯೂಸೆಕ್ಸ್ ನೀರನ್ನು ದಿನಾಂಕ 06–12–2002ರಿಂದ ಬಿಡಲು ಸೂಚಿಸಿ ತದನಂತರ ನ್ಯಾಯಾಧೀಕರಣದ ಮಧ್ಯಂತರ ಆದೇಶದಂತೆ ನೀರನ್ನು ಬಿಡಲು ಸೂಚಿಸಿತು. ರಾಜ್ಯ ಸರ್ಕಾರವು ಜನವರಿ 2003 ಹಾಗೂ ಫೆಬ್ರವರಿ 2003 ರಲ್ಲೂ ಕೂಡ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ನೀರನ್ನು ಬಿಡುಗಡೆ ಮಾಡಿರುತ್ತದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ಹಾಗೂ ಸಿ.ಆರ್.ಎ. ಆದೇಶಗಳನ್ನು ಪ್ರಾರಂಭಿಕ ಹಂತದಲ್ಲಿ ಪಾಲಿಸಿ ತದನಂತರದಲ್ಲಿ ಆ ಆದೇಶಗಳನ್ನು ಪಾಲಿಸುವ ಅನಿವಾರ್ಯತೆ ಕರ್ನಾಟಕ ಸರ್ಕಾರಕ್ಕೆ ಬಂದಿದ್ದಲದೆ ಜನವರಿ ಹಾಗೂ ಫೆಬ್ರವರಿ 2003ರಲ್ಲೂ ಸರ್ವೋಚ್ಚ ನ್ಯಾಯಾಲಯ ಹಾಗೂ ಸಿ.ಆರ್.ಎ. ಆದೇಶದಂತೆ ನೀರನ್ನು ಬಿಡುಗಡೆ ಮಾಡಬೇಕಾಯಿತು.

2012ನೇ ಇಸವಿ ಮೇ ತಿಂಗಳಿನಲ್ಲಿ ಕರ್ನಾಟಕ ಸರ್ಕಾರಕ್ಕೆ ನೀರು ಬಿಡಲು ನಿರ್ದೇಶನ ನೀಡುವ ಹಾಗೂ ಕಾವೇರಿ ನದಿ ಪ್ರಾಧಿಕಾರದ ಸಭೆ ಕರೆಯುವಂತೆ ಕೋರಿ ತಮಿಳುನಾಡು ಮುಖ್ಯ ಮಂತ್ರಿಯವರು ಮಾನ್ಯ ಪ್ರಧಾನ ಮಂತ್ರಿಯವರಿಗೆ ಪತ್ರವನ್ನು ಬರೆದಿರುತ್ತಾರೆ. ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯ ಮಂತ್ರಿಯವರು ದಿನಾಂಕ 19–06–2012ರಂದು ಮಾನ್ಯ ಪ್ರಧಾನ ಮಂತ್ರಿಯವರಿಗೆ ಸವಿಸ್ತಾರ ಪತ್ರ ಬರೆದು ಪ್ರಾಧಿಕಾರದ ಸಭೆ ಕರೆಯುವ ಅವಶ್ಯಕತೆ ಇಲ್ಲವೆಂದು ವಿವರಿಸಿ ಪತ್ರ ಬರೆದಿರುತ್ತಾರೆ. ತಮಿಳುನಾಡು ಸರ್ಕಾರವು ದಿನಾಂಕ 20–07–2012ರಂದು ಸರ್ವೋಚ್ಚ ನ್ಯಾಯಾಲಯದಲ್ಲಿ ಮಧ್ಯಂತರ ಅರ್ಜಿಯನ್ನು ಸಲ್ಲಿಸಿ ಕರ್ನಾಟಕ ಸರ್ಕಾರಕ್ಕೆ ನೀರು ಬಿಡಲು ನಿರ್ದೇಶನವನ್ನು ಹಾಗೂ ಸಿ.ಆರ್.ಎ. ಸಭೆ ಕರೆಯಲು ಕೇಂದ್ರ ಸರ್ಕಾರಕ್ಕೆ ನೀರನ್ನು ನೀಡುವಂತೆ ಕೋರಿರುತ್ತಾರೆ.

ತಮಿಳುನಾಡಿಗೆ ನೀರು ಬಿಡುವಂತೆ ಸರ್ವೋಚ್ಚ ನ್ಯಾಯಾಲಯದ ಆದೇಶ ಬಂದ ನಂತರ ದಿನಾಂಕ 11–09–2012ರಂದು ಕರ್ನಾಟಕದ ಉಭಯ ಸದನಗಳ ಪ್ರತಿ ಪಕ್ಷಗಳ ಮುಖಂಡರ ಸಭೆ ಕರೆದು ಕರ್ನಾಟಕದ ನಿಲುವಿಗೆ ಕಾರಣವಾದ ಅಂಶಗಳನ್ನು ವಿವರಿಸಿ, ಅವರ ಸಹಮತಿಯನ್ನು ಪಡೆಯಲಾಗಿದೆ.

ದಿನಾಂಕ 19–09–2012ರಂದು ನಿಗದಿಯಾಗಿದ್ದ ಸಿ.ಆರ್.ಎ. ಸಭೆಯ ಹಿನ್ನೆಲೆಯಲ್ಲಿ, ಕರ್ನಾಟಕದ ನಿಲುವನ್ನು ರೂಪಿಸಲು ದಿನಾಂಕ 15–09–2012ರಂದು ಉಭಯ ಸದನಗಳ ಪ್ರತಿಪಕ್ಷಗಳ ಮುಖಂಡರ ಸಭೆ ಹಾಗೂ ತದನಂತರ ಕಾವೇರಿ ಕಣಿವೆಯ ಎಲ್ಲ ಸಂಸತ್ ಸದಸ್ಯರುಗಳ ಸಭೆಯನ್ನು ಜರುಗಿಸಲಾಗಿದೆ.

ದಿನಾಂಕ 19–09–2012ರಂದು ಪ್ರಧಾನ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಿ.ಆರ್. ಎ. ಸಭೆಗೆ ಮುಖ್ಯಮಂತ್ರಿಗಳು ಹಾಗೂ ಜಲಸಂಪನ್ಮೂಲ ಸಚಿವರು ಸ್ವತಃ ಭಾಗವಹಿಸಿ ಕರ್ನಾಟಕದಲ್ಲಿನ ಮಳೆಯ ಕೊರತೆ, ಜಲಾಶಯಗಳ ಮಟ್ಟ, ಒಳಹರಿವಿನ ಇಳಿಮುಖ, ಕುಡಿಯುವ ನೀರಿನ ಅವಶ್ಯಕತೆ, ಬೆಳೆದು ನಿಂತ ಬೆಳೆಗಳಿಗೆ ಬೇಕಾಗುವ ನೀರಿನ ಪ್ರಮಾಣ ಒಳಗೊಂಡಂತೆ ಎಲ್ಲ ವಾಸ್ತವಾಂಶಗಳನ್ನು ಸಮರ್ಥವಾಗಿ ಮಂಡಿಸಿ, ಕರ್ನಾಟಕದಲ್ಲಿನ ಜಲಾಶಯಗಳಲ್ಲಿನ ನೀರು ನಿಂತ ಬೆಳೆಗಳಿಗೆ ಹಾಗೂ ಕುಡಿಯುವ ನೀರಿನ ಅವಶ್ಯಕತೆಗಳನ್ನು ಪೂರೈಸಲೂ ಕೂಡ ಸಾಕಾಗುವುದಿಲ್ಲವಾದ್ದರಿಂದ ತಮಿಳುನಾಡಿಗೆ ನೀರು ಬಿಡಲು ಸಾಧ್ಯವಿಲ್ಲವೆಂದು ಹಾಗೂ ವಾಸ್ತವಾಂಶ ಅರಿಯಲು ತಜ್ಞರ ತಂಡವನ್ನು ಕಳುಹಿಸಲು ತಿಳಿಸಿರುತ್ತೇವೆ. ಕರ್ನಾಟಕವು ತಮಿಳುನಾಡಿಗೆ ದಿನಾಂಕ 20–09–2012 ರಿಂದ 15–10–2012ರವರೆಗೆ ಪ್ರತಿದಿನ 9000 ಕ್ಯೂಸೆಕ್ಸ್ ನೀರನ್ನು ಬಿಡಬೇಕೆಂಬ ಆದೇಶವನ್ನು ಪ್ರಧಾನ ಮಂತ್ರಿಗಳು ಓದಿದ ನಂತರ, ಕರ್ನಾಟಕದ ರೈತರಿಗೆ ಮಾರಕವಾಗುವ ಈ ಆದೇಶವನ್ನು ಪಾಲಿಸಲು ಹಾಗೂ ತಮಿಳುನಾಡಿಗೆ ನೀರು ಬಿಡಲು ಸಾಧ್ಯವಿಲ್ಲವೆಂದು ತಿಳಿಸಿ ಸಭೆಯಿಂದ ನಿರ್ಗಮಿಸಲಾಗಿದೆ.

ದಿನಾಂಕ 19–09–2012ರ ಸಿ.ಆರ್.ಎ. ಆದೇಶ ವಾಸ್ತವಾಂಶಗಳಿಂದ ಕೂಡಿರದೇ ನ್ಯಾಯಸಮ್ಮತವಾಗಿರುವುದಿಲ್ಲವಾದ್ದರಿಂದ, ಅದನ್ನು ರದುಪಡಿಸಲು ಹಾಗೂ ಅದನ್ನು ರದ್ದುಪಡಿಸುವವರೆಗೆ ನಿಲಂಬನೆಯಲ್ಲಿ ಇಡಲು ಕೋರಿ ದಿನಾಂಕ 20–09–2012ರಂದು ಸಿ.ಆರ್.ಎ. ಅಧ್ಯಕ್ಷರೂ ಆಗಿರುವ ಪ್ರಧಾನ ಮಂತ್ರಿಗಳಿಗೆ ಪುನರ್ ಪರಿಶೀಲನಾ ಅರ್ಜಿಯನ್ನು ಸಲ್ಲಿಸಲಾಗಿದೆ.

ಕರ್ನಾಟಕದ ಪುನರ್‌ಪರಿಶೀಲನಾ ಅರ್ಜಿಯನ್ನು ಇತ್ಯರ್ಥಪಡಿಸಲು ಸಿ.ಆರ್.ಎ. ಅಧ್ಯಕ್ಷರು ಮೀನಮೇಷ ಎಣಿಸುತ್ತಿದ್ದಾಗ, ದಿನಾಂಕ 08–10–2012ರಂದು ಕರ್ನಾಟಕದ ಹಿರಿಯ ನ್ಯಾಯವಾದಿಗಳ ಒತ್ತಾಯದ ಮೇರೆಗೆ, ದಿನಾಂಕ 28–09–2012ರಂದು ತಾನು ನೀಡಿದ ಆದೇಶವು, ಕರ್ನಾಟಕವು ಸಿಆರ್‌ಎ ಮುಂದೆ ಸಲ್ಲಿಸಿರುವ ಪುನರ್‌ಪರಿಶೀಲನಾ

ಅರ್ಜಿಯನ್ನು ಇತ್ಯರ್ಥಪಡಿಸಲು ಅಡ್ಡಿಯಾಗುವುದಿಲ್ಲವೆಂದು ಸರ್ವೋಚ್ಚ ನ್ಯಾಯಾಲಯವು ಸ್ಪಷ್ಟಪಡಿಸಿದೆ.

ದಿನಾಂಕ 11–10–2012 ರಂದು ಕೇಂದ್ರ ಸರ್ಕಾರವು ಕರ್ನಾಟಕ ಸರ್ಕಾರದ ಪುನರ್ ಪರಿಶೀಲನಾ ಅರ್ಜಿಯನ್ನು ಪರಿಗಣಿಸಲು ತನಗೆ ಅಧಿಕಾರವಿಲ್ಲವೆಂದು ತಿಳಿಸಿರುತ್ತದೆ. ದಿನಾಂಕ 28–12–2012ರಂದು ಸರ್ವೋಚ್ಚ ನ್ಯಾಯಾಲಯದಲ್ಲಿ ನಡೆದ ವಿಚಾರಣೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ದಿನಾಂಕ 15–10–2012ವರೆಗೆ ಪ್ರತಿ ದಿನ 9000 ಕ್ಯೂಸೆಕ್ಸ್ ನೀರನ್ನು ತಮಿಳುನಾಡಿಗೆ ಸಿ.ಆರ್.ಎ. ಆದೇಶದನ್ವಯ ನೀರು ಬಿಡುವಂತೆ ಆದೇಶಿಸಿದೆ. ದಿನಾಂಕ 19–09–2012ರಂದು ಸಿ.ಆರ್.ಎ. ಆದೇಶವನ್ನು ಪ್ರಶ್ನಿಸಿ ದಿನಾಂಕ 17–10–2012ರಂದು ಸರ್ವೋಚ್ಚ ನ್ಯಾಯಾಲಯದಲ್ಲಿ ಕರ್ನಾಟಕ ಸರ್ಕಾರವು ಎಲ್.ಎಲ್.ಪಿ. ಸಲ್ಲಿಸಿದೆ.

'ಈ ಮಧ್ಯೆ ಸಿ.ಎಂ.ಸಿ.ಯವರು ರಾಜ್ಯಕ್ಕೆ ಕಳುಹಿಸಿದ ಕೇಂದ್ರದ ತಜ್ಞರ ತಂಡ ಕರ್ನಾಟಕದ ಕಾವೇರಿ ಜಲಾನಯನ ಪ್ರದೇಶದಲ್ಲಿ ಸಂಚರಿಸಿ, ಕರ್ನಾಟಕದಲ್ಲಿ ಬೆಳೆದು ನಿಂತ ಬೆಳೆಗಳ ಪರಿಸ್ಥಿತಿ ಹಾಗೂ ಕುಡಿಯುವ ನೀರಿನ ಅವಶ್ಯಕತೆಗಳನ್ನು ಪರಿಶೀಲಿಸಿ, ಕರ್ನಾಟಕದ ಜಲಾಶಯಗಳಲ್ಲಿ ಲಭ್ಯವಿರುವ ನೀರು, ಕರ್ನಾಟಕದಲ್ಲಿ ಬೆಳೆದು ನಿಂತ ಬೆಳೆಗಳಿಗೆ ಹಾಗೂ ಕುಡಿಯುವ ನೀರಿನ ಅವಶ್ಯಕತೆಗಳನ್ನು ಪೂರೈಸಲು ಮಾತ್ರ ಸಕಾಗುತ್ತದೆಂದು ಸಿ.ಆರ್.ಎ. ಮುಂದೆ ಕರ್ನಾಟಕ ಮಂಡಿಸಿದ ವಾದವನ್ನು ಪುಷ್ಟೀಕರಿಸುವಂತಹ ತನ್ನ ವರದಿಯನ್ನು ಸಲ್ಲಿಸಿದೆ. ಈ ಕೇಂದ್ರ ತಂಡ ಸಹಿತ ಸ್ಪಷ್ಟವಾಗಿ ಇಲ್ಲಿಯ ಪರಿಸ್ಥಿತಿಯನ್ನು ಅಂದು ತನ್ನ ವರದಿಯಲ್ಲಿ ಸ್ಪಷ್ಟವಾಗಿ ಹೇಳಿದೆ.

ದಿನಾಂಕ 30–10–2012ರಂದು ಸರ್ವೋಚ್ಚ ನ್ಯಾಯಾಲಯ ಕಾವೇರಿ ಮೇಲ್ವಿಚಾರಣಾ ಸಮಿತಿಗೆ 2 ರಾಜ್ಯಗಳ ಅಹವಾಲುಗಳನ್ನು ಪರಿಶೀಲಿಸಿ ಸೂಕ್ತವಾದ ಶಿಫಾರಸ್ಸುಗಳನ್ನು ಮಾಡಲು ಸೂಚಿಸಿತು. ದಿನಾಂಕ 31–10–2012ರಂದು ಕಾವೇರಿ ಮೇಲ್ವಿಚಾರಣಾ ಸಮಿತಿಯು 21ನೇ ಸಭೆಯನ್ನು ನಡೆಸಿ ಮೊದಲ 15 ದಿವಸಗಳಲ್ಲಿ 3.94 ಟಿಎಂಸಿ ನೀರನ್ನು ಬಿಡಲು ಸೂಚಿಸಿತು ಮತ್ತು ದಿನಾಂಕ 15–11–2012ರಂದು 30ನೇ ಸಭೆ ನಡೆಸಿ 2012ನೇ ನವೆಂಬರ್ ಕೊನೆಯ 15 ದಿವಸಗಳಲ್ಲಿ 4.81 ಟಿಎಂಸಿ ನೀರನ್ನು ಬಿಡಲು ಸೂಚಿಸಿತು. ಸರ್ವೋಚ್ಚ ನ್ಯಾಯಾಲಯವು ದಿನಾಂಕ 26–11–2012ರಂದು 2 ರಾಜ್ಯಗಳ ಮುಖ್ಯ ಮಂತ್ರಿಗಳಿಗೆ ಮಾತುಕತೆಯ ಮೂಲಕ ತಮ್ಮ ಬೇಡಿಕೆಯನ್ನು ಸೌಹಾರ್ದಯುತವಾಗಿ

ಬಗೆಹರಿಸಿಕೊಳ್ಳಲು ಸೂಚಿಸಿತು. ಅದರನ್ವಯ, ದಿನಾಂಕ 29–11–2012ರಂದು ಬೆಂಗಳೂರಿನಲ್ಲಿ ಎರಡೂ ರಾಜ್ಯಗಳ ಮುಖ್ಯ ಮಂತ್ರಿಗಳ ಸಭೆ ನಡೆದಾಗ ಅದರಲ್ಲಿ ಕರ್ನಾಟಕ ರಾಜ್ಯದಲ್ಲಿನ ಪರಿಸ್ಥಿತಿಯನ್ನು ವಿವರವಾಗಿ ವಿವರಿಸಿ, ನೀರಿನ ಲಭ್ಯತೆ ಹಾಗೂ ಕುಡಿಯುವ ನೀರು ಮತ್ತು ನೀರಾವರಿಗಾಗಿ ಬೇಕಾಗುವ ನೀರು ಮತ್ತು ರಾಜ್ಯದಲ್ಲಿನ ನೀರಿನ ಕೊರತೆ ಬಗ್ಗೆ ಸವಿಸ್ತಾರವಾಗಿ ಅಲ್ಲಿ ನಾವು ಎಲ್ಲಾ ವಿಚಾರವನ್ನು ವಿವರಿಸಿದೆವು. ದಿನಾಂಕ 30–11–2012ರಂದು ಸರ್ವೋಚ್ಚ ನ್ಯಾಯಾಲಯವು ಎರಡೂ ರಾಜ್ಯಗಳಿಗೆ ಘಟನಾವಳಿಗಳ ಕುರಿತು ಮಾಹಿತಿ ನೀಡಲು ಸೂಚಿಸಿತು.

ಸರ್ವೋಚ್ಚ ನ್ಯಾಯಾಲಯವು ದಿನಾಂಕ 3,4,5 ಡಿಸೆಂಬರ್, 2012ರಂದು 2 ರಾಜ್ಯಗಳ ವಾದಗಳನ್ನು ಆಲಿಸಿ ಈ ಕೆಳಕಂಡಂತೆ ಆದೇಶ ನೀಡಿರುತ್ತದೆ.

"We direct that till the C.M.C. submits its report, the State of Karnataka shall from today release 10,000 cusecs flow of water at Biligundlu.This order of release shall continue to be in force from today till 9th December, 2012 (both days inclusive)".

The Court further observed;

"that the final decision dated 05-02-2007, rendered by the Tribunal, has not yet been notified by the Central Government. We have requested Mr. Rawal to seek instructions as to within how much time the said decision shall be notified".

ತಮಿಳುನಾಡು ಸರ್ಕಾರವು ಜುಲೈ, 2012ರಿಂದ ಪ್ರೊ–ರೇಟಾ ಆಧಾರಿತವಾದ ಸಂಕಷ್ಟ ಸೂತ್ರಗಳನ್ವಯ ನೀರು ಬಿಡಲು ಹಾಗೂ ಬಾಕಿ ಇರುವ ನೀರನ್ನು ಕೂಡ ಬಿಡಲು ಒತ್ತಾಯಿಸುತ್ತದೆ.

ಈ ಮೇಲೆ ತಿಳಿಸಿರುವಂತೆ, ಕಾವೇರಿ ಜಲ ವಿವಾದ ಕುರಿತಂತೆ ಹಿಂದೆ ಹೊರಡಿಸಲಾದ ನ್ಯಾಯಾಧೀಕರಣ, ಸರ್ವೋಚ್ಚ ನ್ಯಾಯಾಲಯ, ಸಿ.ಆರ್.ಎ., ಸಿ.ಎಂ.ಸಿ.ಗಳ ಆದೇಶಗಳ ಪಾಲಿಸುವಿಕೆ ಹಾಗೂ ತದನಂತರದ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದಾಗ, ಕರ್ನಾಟಕ ರಾಜ್ಯವು ಆದೇಶಗಳನ್ನು ಉಲ್ಲಂಘಿಸಿದಾಗ ಉಂಟಾಗಿರುವ ಪರಿಣಾಮಗಳು ರಾಜ್ಯದ ರೈತರ ಹಿತಕ್ಕೆ ಧಕ್ಕೆಯಾಗುವಂತಹುದೇ ಆಗಿರುತ್ತದೆ. ತಮಿಳುನಾಡು ಸರ್ಕಾರವು

52 ಟಿಎಂಸಿ ಬ್ಯಾಕ್‌ಲಾಗ್ ಬೇಡಿಕೆಯನ್ನು ನ್ಯಾಯಾಲಯದ ಮುಂದಿಟ್ಟಿದೆ. ನ್ಯಾಯಾಲಯವು 10,000 ಕ್ಯೂಸೆಕ್ಸ್ ನೀರನ್ನು 5 ದಿನಗಳ ಕಾಲ ಬಿಡಲು ಸೂಚಿಸಿದೆ, ಈ ಸಂದಿಗ್ಧ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರವು ಕಾನೂನಾತ್ಮಕವಾಗಿ ನಮ್ಮ ರಾಜ್ಯದ ರೈತರ ಹಿತರಕ್ಷಣೆ ಮಾಡುವುದು ಅಗತ್ಯವಾಗಿದೆ. ಅದಲ್ಲದೇ ಸಿ.ಆರ್.ಎ., ಅದ ಅಧ್ಯಕ್ಷರೂ ಆಗಿರುವ ಮಾನ್ಯ ಪ್ರಧಾನ ಮಂತ್ರಿಗಳಿಗೆ ಇತ್ತೀಚಿನ ವಸ್ತುಸ್ಥಿತಿಯನ್ನು ಮನವರಿಕೆ ಮಾಡಿಕೊಡುವುದು ಅಷ್ಟೇ ಅವಶ್ಯಕವಾಗಿದೆ. ಆದುದರಿಂದ ಮಾನ್ಯ ಪ್ರಧಾನ ಮಂತ್ರಿಗಳಿಗೆ ಹಾಗೂ ಕೇಂದ್ರ ನೀರಾವರಿ ಸಚಿವರಿಗೆ ಮನವರಿಕೆ ಮಾಡಿಕೊಡುವುದಕ್ಕಾಗಿ ಕಾವೇರಿ ಜಲಾನಯನ ಪ್ರದೇಶದ ಸಂಸತ್ ಸದಸ್ಯರ ನಿಯೋಗದೊಂದಿಗೆ ಅವರನ್ನು ನಾಳೆ ಬೆಳಿಗ್ಗೆ ನಾನು ಮತ್ತು ನಮ್ಮ Irrigation Minister ಆದ ಶ್ರೀ ಬಸವರಾಜ ಬೊಮ್ಮಾಯಿಯವರು ಭೇಟಿಯಾಗಲಿದ್ದೇವೆ. ಈ ಮಧ್ಯೆ ನಮ್ಮ ಹಿರಿಯ ನ್ಯಾಯವಾದಿಗಳ ಹಾಗೂ ಕಾನೂನು ತಜ್ಞರ ಜೊತೆ ಚರ್ಚೆ ಮಾಡಿ ಮುಂದಿನ ಕ್ರಮಗಳನ್ನು ಕೈಗೊಳ್ಳುವ ನಿರ್ಣಯವನ್ನು ಕೈಗೊಂಡಿದ್ದೇವೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಯವರೆಗೂ ಏನೇನು ಆಗಿದೆ ಎಂಬ ಬಗ್ಗೆ ಬಹಳ ದೀರ್ಘವಾದಂಥ ಹೇಳಿಕೆಯನ್ನು ಕೊಟ್ಟಿದ್ದಾರೆ. 1924ರ Agreement ಅಲ್ಲಿಂದ ಹಿಡಿದು ಇವತ್ತಿನವರೆಗೂ ಆದಂತಹ ಎಲ್ಲಾ ಬೆಳವಣಿಗೆಗಳನ್ನೂ ಕೂಡ ಅವರ ಹೇಳಿಕೆಯಲ್ಲಿ ಸೇರಿಸಿದ್ದಾರೆ. ಇವತ್ತು ಕರ್ನಾಟಕದಲ್ಲಿ ಬಹಳ ವಿಷಮವಾದ ಪರಿಸ್ಥಿತಿ ಇದೆ. Supreme Courtನ ಆದೇಶವನ್ನು ಪಾಲನೆ ಮಾಡಬೇಕು/ ಮಾಡಬಾರದು ಎನ್ನುವುದಕ್ಕಿಂತ ಬಹಳ ಮುಖ್ಯವಾಗಿ ನಮ್ಮ ರೈತರು ಅನುಭವಿಸುತ್ತಿರುವಂಥ ಕಷ್ಟ ಬಹಳ ದೊಡ್ಡದಾಗಿದೆ. ಕಳೆದ ಎರಡು ವರ್ಷ, 2011–12 ಮತ್ತು 2012–13 ಬಹಳ ಬರಗಾಲ ಇತ್ತು. ಕಾವೇರಿ ಜಲಾನಯನ ಪ್ರದೇಶದಲ್ಲಿ ಬರುವ 49 ತಾಲ್ಲೂಕುಗಳನ್ನು ಬರ ಪೀಡಿತ ತಾಲ್ಲೂಕುಗಳೆಂದು ಘೋಷಿಸಿದ್ದಾರೆ. ಈ ಪ್ರದೇಶಗಳಲ್ಲಿ ಕುಡಿಯುವ ನೀರಿಲ್ಲ, ಜಾನುವಾರುಗಳಿಗೆ ಮೇವಿಲ್ಲ, ಜನರಿಗೆ ಉದ್ಯೋಗವಿಲ್ಲ. ಸ್ವಲ್ಪ depressionನಲ್ಲಿ ಒಂದೆರಡು ದಿನ ಮಳೆ ಬಂತು. ಅದು ಬರದೇ ಇದ್ದಿದ್ದರೆ ಇನ್ನೂ ವಿಷಮ ಪರಿಸ್ಥಿತಿ ಆಗುತ್ತಿತ್ತು. ಅತ್ಯಂತ ಕೆಟ್ಟ ಪರಿಸ್ಥಿತಿಗೆ ನಾವು ಹೋಗುತ್ತಿದ್ದೇವು. ಸರ್ಕಾರವೇ ಹೇಳಿರುವ ಅಂಕಿ ಅಂಶಗಳ ಪ್ರಕಾರ ಇವತ್ತು ನಮ್ಮ ಜಲಾಶಯಗಳಲ್ಲಿ 32 TMC ನೀರು ಇದೆ. ಕಬಿನಿ ಒಣಗಿಹೋಗಿದೆ. ಹಾರಂಗಿಯಲ್ಲಿ ನೀರಿಲ್ಲ, ಹೇಮಾವತಿ ಮತ್ತು ಕೆ.ಆರ್.ಎಸ್.ನಲ್ಲಿ ಸ್ವಲ್ಪ ನೀರಿದೆ. 7–8 ಲಕ್ಷ ಎಕರೆಯಲ್ಲಿ ಹಿಂಗಾರು ಭತ್ತದ ಬೆಳೆ ಇದೆ. ಈಗ ತಾನೆ ಒಡೆ ಬಂದಿದೆ. ಈಗ ನೀರು ಅತ್ಯಂತ ಅವಶ್ಯಕ. ಇಲ್ಲದಿದ್ದರೆ ಅದು

ಹೆಚ್ಚಾಗಿ ರೋಗಕ್ಕೆ ತುತ್ತಾಗತಕ್ಕಂತದ್ದು ಮತ್ತು ಬತ್ತ ಜಳ್ಳಾಗತಕ್ಕಂಥದ್ದು ಹೆಚ್ಚಾಗುತ್ತದೆ. ಕಬಿನಿ ವ್ಯಾಪ್ತಿಯಲ್ಲಿ 1,20,000 ಎಕರೆ ಇದೆ. ಕೆ.ಆರ್.ಎಸ್.ವ್ಯಾಪ್ತಿಯಲ್ಲಿ 2 ಲಕ್ಷ ಚಿಲ್ಲರೆ ಎಕರೆ ಇದೆ. ಹೇಮಾವತಿ ವ್ಯಾಪ್ತಿಯಲ್ಲಿ 5 ಲಕ್ಷ ಎಕರೆ ಇದೆ. ಇಲ್ಲಿ ಬೆಳೆಗಳು ಇವೆ. ಬೆಂಗಳೂರು, ಮೈಸೂರು, ಮಂಡ್ಯ, ಹಾಸನಕ್ಕೆ ಕುಡಿಯುವ ನೀರಿಗೆ ಸುಮಾರು 20 ಟಿ.ಎಂ.ಸಿ.ಯಷ್ಟು ನೀರು ಬೇಕೆಂದು ಲೆಕ್ಕ ಹಾಕಿದ್ದಾರೆ. ಕಾವೇರಿ ಬೇಸಿನ್‌ನಲ್ಲಿ ಬರತಕ್ಕಂಥ ಅನೇಕ ಪಟ್ಟಣಗಳಿಗೆ ಕನಿಷ್ಠ 20 ಟಿ.ಎಂ.ಸಿ. ನೀರು ಬೇಕೆಂದು ಲೆಕ್ಕ ಹಾಕಿದ್ದಾರೆ. ನಾಲ್ಕು ಜಲಾಶಯಗಳಿಂದ ಸೇರಿ 32 ಟಿಎಂಸಿ ನೀರು ಇದೆ. 20 ಟಿಎಂಸಿ ನೀರನ್ನು ತೆಗೆದು ಇಟ್ಟುಕೊಂಡುಬಿಟ್ಟರೆ ಇನ್ನು ಬೆಳೆಗಳಿಗೆ ನೀರು ಹೇಗೆ ಬಿಡುವುದು ? ನನಗೆ ಗೊತ್ತಿರುವ ಮಟ್ಟಿಗೆ ಬೆಳೆಗಳಿಗೆ ಕನಿಷ್ಟ ಒಂದು ದಿನಕ್ಕೆ more than 1 TMC ನೀರು ಬೇಕು. ಕನಿಷ್ಠ ನಮಗೆ ಜನವರಿ 1st week or 2nd week ಅಲ್ಲಿಯವರೆಗೆ ನೀರು ಬೇಕಾಗುತ್ತದೆ. ಏಕೆಂದರೆ, ಈ ಸಾರಿ ಮಳೆ ಇಲ್ಲದಿರುವುದರಿಂದ ನಾಟಿ ಹಾಕುವುದು ಬಹಳ ಕಡಿಮೆಯಾಗಿದೆ. ಕೆಆರ್‌ಎಸ್‌ಗೆ ನೀರು ಬರುವುದು ಕಡಿಮೆಯಾಯಿತು. For the first time ಈ ವರ್ಷ ಕೆಆರ್‌ಎಸ್ Maximum level ತಲುಪಲಿಲ್ಲ. ಈಗಾಗಲೇ 92 ಅಡಿಗೆ ನೀರು ಬಂದಿದೆ. ನೀರು ಇಲ್ಲ. ಕಬಿನಿಯಂತೂ ಒಣಗಿ ಹೋಗಿರುವುದರಿಂದ ಅಲ್ಲಿ ಪಕ್ಷಿಗಳಿಗೂ ಕೂಡ ನೀರು ಇಲ್ಲದೆ ಪರಿಸ್ಥಿತಿ ಉಂಟಾಗಿದೆ. Life store ಹೋಗಿ dead store ಮಾತ್ರ ಉಳಿದಿದೆ. ಇನ್ನು 1,20,000 ಎಕರೆ ಒಣಗಿ ಹೋಗುತ್ತದೆ. ಒಂದು ವೇಳೆ ನೀರು ಇಲ್ಲದೇ ಒಣಗಿ ಹೋಗಿಬಿಟ್ಟರೆ ಪ್ರತಿ ಎಕರೆಗೆ 25 ಸಾವಿರ ರೂಪಾಯಿಗಳಂತೆ ರೈತರಿಗೆ ಪರಿಹಾರ ಕೊಡಬೇಕಾಗುತ್ತದೆ. ಮೊದಲೇ ರೈತರು ಬರಗಾಲದಿಂದ ಕಂಗೆಟ್ಟು ಹೋಗಿ ಕಂಗಾಲಾಗಿದ್ದಾರೆ. ಈ ಬೆಳೆನೂ ಹೋಗಿಬಿಟ್ಟರೆ, ಮುಂಗಾರು ಬೆಳೆ ಎಲ್ಲಾ ಹೋಯಿತು, ಖುಷ್ಕಿ ಬೆಳೆ ಎಲ್ಲಾ ಹೋಯಿತು. ಇದರ ಜೊತೆಗೆ ಸಾವಿರಾರು ಎಕರೆಯಲ್ಲಿ ಕಬ್ಬು ಇದೆ. ಇದಕ್ಕೆ ಬೇರೆ ನೀರು ಬೇಕು. ಬೇರೆ perennial crop ಗಳಿವೆ. ಹರಿಷಣ, ಶುಂಠಿ, ಮೇಜ್, ಹಿಪ್ಪೆನೇರಳೆ, ಬಾಳೆ, ಈ ತರಹದ perennial ಬೆಳೆಗಳಿವೆ. ಇವುಕ್ಕೆಲ್ಲ ನೀರು ಬೇಕು. ಈ ವಸ್ತುಸ್ಥಿತಿಯನ್ನು ground reality ಯನ್ನು court ಗೆ CMC ಗೆ ಮತ್ತೆ CRA ಮುಂದೆ ಬಹಳ ಗಟ್ಟಿಯಾಗಿ ಇಡುವ ಪ್ರಯತ್ನ ಆಗಬೇಕು. ಇಷ್ಟಾದರೂ Supreme Court ನವರು ಇಷ್ಟೆಲ್ಲಾ ನಮ್ಮ ಪರಿಸ್ಥಿತಿಯಿದ್ದರೂ Supreme Court ನವರು ನಿನ್ನೆ 5 ದಿನಗಳವರೆಗೆ 10 ಸಾವಿರ ಕ್ಯೂಸೆಕ್ಸ್ ನೀರು ಬಿಡಬೇಕೆಂದು ಹೇಳಿದ್ದಾರೆ. ನಮ್ಮ ಹತ್ತಿರ ನೀರು ಇದ್ದರೆ ಬಿಡಬಾರದು ಎಂದು ನಾನು ಹೇಳುವುದಿಲ್ಲ. ಏಕೆಂದರೆ,

ನಾವು ಒಕ್ಕೂಟದ ವ್ಯವಸ್ಥೆಯಲ್ಲಿದ್ದೇವೆ. ಮತ್ತೆ ಇಂಥ ಸಂಕಷ್ಟ ಬಂದಾಗ ಸಂಕಷ್ಟ ಹಂಚಿಕೊಳ್ಳಬೇಕೆಂದು ಇದೆ. ಹಂಚಿಕೊಳ್ಳುವುದು ಬೇರೆ ಪ್ರಶ್ನೆ. ಆದರೆ ನಮ್ಮ ಮನೆ ಪೂರಾ ಹಾಳು ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಈಗ ಆ ಪರಿಸ್ಥಿತಿ ಆಗಿ ಬಿಟ್ಟಿದೆ. ಅದಕ್ಕೆ ನಾನೂ ನಿನ್ನೆನೂ ಹೇಳಿದೆ ಇವತ್ತೂ ಹೇಳುತ್ತಿದ್ದೇನೆ, ಆ ಭಾಗದಲ್ಲಿನ ಜನರು ಇವತ್ತು ನೋಡುತ್ತಿದ್ದಾರೆ. ಕಾವೇರಿ ಬೇಸಿನ್‌ನ ಸಾವಿರಾರು ಜನರು ಇವತ್ತು ಕೆಆರ್‌ಎಸ್‌ಗೆ ಹೋಗಿ ಮುತ್ತಿಗೆ ಹಾಕಿ ಧರಣಿ ಮಾಡುತ್ತಿದ್ದಾರೆ. ಇವತ್ತು ಶಾಲಾ–ಕಾಲೇಜುಗಳಿಗೆ ರಜೆ ಘೋಷಿಸಿದ್ದಾರೆ. ಇಲ್ಲದಿದ್ದರೆ ಗಲಾಟೆಯಾಗಿ ಬಿಡುತ್ತದೆ. ಕಾನೂನಿನ ಸುವ್ಯವಸ್ಥೆ ಹಾಳಾಗಿ ಬಿಡುತ್ತದೆ. ಒಂದು ವೇಳೆ ಏನಾದರೂ ಸರ್ಕಾರದ ನಿಲುವು ನೀರು ಬಿಡುತ್ತದೆ ಎಂದು ಗೊತ್ತಾಗಿ ಬಿಟ್ಟರೆ, ಇಡೀ ಕಾವೇರಿ ಬೇಸಿನ್‌ನಲ್ಲಿ ದೊಡ್ಡ ರದ್ದಾಂತವಾಗಿ ಬಿಡುತ್ತದೆ. ಜನ ಕಾನೂನನ್ನು ಕೈಗೆ ತೆಗೆದುಕೊಳ್ಳತಕ್ಕಂಥ ಪರಿಸ್ಥಿತಿ ನಿರ್ಮಾಣ ನಿರ್ಮಾಣವಾಗುತ್ತದೆ. ಕಾನೂನು ಸುವ್ಯವಸ್ಥೆ ಕಾಪಾಡುವುದು ಬಹಳ ಕಷ್ಟವಾಗುತ್ತದೆ. ಜನರು Supreme Court ordersನ consequencesಗಳನ್ನು ಅಷ್ಟರ ಮಟ್ಟಿಗೆ ಅರ್ಥ ಮಾಡಿಕೊಳ್ಳುವ ಮಟ್ಟಿಗೆ ಇಲ್ಲ. ನಮಗೆ ಅನ್ಯಾಯವಾಗಿದೆ, ನೀರು ಇಲ್ಲ, ನಮ್ಮ ಬೆಳೆ ಒಣಗಿ ಹೋಗುತ್ತಿವೆ, ನಮಗೆ ಕುಡಿಯುವುದಕ್ಕೆ ನೀರು ಇಲ್ಲ, ನಮ್ಮ ಜಾನುವಾರುಗಳಿಗೆ ನೀರು ಇಲ್ಲ ಎನ್ನುವುದೇ ಅವರಿಗೆ ಬಹಳ ಮುಖ್ಯವಾದಂಥ ವಿಚಾರವಾಗುತ್ತದೆ. ಆ ದೃಷ್ಟಿಯಿಂದ ನಾನು ನಿಮಗೆ ಹೇಳುವುದೇನೆಂದರೆ, ಹೇಗೂ ನಾಳೆ CMC ಮೀಟಿಂಗ್ ಇದೆ, ನಮ್ಮ Chief Secretary, Irrigation Departmentನ technical staff ಮತ್ತು ಬೇರೆ ಅಧಿಕಾರಿಗಳೆಲ್ಲ ಹೋಗುತ್ತಾರೆ. ನಮ್ಮ ಹತ್ತಿರ ನೀರಿಲ್ಲ, ನಾವು ನೀರು ಬಿಡುವುದಿಲ್ಲವೆಂದು ಸ್ಪಷ್ಟವಾಗಿ ಹೇಳಬೇಕು. ಅವರು ಒಂದು ಬಾರಿ ಬಂದು ನೋಡಿಕೊಂಡು ಹೋಗಿದ್ದಾರೆ. ಈಗ ಅವರಿಗೆ ಅರಿವಾಗಿದೆ. ಒಂದು team ಬಂದಿತ್ತು. ಅವರಿಗೆ ಸ್ಪಷ್ಟವಾಗಿ ಗೊತ್ತಾಗಿದೆ. ಇಲ್ಲಿ ನೀರಿಲ್ಲ, ನಿಂತಿರತಕ್ಕಂಥ ಬೆಳೆಗೇ ನೀರಿಲ್ಲ, ಕುಡಿಯುವುದಕ್ಕೆ ನೀರಿಲ್ಲ ಎನ್ನತಕ್ಕಂಥದ್ದು ಅವರಿಗೆ ಸ್ಪಷ್ಟವಾಗಿ ಗೊತ್ತಾಗಿದೆ. ಇದು ground reality ಇದೆ, ನೀರು ಕೊಡುವುದಕ್ಕಾಗುವುದಿಲ್ಲ, ನೀವು ತೀರ್ಮಾನ ಮಾಡಬೇಕೆಂದು ಎಂದು ಅವರಿಗೆ ನಾಳೆ ಸ್ಪಷ್ಟವಾಗಿ ಹೇಳಬೇಕು. ನೀರಿಲ್ಲ ಕೊಡಬಾರದು ಎನ್ನುವುದಕ್ಕಿಂತ, ನೀರಿಲ್ಲ ಆದ್ದರಿಂದ ನಾವು ನೀರು ಕೊಡುವುದಕ್ಕೆ ಅಸಮರ್ಥರು ಎಂದು ಹೇಳಬೇಕು. We are not in a position to release.

ಈ ಸಾರಿ ಆ ರೀತಿಯಾದ ಒಂದು ಕೆಟ್ಟ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಆದ್ದರಿಂದ ನೀರು ಕೊಡುವುದಕ್ಕೆ ಆಗುವುದಿಲ್ಲವೆಂದು ಬಹಳ ಸ್ಪಷ್ಟವಾಗಿ ಹೇಳಬೇಕು. ಈ ಸಂದರ್ಭದಲ್ಲಿ ನಾನು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ದಯಮಾಡಿ ಯಾವುದೇ ಕಾರಣಕ್ಕೂ ನೀರು ಬಿಡಬೇಡಿ. ತಾವು ಹೇಗೆ ಮಾಡುತ್ತಿರೋ ಗೊತ್ತಿಲ್ಲ. ಈಗ ತಮಿಳುನಾಡಿನಲ್ಲಿ ಸ್ವಲ್ಪ ಮಳೆ ಬಿದ್ದಿದೆ. ಮೆಟ್ಟೂರು ಡ್ಯಾಂನಲ್ಲಿ ನೀರು ಸ್ವಲ್ಪ ಜಾಸ್ತಿಯಾಗಿದೆ. ಅವರ ಬೆಳೆಗೆ ಈಗ ನೀರು ಬೇಕಾಗಿಲ್ಲ. ಮತ್ತೆ ಅವರಿಗೆ ಸುಮಾರು 35 ಟಿಎಂಸಿ ಸಿಗುತ್ತದೆಂದು ಹೇಳಿದ್ದಾರೆ. ಇವತ್ತಿನವರೆಗೆ they have not exploited the underground water, whereas in Karnataka, underground water ಅನ್ನು ಈಗಾಗಲೇ exploit ಮಾಡಿಬಿಟ್ಟಿದ್ದೇವೆ. 1000, 1200, 1500 ಅಡಿ ಅಗೆದರೆ ನೀರು ಸಿಗುತ್ತದೆ. ಆದರೆ, ತಮಿಳುನಾಡಿನಲ್ಲಿ 20 ರಿಂದ 30 ಅಡಿ ತೋಡಿದರೆ ಅವರಿಗೆ ನೀರು ಸಿಗುತ್ತದೆ. they can utilize the underground water ಆದರೆ, ಸುಪ್ರೀಂ ಕೋರ್ಟ್‌ನವರು ಅದನ್ನು ಸಹ ಹೇಳಬೇಕಾಗಿತ್ತೆಂಬುದು ನನ್ನ ಅನಿಸಿಕೆ. ಹಾಗೆಯೇ underground water ಅನ್ನು ಉಪಯೋಗಿಸಿಕೊಳ್ಳಿ ಎಂದು ಸಿಎಂಸಿ ರವರು ಕೂಡ ಹೇಳಬೇಕಾಗುತ್ತದೆ. ಈ ವಾದವನ್ನು ಸಹ ಬಲವಾಗಿ ಮಂಡಿಸಬೇಕೆಂಬುದು ನನ್ನ ಒತ್ತಾಯ. ನಿಮ್ಮ ಹತ್ತಿರ underground water ಇರುವುದರಿಂದ ನಿಮಗೆ ನೀರು ಕಡಿಮೆ ಆದರೆ underground water ಅನ್ನು ಉಪಯೋಗಿಸಿಕೊಳ್ಳಿ. ನಮ್ಮ ಹತ್ತಿರ underground water ಇದ್ದರೆ ನಾವು ಬಳಸಿಕೊಳ್ಳುತ್ತಿದ್ದೇವು. ಆದರೆ, ನಮ್ಮಲ್ಲಿ ಇಲ್ಲ. ಇದನ್ನು ಬಹಳ ಸ್ಪಷ್ಟವಾಗಿ ಸಿಎಂಸಿ ಮುಂದೆ ಹೇಳಬೇಕು. ಮಾನ್ಯ ಮುಖ್ಯ ಮಂತ್ರಿಯವರ ಇವತ್ತಿನ ಹೇಳಿಕೆಯಲ್ಲಿ ನೀರು ಬಿಡುತ್ತೇವೆ ಅಥವಾ ಬಿಡುವುದಿಲ್ಲವೆಂದು ಬಹಳ ಸ್ಪಷ್ಟವಾಗಿ ಏನನ್ನು ಸಹ ಹೇಳಿಲ್ಲ. ಅಡ್ಡಗೋಡೆಯ ಮೇಲೆ ದೀಪ ಇಟ್ಟ ರೀತಿಯಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಆದ್ದರಿಂದ ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುವುದೇನೆಂದರೆ, ನಾವು ಕಷ್ಟದಲ್ಲಿರುವುದರಿಂದ ನೀರು ಬಿಡುವುದಿಲ್ಲವೆಂದು ಮತ್ತೆ ನಮ್ಮ ಹತ್ತಿರ ಕುಡಿಯುವುದಕ್ಕೆ ನೀರು ಇಲ್ಲವೆಂದು ಹಾಗೂ ಮೇ ಮತ್ತು ಜೂನ್ ತಿಂಗಳವರೆಗೆ ಕುಡಿಯುವುದಕ್ಕಾಗಿ ನೀರನ್ನು ಇಟ್ಟುಕೊಳ್ಳಬೇಕಾಗುತ್ತದೆ. ಬೆಂಗಳೂರು ನಗರದಲ್ಲಿ 80 ಲಕ್ಷ ಜನ ಮೈಸೂರಿನಲ್ಲಿ 10 ಲಕ್ಷ ಜನ ಹಾಗೂ ಮಂಡ್ಯದಲ್ಲಿರುವ ಜನರು ಕುಡಿಯುವ ನೀರಿಗೆ ಏನು ಮಾಡಬೇಕು? ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿರುವ ಜನರಿಗೆ ಕುಡಿಯುವುದಕ್ಕೆ ನೀರು ಇಲ್ಲದೆ ಹೋದರೆ ನಾವು ಎಂತಹ ಕೆಟ್ಟ ಪರಿಸ್ಥಿತಿಗೆ ಹೋಗುತ್ತೇವೆಂಬುದನ್ನು ನಾವು ಅರ್ಥ

ಮಾಡಿಕೊಳ್ಳಬೇಕಾಗುತ್ತದೆ. ಸುಪ್ರೀಂ ಕೋರ್ಟ್ ಬಗ್ಗೆ ಮತ್ತು ನ್ಯಾಯಾಲಯದ ಆದೇಶದ ಬಗ್ಗೆ ನನಗೆ ಬಹಳ ಗೌರವ ಇದೆ. ನಾನು ಕಷ್ಟದಲ್ಲಿರುವುದರಿಂದ ಇದನ್ನು ಪಾಲನೆ ಮಾಡುವುದಕ್ಕೆ ಆಗುವುದಿಲ್ಲ ಮತ್ತೆ ನೀರನ್ನು ಕೊಡುವುದಕ್ಕೆ ಆಗುವುದಿಲ್ಲವೆಂದು ಬಹಳ ಸ್ಪಷ್ಟವಾಗಿ ಹೇಳಬೇಕು. ಹಾಗೆಯೇ ರಾಜ್ಯ ಸರ್ಕಾರ ಕೂಡ ಧೈರ್ಯ ಮಾಡಿ ಆ ನಿಲುವನ್ನು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುತ್ತೇನೆ. ಮತ್ತೆ ನಿಮ್ಮ ಹೇಳಿಕೆಯಿಂದ ನಮಗೇನು ಸಮಾಧಾನವಾಗಿಲ್ಲ ಮತ್ತೆ ಈ ರಾಜ್ಯದ ಜನರಿಗೆ ಸಮಾಧಾನವಾಗಿಲ್ಲ ಹಾಗೆಯೇ ನಿಮ್ಮ ಮೇಲೆ ನಂಬಿಕೆ ಬರುವುದಿಲ್ಲ. ಆದುದರಿಂದ ಮಾನ್ಯ ಮುಖ್ಯ ಮಂತ್ರಿಗಳು ಬಹಳ ಸ್ಪಷ್ಟವಾಗಿ ಇದರ ಬಗ್ಗೆ ಹೇಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ):– ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳ ಗಮನಕ್ಕೆ ಈಗಾಗಲೇ ಈ ವಿಷಯವನ್ನು ತಂದಿದ್ದೇವೆ. ಕಳೆದ ನಾಲ್ಕು ವರ್ಷಗಳಿಂದ ಕಾವೇರಿ ಬೇಸಿನ್‌ನ ರೈತರು ಒಂದು ಕಡೆ ಬರಗಾಲ ಎದುರಿಸುವಂಥ ಪರಿಸ್ಥಿತಿ ಇದೆ. ಮತ್ತೆ ರಾಜ್ಯ ಸರ್ಕಾರ ಕಾವೇರಿ ಬೇಸಿನ್‌ನ 48 ತಾಲ್ಲೂಕುಗಳನ್ನು ಈಗಾಗಲೇ ಬರಗಾಲ ಎಂದು ಘೋಷಣೆ ಮಾಡಿದೆ. ಕಾವೇರಿ ಬೇಸಿನ್‌ಗೆ ಸಂಬಂಧಪಟ್ಟಂತೆ ಸನ್ಮಾನ್ಯ ಮುಖ್ಯ ಮಂತ್ರಿಗಳು ಈಗ ಸದನಕ್ಕೆ ಒಂದು ಹೇಳಿಕೆಯನ್ನು ನೀಡಿದ್ದಾರೆ. ಅದರಲ್ಲಿ 1924 ರಿಂದ ಇಲ್ಲಿಯವರೆಗೆ ನಡೆದಂಥ ಘಟನಾವಳಿಗಳೆಲ್ಲವನ್ನು ತಿಳಿಸಿದ್ದಾರೆ. ಆದರೆ, ನಮ್ಮ ರಾಜ್ಯದ ಕಾವೇರಿ ಬೇಸಿನ್‌ನಲ್ಲಿ ಬರುವ ಕೆಆರ್‌ಎಸ್ ಇರಬಹುದು, ಕಬಿನಿ ಮತ್ತು ಹಾರಂಗಿ ಡ್ಯಾಂನಲ್ಲಿ ಹಾಗೂ ಹೇಮಾವತಿ ಡ್ಯಾಂನಲ್ಲಿ ಅಂದರೆ ಒಟ್ಟು ನಾಲ್ಕು ಡ್ಯಾಂನಿಂದ ಸುಮಾರು 33 ಟಿಎಂಸಿ ನೀರು ಇದೆ ಎಂದು ಸಹ ಹೇಳಿದ್ದೀರಿ. ಈ 33 ಟಿಎಂಸಿ ನೀರಿನಲ್ಲಿ ಕುಡಿಯುವ ನೀರಿಗೆ ಎಷ್ಟು ಹೋಗುತ್ತದೆ ಎಂದು ಹೇಳಬೇಕು. ಮತ್ತೆ ಕೆ.ಆರ್.ಎಸ್. ಡ್ಯಾಂನ ಕೆಳಗಿನ ಅಚ್ಚುಕಟ್ಟು ಪ್ರದೇಶದಲ್ಲಿ 1.95 ಲಕ್ಷ ಎಕರೆ ಭೂಮಿ ಇದೆ. ಇಲ್ಲಿ ಕಬ್ಬು, ಭತ್ತ ಬೆಳೆ ಬೆಳೆದು ನಿಂತಿದೆ. ಅದೇ ರೀತಿಯಲ್ಲಿ ಕಬಿನಿಯಲ್ಲಿ ಸುಮಾರು 1.20 ಲಕ್ಷ ಎಕರೆ ಮತ್ತು ಹಾರಂಗಿ ಜಲಾಶಯದ ಕೆಳ ಭಾಗದಲ್ಲಿ ಸುಮಾರು 60 ಸಾವಿರ ಎಕರೆ ಮತ್ತು ಹೇಮಾವತಿ ಅಚ್ಚುಕಟ್ಟು ಪ್ರದೇಶದ ಸುಮಾರು 5 ಸಾವಿರ ಎಕರೆ ಜಮೀನಿನಲ್ಲಿ ಭತ್ತದ ಬೆಳೆ ಈಗಾಗಲೇ ಒಡೆಯಾಗಿದ್ದು, ಇನ್ನು 15–20 ದಿವಸದಲ್ಲಿ ಬೆಳೆ ಬರುವಂಥ ಸನ್ನಿವೇಶ ಇದೆ. ನೀವೇನಾದರು ಇನ್ನು 15–20 ದಿವಸ ನೀರನ್ನು ಕೊಡದೆ ಇದ್ದರೆ 7 ಲಕ್ಷ ಎಕರೆ ಪ್ರದೇಶದಲ್ಲಿ ಬೆಳೆದಿರುವ ಬೆಳೆ ಸಂಪೂರ್ಣವಾಗಿ ನಾಶವಾಗುತ್ತದೆ. ಇವತ್ತಿನ ದಿವಸ

ರೈತರು ಬಹಳ ಕಷ್ಟಪಟ್ಟು ಒಂದಕ್ಕೆ ನಾಲ್ಕು ಪಟ್ಟು ಹಣ ಕೊಟ್ಟು ಗೊಬ್ಬರ ತಂದು ಹಾಕಿ ಅಲ್ಲಿ ವ್ಯವಸಾಯ ಮಾಡಿದ್ದಾರೆ. ಇವತ್ತಿನ ದಿವಸ ವ್ಯವಸಾಯದ ಪರಿಸ್ಥಿತಿ ಹೇಗಿದೆ ಎಂಬುದು ನಮಗೆ ಗೊತ್ತಿದೆ. ವ್ಯವಸಾಯ ಮಾಡುವುದಕ್ಕೆ ಆಗದೆ ಕೆಲವರು ಊರು ಬಿಡುವಂಥ ಪರಿಸ್ಥಿತಿ ಬಂದಿದೆ. ಮಾನ್ಯ ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿ ನಮ್ಮ ನಿಲುವನ್ನು ತಿಳಿಸುತ್ತೇವೆಂಬ ಭಾವನೆಯನ್ನು ವ್ಯಕ್ತ ಮಾಡಿದ್ದೀರಿ. ಸುಪ್ರೀಂ ಕೋರ್ಟ್ ಬಗ್ಗೆ ನಮಗೆ ಗೌರವ ಇದೆ. ಸುಪ್ರೀಂ ಕೋರ್ಟ್‌ನ ಆದೇಶವನ್ನು ತಳ್ಳಿ ಹಾಕಿ ಎಂದು ನಾವು ಹೇಳುವುದಿಲ್ಲ. ಆದರೆ, ವಸ್ತುಸ್ಥಿತಿ ಏನಿದೆ ಎಂಬುದನ್ನು ಕೇಂದ್ರ ಸರ್ಕಾರ ಮತ್ತು ಸುಪ್ರೀಂ ಕೋರ್ಟ್‌ಗೆ ತಿಳಿಸಬೇಕಾಗುತ್ತದೆ. ಸಿಆರ್‌ಎ ಮತ್ತು ಸಿಎಂಸಿ ಮುಂದೆ ಒಂದು ನಿರ್ಣಯ ಮಾಡಬೇಕು. ಹಾಗೆಯೇ 6 ಅಥವಾ 7ನೇ ತಾರೀಖಿನೊಳಗೆ ಸುಪ್ರೀಂ ಕೋರ್ಟ್‌ಗೆ ತಿಳಿಸಬೇಕಾಗುತ್ತದೆ. ಅಲ್ಲಿಯವರೆಗೆ ತಾವು ಯಾವುದೇ ಕಾರಣಕ್ಕೂ ನೀರನ್ನು ಬಿಡಬಾರದು. ಅಲ್ಲಿಯವರೆಗೆ ನೀರು ಬಿಡದೆ ಸಿಆರ್‌ಎ ಮತ್ತು ಸಿಎಂಸಿ ಮುಂದೆ ಸಂಪೂರ್ಣವಾಗಿ ರಾಜ್ಯದ ಪರಿಸ್ಥತಿಯನ್ನು ತಿಳಿಸಬೇಕೆಂದು ಸನ್ಮಾನ್ಯ ಮುಖ್ಯ ಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ. ನಾಳೆ ದಿವಸ ಆ ಭಾಗದ ಲೋಕಸಭಾ ಸದಸ್ಯರನ್ನು ಕರೆದುಕೊಂಡು ಹೋಗುತ್ತೇನೆಂಬ ಭಾವನೆಯನ್ನು ವ್ಯಕ್ತಪಡಿಸಿದ್ದೀರಿ. ಮಾನ್ಯ ಪ್ರಧಾನ ಮಂತ್ರಿಯವರನ್ನು ಒತ್ತಾಯ ಮಾಡುವುದಕ್ಕೆ ಈ ಸದನ ಒಕ್ಕೊರಲಿನ ಒಂದು ನಿರ್ಣಯ ಮಾಡಬೇಕು. ನಿನ್ನೆ ದಿವಸ ಮಾನ್ಯ ಮುಖ್ಯ ಮಂತ್ರಿಯವರು ಒಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಅದೇನೆಂದರೆ, ಯಾವುದೇ ಕಾರಣಕ್ಕೂ ನಾವು ನೀರು ಬಿಡುವುದಿಲ್ಲ, ರಾಜ್ಯದಲ್ಲಿರುವ ಜನರ ಹಿತ ಕಾಪಾಡುತ್ತೇವೆಂಬ ಭಾವನೆಯನ್ನು ಸನ್ಮಾನ್ಯ ಮುಖ್ಯ ಮಂತ್ರಿಯವರು ಈ ಸದನದಲ್ಲಿ ವ್ಯಕ್ತಪಡಿಸಿದ್ದಾರೆ. ಆದರೆ, ಇವತ್ತು ಅವರು ಒಂದು ಹೇಳಿಕೆಯನ್ನು ಕೊಡುವಾಗ ಮಾನ್ಯ ಪ್ರಧಾನ ಮಂತ್ರಿಯವರ ಹತ್ತಿರ ಹೋಗಿ ನಮ್ಮ ರಾಜ್ಯದ ರೈತರ ಪರಿಸ್ಥಿತಿ ಬಗ್ಗೆ ಪಕ್ಷಾತೀತವಾಗಿ ಒತ್ತಾಯ ಮಾಡಬೇಕಾಗುತ್ತದೆ, ನಮ್ಮ ರೈತಾಪಿ ಜನರ ಪರಿಸ್ಥಿತಿ ಏನಿದೆ ಎಂಬುದನ್ನು ತಿಳಿಸಬೇಕಾಗುತ್ತದೆ. ಇಲ್ಲಿ ರಾಜಕೀಯ ಮಾಡುವುದು ಬೇಡ, ಇವತ್ತಿನ ದಿವಸ ಕೇಂದ್ರ ಸರ್ಕಾರ ಇದರಲ್ಲಿ interfere ಆಗಬೇಕಾಗಿತ್ತು. ಇವತ್ತಿನ ದಿವಸ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಾಳಾಗಿ ಹೋಗುವಂಥ ಪರಿಸ್ಥಿತಿ ಇದೆ. ಮೈಸೂರು, ಮಂಡ್ಯ, ತುಮಕೂರು ಜಿಲ್ಲೆಯಲ್ಲಿನ 48 ತಾಲ್ಲೂಕುಗಳನ್ನು ಬರಗಾಲ ಎಂದು ಘೋಷಣೆ ಮಾಡಲಾಗಿದೆ. ಇವತ್ತು ಲಕ್ಷಾಂತರ ಎಕರೆಯಲ್ಲಿ ಬೆಳೆ ಇದೆ. ಸಮರ್ಪಕವಾಗಿ ಒಂದು ತಿಂಗಳವರೆಗೆ ಈ ಬೆಳೆಗೆ ನೀರು ಬಿಡದೆ ಇದ್ದರೆ ಬೆಳೆದಿರುವ ಬೆಳೆ ಸಂಪೂರ್ಣವಾಗಿ ನಾಶವಾಗುತ್ತದೆ.

ಆದ್ದರಿಂದ, ಈ ಬಗ್ಗೆ ನೀವು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿ ಕೊಡಬೇಕಾಗುತ್ತದೆ. ಅಂದರೆ, ಇವತ್ತಿನ ದಿವಸ ಕಾನೂನು ಸುವ್ಯವಸ್ಥೆ ಹಾಳಾಗುತ್ತಿದೆ, ಆದ್ದರಿಂದ, ನೀವು interfere ಆಗಬೇಕೆಂದು ಕೇಂದ್ರ ಸರ್ಕಾರಕ್ಕೆ ಹೇಳಬೇಕಾಗುತ್ತದೆ. ಪಕ್ಕದ ರಾಜ್ಯದವರಿಗೆ ತೊಂದರೆ ಕೊಡಬೇಕೆಂಬುದು ನಮ್ಮ ಉದ್ದೇಶವಲ್ಲ. ಆ ರಾಜ್ಯದ ಪರಿಸ್ಥಿತಿ ಮತ್ತು ನಮ್ಮ ರಾಜ್ಯದ ಪರಿಸ್ಥಿತಿ ಏನಿದೆ ಎಂಬುದನ್ನು ತಿಳಿಸಬೇಕು. ಈಗಾಗಲೇ ಕೇಂದ್ರ ಸರ್ಕಾರ ಒಂದು ಟೀಮ್ ಕಳುಹಿಸಿದ್ದರು. ಆ ಟೀಮ್ ಕೊಟ್ಟಿರುವ ವರದಿ ಸಹ ಇದೆ. ಆ ಟೀಮ್‌ನವರು ನೀಡಿರುವ ವರದಿಯಲ್ಲಿ ಏನಿದೆ ಎಂಬುದನ್ನು ದಯಮಾಡಿ ತಿಳಿಸಿ. ರಾಜ್ಯದಲ್ಲಿ ಕೆಟ್ಟ ಪರಿಸ್ಥಿತಿ ಇದೆ ಎಂದು ಕೇಂದ್ರ ಸರ್ಕಾರದ ಟೀಮ್ ಹೇಳಿರುವಾಗ ನಾವು ಅದನ್ನು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಬೇಕಾಗುತ್ತದೆ. ತಾವು ಸುಪ್ರೀಂ ಕೋರ್ಟ್ ಮುಂದೆ ಮನವರಿಕೆ ಮಾಡದಿದ್ದರೆ ನಮ್ಮ ರಾಜ್ಯದ ಜನತೆಗೆ ಮರಣಶಾಸನ ಬರೆದಂತೆ ಅಗುತ್ತದೆ, ಕಳೆದ ನಾಲ್ಕು ವರ್ಷಗಳಿಂದ ಮಳೆ ಇಲ್ಲ. ಆದ್ದರಿಂದ ಆ ಭಾಗದ ಕೆಲವು ಜಿಲ್ಲೆಗಳ 49 ತಾಲ್ಲೂಕುಗಳಲ್ಲಿ ಬರಗಾಲ ಇದೆ ಎಂದು ಘೋಷಣೆ ಮಾಡಿದ್ದೀರಿ. ನಮ್ಮ ರಾಜ್ಯದ ಪರಿಸ್ಥಿತಿಯನ್ನು ಮಾನ್ಯ ಪ್ರಧಾನ ಮಂತ್ರಿಗಳಿಗೆ ಹೇಳುವುದಕ್ಕೋಸ್ಕರ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಕರೆದುಕೊಂಡು ಹೋಗಬೇಕಾಗುತ್ತದೆ. ಇದರಲ್ಲಿ ರಾಜಕೀಯ ಮಾಡುವುದು ಬೇಡ. ಅವರಲ್ಲಿ ಮನವರಿಕೆ ಮಾಡಿ ಒಂದು ಟೀಮ್ ಅನ್ನು ಇಲ್ಲಿಗೆ ಕಳುಹಿಸಿ ಈ ರಾಜ್ಯದಲ್ಲಿ ಪರಿಸ್ಥಿತಿ ಯಾವ ರೀತಿ ಇದೆ ಎಂಬುದನ್ನು ಹೇಳಲಿ. ಆನಂತರ ಅವರಿಗೆ ಮನವರಿಕೆ ಆಗದೆ ಇದ್ದರೆ ಅವರು ಏನು ಬೇಕಾದರೂ ಕ್ರಮ ತೆಗೆದುಕೊಳ್ಳಲಿ. ಅಲ್ಲಿಯವರೆಗೆ ನೀರು ಬಿಡಬಾರದು. ತಾವು ಒಂದು ನಿರ್ಣಯಮಾಡಿ ಅಡ್ಡ ಗೋಡೆಯ ಮೇಲೆ ದೀಪ ಇಡುವುದು ಬೇಡ. ಏಕೆಂದರೆ, ಇವತ್ತು ಸದನದಲ್ಲಿ ಈ ವಿಚಾರದ ಬಗ್ಗೆ ಏನಾಗುತ್ತೋ ಏನೋ ಎಂದು ಮತ್ತೆ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಎಲ್ಲ ಪಕ್ಷದ ಮುಖಂಡರೂ ಸೇರಿ ಈ ಸದನದಲ್ಲಿ ಒಂದು ನಿರ್ಣಯ ಮಾಡುತ್ತಾರೆ ಎನ್ನುವ ಭಾವನೆಯಿಂದ ಮಂಡ್ಯ ಜಿಲ್ಲೆಯ ರೈತರು ಕಾಯುತ್ತಿದ್ದಾರೆ. ಆದ್ದರಿಂದ, ಈ ಸದನ ಮೂಲಕ ಈ ರಾಜ್ಯದ ಜನತೆಗೆ ಹಾಗೂ ಆ ಭಾಗದ ಜನರಿಗೆ ಒಂದು ಸಂದೇಶ ಹೋಗಬೇಕಾಗುತ್ತದೆ. ಇದನ್ನು ಪಕ್ಷಾತೀತವಾಗಿ ಮಾಡೋಣ. ಇದರಲ್ಲಿ ರಾಜಕೀಯ ಮಾಡುವುದು ಬೇಡ. ಕೆಳಮನೆ, ಮೇಲ್ಮನೆ ವಿರೋಧಪಕ್ಷದ ನಾಯಕರು ಎಲ್ಲ ಮುಖಂಡರನ್ನು ಮಾನ್ಯ ಪ್ರಧಾನ ಮಂತ್ರಿಯವರ ಹತ್ತಿರ ಕರೆದುಕೊಂಡು ಹೋಗಿ ಈ ರಾಜ್ಯದ ಪರಿಸ್ಥಿತಿಯ ಬಗ್ಗೆ ಒತ್ತಾಯ ಮಾಡಬೇಕಾಗುತ್ತದೆ. ಇದರಲ್ಲಿ ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಬೇಕಾಗುತ್ತದೆ.

ಕೇಂದ್ರದವರು ಕಳುಹಿಸಿದ ಟೀಮ್‌ನವರು ಈ ರಾಜ್ಯದ ಪರಿಸ್ಥಿತಿಯನ್ನು ಸಿಎಂಸಿ ಮುಂದೆ ಹೇಳಿದ್ದಾರೆ. ಈ ಎಲ್ಲ ಅಂಶಗಳನ್ನು ಇಟ್ಟುಕೊಂಡು ಅವರಿಗೆ ಮನವರಿಕೆ ಮಾಡಿಕೊಡಬೇಕು. ಯಾವುದೇ ಕಾರಣಕ್ಕೂ ನೀರು ಬಿಡಬಾರದು ನಾಳೆ ದಿವಸ ಕೇವಲ ನಾಮಕಾವಸ್ಥೆಗೆ ನೀವು ಹೋಗಿ ಬರುವುದಲ್ಲ. ಎಲ್ಲ ವಿರೋಧಪಕ್ಷದ ನಾಯಕರನ್ನು ಕರೆದುಕೊಂಡು ಹೋಗಿ ಮಾನ್ಯ ಪ್ರಧಾನ ಮಂತ್ರಿಗಳ ಮುಂದೆ ಒತ್ತಾಯ ಮಾಡಿ ಹೇಳಬೇಕಾಗುತ್ತದೆ, ಕೇಂದ್ರ ಸರ್ಕಾರದಲ್ಲಿ ನಮ್ಮ ರಾಜ್ಯದ 6 ಜನ ಮಂತ್ರಿಗಳಾಗಿದ್ದಾರೆ. ನಮ್ಮ ರಾಜ್ಯವನ್ನು ಪ್ರತಿನಿಧಿಸುತ್ತಿರುವ ಮಂತ್ರಿಗಳನ್ನೂ ಸಹ ಕರೆದುಕೊಂಡು ಹೋಗಬೇಕಾಗುತ್ತದೆ. ಬೇಕಾದರೆ ಕೇಂದ್ರ ಸರ್ಕಾರ ತಮಿಳುನಾಡು ಮತ್ತು ನಮ್ಮ ರಾಜ್ಯದ ಮಂತ್ರಿಗಳ ಒಂದು ಟೀಮ್ ಮಾಡಿ ಕಳುಹಿಸಿಕೊಡಲಿ. ಅವರು ಈ ಭಾಗದ ರೈತರ ಪರಿಸ್ಥಿತಿ ಏನಿದೆ ಎಂದು ಅರಿಯಲಿ. ಒಂದು ವೇಳೆ ಹೆಚ್ಚಿಗೆ ನೀರಿದ್ದರೆ ಅವರು ತೆಗೆದುಕೊಂಡು ಹೋಗಲಿ. ನಾವೇನೂ ಬೇಡವೆಂದು ಹೇಳುವುದಿಲ್ಲ. ನಮಗೆ ಬೇಕಾಗಿರುವುದು ಏನೆಂದರೆ, ಕುಡಿಯುವ ನೀರು ಮತ್ತು ಈಗಿರತಕ್ಕಂತಹ ಬೆಳೆಯನ್ನು ಉಳಿಸಲು ಬೇಕಾಗಿರುವಷ್ಟು ನೀರು ಇವೆರಡಕ್ಕೂ ಸರ್ಕಾರ ಬದ್ಧವಾಗಿರಬೇಕಾಗುತ್ತದೆ. ಯಾವುದೇ ಹೋರಾಟಕ್ಕೆ ಬೇಕಾದರೂ ನಾವು ನಿಮ್ಮ ಜೊತೆ ಇರುತ್ತೇವೆ. ಈ ಬಗ್ಗೆ ನೀವು ಇವತ್ತು ಸ್ಪಷ್ಟವಾಗಿ ತಿಳಿಸಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ತಿರಾ): ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಎಲ್ಲಾ ವಿಚಾರಗಳನ್ನು ಕೂಡ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಕಳೆದ 200 ವರ್ಷಗಳಿಂದ ಕಾವೇರಿ ವಿಚಾರ ಹೇಗೆ ನಡೆದುಕೊಂಡು ಬಂತು ಎಂದು ಎಲ್ಲವನ್ನು ಕೂಡ ವಾಸ್ತವವಾದ ಸಂಗತಿಯನ್ನು ಇವತ್ತು ಇಟ್ಟಿದ್ದಾರೆ. ಅದರ ಜೊತೆಯಲ್ಲಿ ಏನು ಪ್ರಯತ್ನ ಮಾಡಬೇಕು. ಸರ್ವೋಚ್ಚ ನ್ಯಾಯಾಲಯದ ತೀರ್ಪು ಬಂದ ಹಿನ್ನೆಲೆಯಲ್ಲಿ ಏನು ಮಾಡಬೇಕು ಎನ್ನತಕ್ಕಂಥದ್ದು ಕೂಡ ಅವರು ಹೇಳಿದ್ದಾರೆ. ಪ್ರಾಮಾಣಿಕವಾಗಿ ಆ ಪ್ರಯತ್ನ ಮಾಡುತ್ತಾರೆನ್ನುವ ವಿಶ್ವಾಸವನ್ನು ನಾನು ಹೊಂದಿದ್ದೇನೆ. ಈ ಸರ್ವೋಚ್ಚ ನ್ಯಾಯಾಲಯದ ತೀರ್ಪು ಬರುವ ಸಂದರ್ಭದಲ್ಲಿ ಕರ್ನಾಟಕದಲ್ಲಿ ವಿಧಾನ ಸಭೆ ನಡೆಯುತ್ತಿದೆ. ಕರ್ನಾಟಕ ವಿಧಾನಸಭೆಯಲ್ಲಿ ನಿನ್ನೆಯಿಂದ ಇಲ್ಲಿವರೆಗೂ ಕೂಡ ಸುಮಾರು 24 ಗಂಟೆಗಳ ಕಾಲ ಈ ಮನೆಯ ಎಲ್ಲಾ ಸದಸ್ಯರು ಕೂಡ ಕಾವೇರಿ ಜಲಾನಯನ ಪ್ರದೇಶದಲ್ಲಿ ಬರತಕ್ಕಂಥ ಬರಗಾಲಕ್ಕೆ ತುತ್ತಾದ ಪ್ರದೇಶಗಳಲ್ಲಿ ಪ್ರದೇಶಗಳಾದ ಜನ ಜಾನುವಾರುಗಳು

ಮತ್ತು ಬೆಳೆಗಳ ಪರಿಸ್ಥಿತಿಯನ್ನು ಹೇಳತಕ್ಕಂಥದ್ದರ ಬಗ್ಗೆ ಚರ್ಚೆಯಲ್ಲಿ ವ್ಯಕ್ತಪಡಿಸತಕ್ಕಂಥದ್ದು ವಾಸ್ತವವಾಗಿರತಕ್ಕಂಥದ್ದು ಒಂದು ಸಂಗತಿ. ನಾವು ಈ ದೇಶದ ಒಕ್ಕೂಟದ ವ್ಯವಸ್ಥೆಯಲ್ಲಿ ನಮ್ಮ ದೇಶ ಪ್ರಜಾಪ್ರಭುತ್ವವಾದ ದೇಶ. ಈ ಒಕ್ಕೂಟದ ವ್ಯವಸ್ಥೆಯಲ್ಲಿ ನೇರೆ ರಾಜ್ಯವಾಗಿರತಕ್ಕಂಥ ತಮಿಳುನಾಡು ಏಕೆ ಇದನ್ನು ಅರ್ಥ ಮಾಡಿಕೊಳ್ಳಲಿಲ್ಲ? ಅವರು ಅರ್ಥ ಮಾಡಿಕೊಳ್ಳುವುದಕ್ಕೆ ಬೇರೆ ಯಾವುದಾದರೂ ಪರ್ಯಾಯವಾದ ಮಾರ್ಗವನ್ನು ಕಂಡು ಹಿಡಿಯಬೇಕಾಗುತ್ತದೆ. ಕಾವೇರಿ ಹುಟ್ಟುವುದು ನಿಮ್ಮ ಊರಿನಲ್ಲಿ ಹರಿಯುವಂಥದ್ದು ಕರ್ನಾಟಕದಲ್ಲಿ ತಲುಪುವುದು ತಮಿಳುನಾಡಿನಲ್ಲಿ, ಇವತ್ತು ತಮಿಳುನಾಡು ಕರ್ನಾಟಕಕ್ಕಿಂತ ಹೆಚ್ಚಾಗಿ ತಮಿಳುನಾಡಿನ ಭಾಗದ ರೈತರಿಗೆ ಇವೊತ್ತು ವರದಾನವಾಗಿದೆ. ಅದು ಏಕೆ ಎಂದರೆ ಅದಕ್ಕೆ ಇತಿಹಾಸದ ಕಾರಣ. ಇವತ್ತು ನಮ್ಮಲ್ಲಿ ಶೇಕಡ 55 ರಷ್ಟು ನೀರು ಕರ್ನಾಟಕದಲ್ಲಿ ಉತ್ಪತ್ತಿ ಆದರೂ ಕೂಡ ಬಳಕೆ ಆಗುತ್ತಿರುವುದು ಮಾತ್ರ ಬಹಳ ಕಡಿಮೆ. ಕಳೆದ 200 ವರ್ಷಗಳಿಂದ ಕರ್ನಾಟಕದಲ್ಲಿ ನೀರಿಗೋಸ್ಕರ ಕಾವೇರಿಯಿಂದ ಏನು ಅನ್ಯಾಯವಾಗಿದೆ ಎನ್ನತಕ್ಕಂಥ ವಾಸ್ತವ ಸಂಗತಿಯನ್ನು ಮುಖ್ಯಮಂತ್ರಿಗಳು ಬಿಚ್ಚಿಟ್ಟಿದ್ದಾರೆ. ಆದರೆ ಈಗ ವಾಸ್ತವಿಕತೆ ಏನೆ ಇರಲಿ. ಇತಿಹಾಸ ಏನೆ ಇರಲಿ, ಆದರೆ ಅದರ ವಸ್ತು ಸ್ಥಿತಿ ಏನು? ಈ ವರ್ಷದಲ್ಲಿ 18 ಟಿ.ಎಂ.ಸಿ ನೀರು ಮೆಟ್ಟೂರು ಜಲಾಶಯದಲ್ಲಿದೆ. ಅವರು ಸಾಂಬಾ ಬೆಳೆ ಬೆಳೆಯುವುದಕ್ಕೆ ಇನ್ನು ಒಂದೆರಡು ತಿಂಗಳು ಮುಂದೂಡುವುದಕ್ಕೆ ಅವಕಾಶವಿದೆ. ಮಳೆ ಬರುತ್ತಿದೆ, ನೀರು ಬರತಕ್ಕಂಥ ಅವಕಾಶ ಇದೆ. ಇದು ಇದ್ಯಾಗ್ಯೂ ಸರ್ವೋಚ್ಚ ನ್ಯಾಯಾಲಯದ ತೀರ್ಪು ಬಂದಿರುವಾಗ ಕೂಡ ಮಾನವೀಯತೆಯಿಂದ ಏಕೆ ಯೋಚನೆ ಮಾಡುತ್ತಿಲ್ಲ ಎನ್ನತಕ್ಕಂಥದನ್ನು ನನಗೆ ಅರ್ಥವಾಗದೆ ಇರತಕ್ಕಂಥ ಪ್ರಶ್ನೆ. ತಮಿಳುನಾಡಿನ ಮುಖ್ಯ ಮಂತ್ರಿಗಳು ಕೂಡ ಇವತ್ತು ಮೂಲ ಕರ್ನಾಟಕದವರು. ಕಾವೇರಿ ಹೇಗೆ ಕರ್ನಾಟಕದಲ್ಲಿ ಹುಟ್ಟಿತು? ಕು. ಜಯಲಲಿತಾರವರು ಹುಟ್ಟಿರುವುದು ಇಲ್ಲಿಯೆ. ಬೆಳೆದಿರುವುದು ಮೈಸೂರು ಜಲಾನಯನ ಪ್ರದೇಶದಲ್ಲಿ, ಅವರಿಗೆ ವಸ್ತುಸ್ಥಿತಿ ಗೊತ್ತಿದೆ. ಕರ್ನಾಟಕಕ್ಕೆ ಬಂದು ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಅವರು ತಮಿಳುನಾಡಿನ ಪರವಾಗಿ ಮನವಿಯನ್ನು ಅರ್ಪಿಸುವುದರ ಜೊತೆಗೆ ವಾಸ್ತವಿಕ ಸಂಗತಿಯನ್ನು ಅರಿತಿರುವಂಥ ಸಂದರ್ಭದಲ್ಲಿ ಇಂತಹ ಮೊಂಡುವಾದ ಏಕೆ ಮೊಂಡುತನಕ್ಕೆ ಕಡಿವಾಣ ಹಾಕುವುದಕ್ಕೆ ಸಾಧ್ಯವಿದೆಯಾ ಎನ್ನತಕ್ಕಂಥ ವಿಚಾರವನ್ನು ನೀವು ಯೋಚನೆ ಮಾಡಬೇಕು. ವಿಧಾನಸಭೆಯಲ್ಲಿ ಚರ್ಚೆ ಆಗುವಂಥ ಸಂದರ್ಭದಲ್ಲಿ ಅವರು ಅರ್ಥ ಮಾಡಿಕೊಳ್ಳಬೇಕು. ಕರ್ನಾಟಕದ ಜನರ ಕಷ್ಟ ಮತ್ತು ಸಂಕಷ್ಟಗಳು ಬಂದಾಗ ಅವುಗಳನ್ನು ಬಗೆಹರಿಸಬೇಕಾದಾಗ ನಾವು ಯಾವ ರೀತಿಯ ಮಾನವೀಯತೆಯನ್ನು

ತೋರಬೇಕು ಎನ್ನುವತಕ್ಕಂಥದನ್ನು ತಮಿಳುನಾಡಿನ ಜನರು ಅರ್ಥ ಮಾಡಿಕೊಳ್ಳಬೇಕು ಮತ್ತು ರೈತರು ಅರ್ಥ ಮಾಡಿಕೊಳ್ಳಬೇಕು. ಸರ್ಕಾರ ಕೂಡ ಅರ್ಥ ಮಾಡಿಕೊಳ್ಳಬೇಕು ಎನ್ನತಕ್ಕಂಥ ಒಂದು ಮನವಿಯನ್ನು ಮಾಡುವುದಕ್ಕೆ ಇಚ್ಛೆ ಪಡುತ್ತೇನೆ. ಕಾವೇರಿ ವಿಚಾರದಲ್ಲಿ ಏನು ವಿವಾದ ಇಲ್ಲ, ರಾಜಕೀಯ ಇಲ್ಲ, ಈ ಎಲ್ಲಾ ವಿಚಾರದಲ್ಲಿಯೂ ನಾವು ಸರ್ಕಾರದ ಜೊತೆಗೆ ಸಹಕಾರ ಮಾಡುವುದಕ್ಕೆ ಕಾನೂನಾತ್ಮಕ ಮತ್ತು ರಾಜಕೀಯವಾಗಿ ಇರತಕ್ಕಂಥ ಯಾವುದೆ ಹೋರಾಟಕ್ಕೆ ನಾವು ಸಿದ್ದರಾಗಿದ್ದೇವೆ. ಆದರೆ ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಇವತ್ತು ಸಂಸತ್ ಸದಸ್ಯರನ್ನು ಕರೆದುಕೊಂಡು ಹೋಗುತ್ತೇನೆಂದು ಹೇಳಿದರು. ನಾವು ಈ ಸಭೆಯ ಮುಖೇನ ಹೇಳುವುದೇನೆಂದರೆ 43 ಜನ ಸಂಸತ್ ಸದಸ್ಯರ ಜೊತೆಗೆ ಇವತ್ತು ಮಾನ್ಯ ದೇವೇಗೌಡರು ಕೂಡ ಪ್ರಧಾನ ಮಂತ್ರಿಗಳು ಆಗಿದ್ದವರು. ದೆಹಲಿಗೆ ನಿಯೋಗವನ್ನು ಕೊಂಡೊಯ್ಯಬೇಕು. ಕಾವೇರಿ ಜಲಾನಯನ ಪ್ರದೇಶದಿಂದ ಬರತಕ್ಕಂಥವರು, ಪ್ರಧಾನ ಮಂತ್ರಿಗಳಾಗಿ ಎಲ್ಲ ಕಷ್ಟಗಳನ್ನು ಅರಿತಿರತಕ್ಕಂಥವರು ಅವರು ನಾಯಕತ್ವವನ್ನು ವಹಿಸಬೇಕು. ಮಾನ್ಯ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಪ್ರಧಾನ ಮಂತ್ರಿಗಳ ಹತ್ತಿರ ಅವರು ಹೋಗಬೇಕು. ಅವರು ಕೂಡ ಪ್ರಮಾಣಿಕವಾದ ಪ್ರಯತ್ನವನ್ನು ಮಾಡಬೇಕು. ಏನೆಲ್ಲಾ ಪ್ರಯತ್ನವನ್ನು ಮಾಡುವುದಕ್ಕೆ ಸಾಧ್ಯ ಎನ್ನತಕ್ಕಂಥದರ ಜೊತೆಗೆ ನಾನು ಒಂದು ಮಾತನ್ನು ಹೇಳುತ್ತೇನೆ. ರಾಜಕೀಯ ಪರಿಸ್ಥಿತಿ ಏನು ಎಂದರೆ ಪ್ರಧಾನ ಮಂತ್ರಿಗಳ ಜೊತೆಗೆ ಹೋಗುವುದಕ್ಕಿಂತ ಹೆಚ್ಚಾಗಿ ತಮಿಳುನಾಡಿನ ಮುಖ್ಯಮಂತ್ರಿಗಳ ಮೇಲೆ ಒತ್ತಡವನ್ನು ಹಾಕಿ ಈ ರೀತಿಯಾದಂಥ ಮೊಂಡುವಾದ ಬೇಡ, ನೀರಿಗಾಗಿ ಹಠ ಮಾಡಬೇಡಿ, ಮಳೆ ಬರುತ್ತಿದೆ ಸ್ವಲ್ಪ ಕಾಯಿರಿ ನಿಮ್ಮಲ್ಲಿ ನೀರು ಇದೆ ಎನ್ನತಕ್ಕಂಥ ಸಂದೇಶವನ್ನು ಕೊಟ್ಟು ಮನಸೋಲಿಸುವಂಥ ಕೆಲಸವನ್ನು ಇವತ್ತು ಮಾಡ ಬೇಕಾಗುತ್ತದೆ ಎನ್ನತಕ್ಕಂಥದ್ದನ್ನು ತಮ್ಮ ಮುಖೇನ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಸಿ.ಎಸ್. ಪುಟ್ಟರಾಜು (ಮೇಲುಕೋಟೆ):– ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಕಾವೇರಿ ಜಲ ವಿವಾದ ಕುರಿತಂತೆ ಸುದೀರ್ಘವಾಗಿ ಅವರ ಹೇಳಿಕೆಯಲ್ಲಿ ಎಲ್ಲಾ ವಿಚಾರಗಳನ್ನು ಸಭೆಯ ಗಮನಕ್ಕೆ ತಂದಿದ್ದಾರೆ. ಈ ರಾಜ್ಯದ ಮುಖ್ಯ ಮಂತ್ರಿಗಳನ್ನು ಮತ್ತು ನೀರಾವರಿ ಮಂತ್ರಿಗಳನ್ನು ನಮ್ಮ ಜಿಲ್ಲೆಯ ಎಲ್ಲಾ ರೈತರು ಹಿತರಕ್ಷಣಾ ಸಮಿತಿ ವತಿಯಿಂದ ಭೇಟಿ ಮಾಡಿ ಸೂಕ್ಷ್ಮವಾಗಿ ಎಲ್ಲಾ ರೈತರ ಸಮಸ್ಯೆಗಳನ್ನು ಕಾವೇರಿ ನೀರಿನಿಂದ ಆಗತಕ್ಕಂಥ ತೊಂದರೆಗಳ ಬಗ್ಗೆ ಸವಿಸ್ತಾರವಾಗಿ ಅವರಿಗೆ ಮನದಟ್ಟು ಮಾಡಿಕೊಡುವಂಥ

ಕೆಲಸವನ್ನು ನಾವು ಮಾಡಿದ್ದೇವೆ. ಕಳೆದ ವಾರ ನಮ್ಮ ಜಿಲ್ಲೆಗೆ ಬಂದು ಅನೇಕ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ಕೊಡತಕ್ಕಂಥ ಸಂದರ್ಭದಲ್ಲಿಯೂ ಕೂಡ ಅಲ್ಲಿರತಕ್ಕಂಥ ವಸ್ತು ಸ್ಥಿತಿಯನ್ನು ಕಣ್ಣಾರೆ ಈ ರಾಜ್ಯದ ಮುಖ್ಯಮಂತ್ರಿಗಳು ಮತ್ತು ನೀರಾವರಿ ಸಚಿವರು ನೋಡಿಕೊಂಡು ಬಂದಿದ್ದಾರೆ. ಇವತ್ತು ಇಂತಹ ಒಂದು ಕಷ್ಟಕರವಾದ ಪರಿಸ್ಥಿತಿ ನಮ್ಮ ಕಾವೇರಿ ಭಾಗದಲ್ಲಿ ನಾವು ಯಾವೊತ್ತು ಕಂಡಿರಲಿಲ್ಲ. ಅಂತಹ ಒಂದು ಸಂಕಷ್ಟದಲ್ಲಿ ನಮ್ಮ ರೈತರಿಗೆ ಇರತಕ್ಕಂಥ ಕಷ್ಟಗಳನ್ನು ಮುಖ್ಯಮಂತ್ರಿಗಳು ಸ್ವತಃ ಕಣ್ಣಿಂದ ನೋಡಿದ್ದಾರೆ. ಬೆಳೆದಿರತಕ್ಕಂಥ ಬೆಳೆಗಳನ್ನು ರಕ್ಷಣೆ ಮಾಡಿಕೊಳ್ಳುವುದು ಒಂದು ಕಡೆ ಕನ್ನಂಬಾಡಿ ಕಟ್ಟೆಯಿಂದ ಹಿಡಿದು ಬೆಂಗಳೂರು ನಗರದವರೆಗೆ ದೊಡ್ಡ ದೊಡ್ಡ ನಗರ ಪ್ರದೇಶಗಳಿಗೆ ತಾಲ್ಲೂಕು ಕೇಂದ್ರಗಳಿಗೆ ಹಾಗೂ ಗ್ರಾಮಾಂತರ ಪ್ರದೇಶದ ಅನೇಕ ಹಳ್ಳಿಗಳಿಗೆ ಕುಡಿಯುವ ನೀರಿನ ಒಂದು ವ್ಯವಸ್ಥೆಯನ್ನು ಈಗಾಗಲೇ ಕಲ್ಪಿಸಿರತಕ್ಕಂಥದ್ದು ಎಲ್ಲರಿಗೂ ಗೊತ್ತಿರತಕ್ಕಂಥ ಒಂದು ವಿಚಾರ. ಈಗಾಗಲೇ ಕೆ.ಆರ್.ಎಸ್. ಜಲಾಶಯದ ಮಟ್ಟ 96–95 ಅಡಿಗೆ ಬರುತ್ತಿದೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಇವತ್ತು ನೀರನ್ನು ಬಿಡಬೇಕೆಂದು ಏನಾದರೊಂದು ನಿರ್ಣಯವನ್ನು ಮಾಡಿದರೆ ಮುಂದಿನ ದಿವಸಗಳಲ್ಲಿ ಬಹಳ ಸಂಕಷ್ಟಕ್ಕೆ ಸಿಲುಕವಂಥ ಎಲ್ಲಾ ವಿಚಾರಗಳು ನಿಮ್ಮ ಗಮನಕ್ಕೆ ಬಂದಿವೆ. ಇಂತಹ ಸಂದರ್ಭದಲ್ಲಿ ಆ ಭಾಗದ ಒಬ್ಬ ಜನಪ್ರತಿನಿಧಿಯಾಗಿ ನಾನು ವಿನಯಪೂರ್ವಕವಾಗಿ ಕೇಳಿಕೊಳ್ಳುವುದು ಇಷ್ಟೆ, ಅವರು 10,000 ಕ್ಯೂಸೆಕ್ಸ್ ನೀರು ಬಿಡಬೇಕು ಎನ್ನತಕ್ಕಂಥ ತೀರ್ಮಾನವನ್ನು ಸರ್ವೋಚ್ಚ ನ್ಯಾಯಾಲಯ ಹೊರಡಿಸಿದೆ. ಈಗಾಗಲೇ ತಮಿಳುನಾಡು ಮತ್ತು ಕರ್ನಾಟಕ ಭಾಗದಲ್ಲಿ ಸುಮಾರು 5,000 ಕ್ಯೂಸೆಕ್ಸ್ ನೀರು ಹರಿಯತಕ್ಕಂಥ ಮಾಹಿತಿ ಪ್ರಕಾರ ನಮಗೆ ಲಭ್ಯವಾಗಿದೆ. ಈ ನಿಟ್ಟಿನಲ್ಲಿ ನಾಳೆಯೆ ಸಿಆರ್ಎ ಮತ್ತು ಸಿಎಂಸಿ ಸಭೆಯಲ್ಲಿ ಇರತಕ್ಕಂಥ ವಸ್ತುಸ್ಥಿತಿಯನ್ನು ಅವರಿಗೆ ಮನದಟ್ಟು ಮಾಡಿ. ಈಗಾಗಲೇ ಅರ್ಧ ನೀರು ಹೋಗುವಂಥ ಒಂದು ವ್ಯವಸ್ಥೆ ಆಗಿದೆ. ಯಾವುದೇ ಕಾರಣಕ್ಕೂ ನೀರನ್ನು ಬಿಡುವುದಕ್ಕೆ ಆಗುವುದಿಲ್ಲವೆನ್ನುವುದು ನೀವು ಸ್ಪಷ್ಟವಾಗಿ ಹೇಳಿ ರಾಜ್ಯದ ಮುಖ್ಯಮಂತ್ರಿಗಳು ಕಾವೇರಿ ಭಾಗದ ರೈತರ ಒಂದು ಹಿತವನ್ನು ಕಾಪಾಡಬೇಕೆಂದು, ನಾನು ತಮ್ಮಲ್ಲಿ ವಿನಯಪೂರ್ವಕವಾಗಿ ನಿಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತಿದ್ದೇನೆ. ದಯಮಾಡಿ ಈ ಸದನದಲ್ಲಿ ಒಂದು ಸಾಲಿನ ನಿರ್ಣಯವನ್ನು ಮಾಡಿ ಯಾವುದೇ ಕಾರಣಕ್ಕೂ ನೀರನ್ನು ಬಿಡುವುದಿಲ್ಲ. ಎನ್ನತಕ್ಕಂಥ ಒಂದು ನಿರ್ಣಯವನ್ನು ಮಾಡಬೇಕೆಂದು ತಮ್ಮ ಮೂಲಕ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಸುರೇಶ್‌ಗೌಡ (ನಾಗಮಂಗಲ): ಮಾನ್ಯ ಅಧ್ಯಕ್ಷರೆ, ನಾವೆಲ್ಲಾ ಸುಮಾರು ಶಾಸಕರುಗಳು 24 ಗಂಟೆಗಳ ಕಾಲ ಮುಖ್ಯ ಮಂತ್ರಿಗಳ ಹೇಳಿಕೆಗೆ ಕಾದಿರುತ್ತೇನೆ. ಇವತ್ತು ಕಾಂಕ್ರೀಟ್ ಡಿಸಿಷನ್ ತೆಗೆದುಕೊಂಡು ಬಂದು ಇವತ್ತು ಅವರು ಹೇಳುತ್ತಾರೆ. ನೀರನ್ನು ಬಿಡುವುದೆ ಇಲ್ಲವೆನ್ನುವ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆಂದಾಗ ಅವರು ಒಂದು ಸುದೀರ್ಘವಾದ ಹೇಳಿಕೆಯನ್ನು ಕೊಟ್ಟರು. ಬಹುತೇಕ ನಮ್ಮ ಕಾವೇರಿ ಕೊಳ್ಳದಲ್ಲಿ ಬರತಕ್ಕಂಥ ಜನರಿಗೆ ಯಾವುದಾದರೊಂದು ಒಳ್ಳೆಯ ಮಸೇಜನ್ನು ಇವತ್ತು ಮಾನ್ಯ ಮುಖ್ಯ ಮಂತ್ರಿಗಳು ಕೊಡಬೇಕಾಗುತ್ತದೆ.

ಇವತ್ತು ನನ್ನ ಕ್ಷೇತ್ರ ಕೊನೆಯ ಹಂತದಲ್ಲಿ ಇರತಕ್ಕಂಥದ್ದು ಇವತ್ತು ಇಲ್ಲೆ ಅಧಿಕಾರಿಗಳು, ಯಾವುದೇ ತೀರ್ಮಾನ ಜಿಲ್ಲಾ ಮಂತ್ರಿಗಳು ಹೇಳಲಿ, ನೀರಾವರಿ ಸಲಹಾ ಸಮಿತಿ ಹೇಳಲಿ, ಯಾರೇ ಹೇಳಿದರು ಇವತ್ತು ದನಕರುಗಳಿಗೆ ಕುಡಿಯುವ ನೀರನ್ನು ಕೆರೆಗಳಿಗೆ ಬಿಡುವುದಕ್ಕೆ ಆಗಿಲ್ಲ. ದನಕರುಗಳು ಎಲ್ಲಿ ನೀರು ಕುಡಿಯಬೇಕು ಎನ್ನುವ ಪರಿಸ್ಥಿತಿ ಇದೆ. ಬೋರ್‌ವೆಲ್ ಹಾಕಿದರೂ 600–700 ಅಡಿ ನೀರು ಬರುತ್ತಿಲ್ಲ. ಹೇಮಾವತಿಯಲ್ಲಿ ನೀರು ಇದೆ. ಬಿಡಿ ಎಂದರೆ ಬಿಡುತ್ತಿಲ್ಲ. ಇವತ್ತಿನವರೆಗೂ ಕೆರೆಗಳು ತುಂಬಿಲ್ಲ. ಸುಪ್ರೀಂಕೋರ್ಟುನವರು ಏನೋ ತೀರ್ಮಾನ ಕೊಟ್ಟಿದ್ದಾರೆ ಎಂದು ತಾವು ಅಧಿಕಾರ ಉಳಿಸಿಕೊಳ್ಳುವುದಕ್ಕೋಸ್ಕರ ಸರ್ಕಾರ ಉಳಿಸಿಕೊಳ್ಳುವುದಕ್ಕೋಸ್ಕರ ಅಥವಾ ಸುಪ್ರೀಂಕೋರ್ಟಿನಿಂದ ಏನೋ ಉಳಿಸಿಕೊಳ್ಳುವುದಕ್ಕೆ ಹೋಗಿ, ನೀರನ್ನು ಬಿಟ್ಟಂತಹ ಸಂದರ್ಭದಲ್ಲಿ ನಾವು ಏನು ಮಾಡಬೇಕೆನ್ನುವುದು ನಮ್ಮ ಪ್ರಶ್ನೆ 2–3 ತಿಂಗಳು ಕಾಲಾವಕಾಶ ಇತ್ತು. ಅಷ್ಟರಲ್ಲಿ ನೀರು ಬಿಡುತ್ತೇವೆಂದು ಹೇಳಿ ಇದುವರೆಗೂ ಒಂದು ಕೆರೆಯನ್ನು ತುಂಬಿಸತಕ್ಕಂಥ ಕೆಲಸವನ್ನು ಎಷ್ಟೇ ಒತ್ತಾಯ ತಂದರೂ ನಮ್ಮ ಅಧಿಕಾರಿಗಳು ಮಾಡಲಿಲ್ಲ. ಜಿಲ್ಲಾ ಮಂತ್ರಿಗಳು ಹೇಳಿದರೂ ಸಹ ತರಲಿಲ್ಲ. ಇವತ್ತು ಅಂತಿಮವಾಗಿ ಆದೇಶ ಬಂದಿದೆ. ಎಲ್ಲೋ ಒಂದು ಕಡೆ ನಮಗೆ ಅನುಮಾನ ಬರುತ್ತದೆ. ಮಾನ್ಯ ಮುಖ್ಯಮಂತ್ರಿಯವರು ಸಿಎಂಸಿ ಮೀಟಿಂಗ್‌ಗೆ ಹೋಗಿ ಬಂದು ತೀರ್ಮಾನ ತೆಗೆದುಕೊಳ್ಳತ್ತೇವೆ. ಎಂದು ಹೇಳಿದರೇ ಹೊರತು ನಾವು ನೀರು ಬಿಡುವುದಿಲ್ಲ ಎಂದು ಒಂದು ಮಾತನ್ನು ಹೇಳಲಿಲ್ಲ. ನೀರು ಬಿಡುವುದಿಲ್ಲವೆಂದು ನಿರ್ಣಯವಾಗಿದ್ದರೆ, ಅಲ್ಲಿ ಏಕೆ ಇವತ್ತು ಪೊಲೀಸ್ ಹಾಕಿದ್ದೀರಿ? ಅಲ್ಲಿ ಏಕೆ ಡಿ.ಸಿ. ಹಾಗೂ ಎಸ್.ಪಿ. ಯವರನ್ನು ನಿಯೋಜನೆ ಮಾಡಲಾಗಿದೆ. ಏಕೆ ಅಲ್ಲಿ ಈಗಾಗಲೇ ರೆಡಿ ಮಾಡಿ ಇಟ್ಟಿದ್ದೀರಿ? ಇದರ ಮರ್ಮ ಏನು ಎನ್ನುವುದನ್ನು ದಯಮಾಡಿ

ತಾವು ಸದನದಲ್ಲಿ ಹೇಳಬೇಕಾಗುತ್ತದೆ. ಕಳೆದ ಬಾರಿ ತಮ್ಮ ಹತ್ತಿರ ಬಂದಿದ್ದೆವು. ಮಾನ್ಯ ನೀರಾವರಿ ಸಚಿವರು. 'ನಾವು ಜೈಲಿಗೆ ಹೋಗುವುದಕ್ಕೆ ಸಿದ್ದರಿದ್ದೇವೆ. ಆದರೆ ನೀರನ್ನು ಮಾತ್ರ ಬಿಡುವುದಿಲ್ಲ. ಎನ್ನುವ ಮಾತನ್ನು ಹೇಳಿದರು. ನೀರನ್ನ ಮಾತ್ರ ಬಿಟ್ಟರು ಆದರೆ ಜೈಲಿಗೆ ಹೋಗಲಿಲ್ಲ. ಈ ಪರಿಸ್ಥಿತಿಯನ್ನು ಇವತ್ತು ಸಂದೇಹ ಉಂಟಾಗಿದೆ. ದಯಮಾಡಿ ಮಾನ್ಯ ಮುಖ್ಯಮಂತ್ರಿಯವರು ದೃಢ ನಿರ್ಧಾರ ಮಾಡಬೇಕು. ಒಂದು ಹನಿ ನೀರು ಬಿಡುವುದಕ್ಕೆ ಆಗುವುದಿಲ್ಲವೆಂದು ನಿರ್ಣಯ ಮಾಡಬೇಕೆಂದು ಮಾನ್ಯ ಪುಟ್ಟರಾಜುರವರು ಹೇಳಿದರು. ಹಂತ ಹಂತದಲ್ಲಿ ಸರ್ಕಾರ ಸುಪ್ರೀಂಕೋರ್ಟ್‌ನಲ್ಲಿ ಸೋಲುತ್ತಿರುವುದು. ಕರ್ನಾಟಕದಲ್ಲಿ ವಿರುದ್ಧವಾಗಿ ಆದೇಶಗಳು ಬರುತ್ತಿರುವುದನ್ನು ನೋಡಿದರೆ, ನಾವು ಸರಿಯಾಗಿ ವಾದವನ್ನು ಮಂಡನೆ ಮಾಡುತ್ತಿದ್ದೇವಾ? ವಸ್ತುಸ್ಥಿತಿಯನ್ನು ಇಡುತ್ತಿದ್ದೇವೆಯೇ ಇಲ್ಲವೋ ಎನ್ನುವ ಅನುಮಾನ ನಮಗೆ ಬರುತ್ತಿದೆ. ನಾನು ವಕೀಲರ ಬಗ್ಗೆ ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಅವರು ಹಿರಿಯರು ಬಹಳ experience ಇದೆ. ಆದರೆ ಇದನ್ನೂ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ನಾವು ಪ್ರತಿ ಹಂತದಲ್ಲಿಯೂ ಸೋಲುತ್ತಿದ್ದೇವೆ ಎಂದರೆ, ಇಲ್ಲಿ ಏನೋ ತೊಂದರೆಯಗುತ್ತಿದೆ. ಯಾವುದೋ ಹಂತದಲ್ಲಿ ಸರ್ಕಾರಕ್ಕೆ ಸರಿಯಾಗಿ manage ಮಾಡುವುದಕ್ಕೆ ಆಗುತ್ತಿಲ್ಲ. ನಮ್ಮ ವಾದವನ್ನು ನಾವು ಮಾಡುತ್ತಿಲ್ಲ ಎನ್ನುವುದು ಆ ಭಾಗದ ಎಲ್ಲಾ ರೈತರ ಭಾವನೆಯಾಗಿದೆ. ಇದರ ಜೊತೆಗೆ ದಯಮಾಡಿ ಕುಡಿಯುವ ನೀರಿನ ಪರಿಸ್ಥಿತಿಯನ್ನು ನೋಡಬೇಕಾಗುತ್ತದೆ. ಕೆರೆಕಟ್ಟೆಗಳಿಗೆ ಆದಷ್ಟು ಬೇಗ ನೀರನ್ನು ತುಂಬಿಸಬೇಕು. 15 ದಿನ ನೀರು ಬಿಟ್ಟರೆ ನೀರು ತುಂಬಿಕೊಳ್ಳುತ್ತದೆ. ಇವತ್ತು ನಾವು 5–10 ಟಿ.ಎಂ.ಸಿ. ನೀರನ್ನು ಕೇಳುತ್ತಿಲ್ಲ. 0.2 ಅಥವಾ 0.4 ಟಿ.ಎಂ.ಸಿ. ನೀರು ಬಿಟ್ಟರೆ ನಮ್ಮ ಕೆರೆಕಟ್ಟೆಗಳಿಗೆ ನೀರು ತುಂಬಿಕೊಳ್ಳುತ್ತದೆ. 0.2–0.3 ಟಿ.ಎಂ.ಸಿ. ನೀರನ್ನು ತುಂಬಿಸಲಿಕ್ಕೆ ನಮ್ಮ ಅಧಿಕಾರಿಗಳಿಗೆ ಇಷ್ಟವಿಲ್ಲವೆಂದರೆ ಹೇಗೆ? ತಮಿಳುನಾಡಿಗೆ ನೀರು ಬಿಟ್ಟರೆ ನಾವು ಎಲ್ಲಿ ಹೋಗಬೇಕೆನ್ನುವ ಪ್ರಶ್ನೆ ಸಹಜವಾಗಿದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಯವರು ದಯವಿಟ್ಟು ಸದನದಲ್ಲಿ ದೃಢ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ. ಒಂದು ಸಲ ನಿರ್ಣಯ ಮಾಡಿ ಯಾವುದೇ ಕಾರಣಕ್ಕೂ ನೀರನ್ನು ಬಿಡಬಾರದು. ಈ ಸಂಬಂಧ ಮಾನ್ಯ ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಲು ಒಂದು ನಿಯೋಗ ಮಾಡಿ ಅದರ ಜೊತೆಗೆ ನಮ್ಮನ್ನೂ ಸಹ ಕರೆದುಕೊಂಡು ಹೋಗಿ ನಾವೂ ಸಹ ನಮ್ಮ ಭಿನ್ನವತ್ತಳೆಯನ್ನು ಮಾನ್ಯ ಪ್ರಧಾನ ಮಂತ್ರಿಯವರಿಗೆ ಹೇಳುತ್ತೇವೆ ಎನ್ನುವ ಮಾತನ್ನು ಹೇಳುತ್ತಾ, ನೀವು ಒಂದು ಸಲ ನಿರ್ಣಯವನ್ನು ಇವತ್ತೇ ಮಂಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಧನ್ಯವಾದಗಳು.

ಬಿ-ಕೆಪಿ-ಬಿಎಸ್

ಡಾ॥ ಹೆಚ್.ಸಿ. ಮಹದೇವಪ್ಪ (ಟಿ.ನರಸೀಪುರ) : ನಿನ್ನೆ ಸರ್ವೋಚ್ಚ ನ್ಯಾಯಾಲಯದ ತೀರ್ಪು ಬಂದ ಹಿನ್ನೆಲೆಯಲ್ಲಿ ಕಾವೇರಿ ನದಿ ನೀರಿನ ವಿಷಯವನ್ನು ಕುರಿತು ವಿರೋಧ ಪಕ್ಷದ ನಾಯಕರಿಂದ ಹಿಡಿದು ಅನೇಕ ಮಾನ್ಯ ಸದಸ್ಯರು ಇಲ್ಲಿ ಬೆಳಕನ್ನು ಚೆಲ್ಲಿದ್ದಾರೆ. ಅದಕ್ಕೆ ಪೂರಕವಾಗಿ ಸುಪ್ರೀಂಕೋರ್ಟ್‌ನ ತೀರ್ಪಿನ ಹಿನ್ನೆಲೆಯ ಸಮಗ್ರ ವರದಿಯನ್ನು ತರಿಸಿಕೊಂಡು ಬೆಳಗ್ಗೆಯಿಂದ ಸುಮಾರು 3–4 ಗಂಟೆಗಳ ಕಾಲ ಸರ್ಕಾರ ಚರ್ಚೆ ಮಾಡಿ ಒಂದು ವಿವರವಾದಂತಹ ಹೇಳಿಕೆಯನ್ನು ಮಾನ್ಯ ಮುಖ್ಯಮಂತ್ರಿಯವರು ಈ ಸದನದಲ್ಲಿ ಮಂಡಿಸಿದ್ದಾರೆ. ಅವರು ಮಂಡಿಸತಕ್ಕಂಥ ಸಂದರ್ಭದಲ್ಲಿ 1924ನೇ ಇಸವಿಯಿಂದ ಇಲ್ಲಿಯ ತನಕ ಯಾವ್ಯಾವ ಸಂದರ್ಭದಲ್ಲಿ ಕಾವೇರಿ ನೀರಿನ ಸಮಸ್ಯೆ ಉದ್ಭವವಾಗಿ ನೀರಿನ ಅಭಾವ ಬಂದಾಗ, ತಮಿಳುನಾಡು ಸರ್ಕಾರ, ಕರ್ನಾಟಕ ಸರ್ಕಾರದ ಜೊತೆಯಲ್ಲಿ ಚರ್ಚೆಗಳ ಮೂಲಕ, ನ್ಯಾಯಾಲಯಗಳ ಮೂಲಕ ಕಾವೇರಿ ಅಥಾರಿಟಿ ಮೂಲಕ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಮಾಡಿದಂತಹ ಪ್ರಯತ್ನಗಳ ವಿವರವನ್ನು ಒದಗಿಸಿದ್ದಾರೆ. ಎಲ್ಲಾ ಸಂದರ್ಭಗಳಲ್ಲಿಯೂ ಕೂಡ ಕೊಟ್ಟು ತೆಗೆದುಕೊಳ್ಳುವ ನೀತಿಯನ್ನು ಅನುಸರಿಸಿದ್ದರೂ ಕೂಡ ಅಂದಿನ ಸಂದರ್ಭದ ತೀರ್ಮಾನಗಳು ಮತ್ತು ಇವತ್ತಿನ ಕಾವೇರಿ ಮತ್ತು ಅದರ ಜಲಾನಯನ ಪ್ರದೇಶಗಳಲ್ಲಿರತಕ್ಕಂಥ ನೀರು ಮತ್ತು ಅಂತರ್ಜಲದ ಮಟ್ಟ ಆ ಎಲ್ಲಾ ವಿವರಗಳಿಗಿಂತ ವಿಭಿನ್ನವಾಗಿದೆ. ಸ್ವತಃ ಸರ್ಕಾರವೇ ಹೇಳಿದ ರೀತಿಯಲ್ಲಿ, ಈ ಹಿಂದೆ CMC ಯವರು ರಾಜ್ಯಕ್ಕೆ ಕಳುಹಿಸಿದ ಕೇಂದ್ರ ತನಿಖಾ ತಜ್ಞರ ತಂಡ ಕರ್ನಾಟಕ ಕಾವೇರಿ ಜಲಾಯನ ಪ್ರದೇಶದಲ್ಲಿ ಸಂಚರಿಸಿ ಕರ್ನಾಟಕದಲ್ಲಿ ಬೆಳೆದು ನಿಂತ ಬೆಳೆಗಳ ಪರಿಶೀಲನೆ, ಕುಡಿಯುವ ನೀರು, ಸಮಸ್ಯೆಗಳನ್ನು ಪರೀಕ್ಷಿಸಿ, ಕರ್ನಾಟಕ ಜಲಾಶಯದಲ್ಲಿರುವ ನೀರಿನ ಲಭ್ಯತೆ ಬೆಳೆದು ನಿಂತಿರುವ ಬೆಳೆಗಳಿಗೆ, ಕುಡಿಯುವ ನೀರಿನ ಅವಶ್ಯಕತೆಗಳನ್ನು ಪೂರೈಸಲು ಮಾತ್ರ ಸಾಕಾಗುತ್ತದೆ. CMC ಕಮಿಟಿ ಬಂದಾಗ, ಸರ್ಕಾರ ಅದರ ಮುಂದೆ ಕೊಟ್ಟಿರುವಂತಹ ವಿವರಣೆ, ಇಲ್ಲಿ ಬೆಳೆದಿರುವಂತಹ ಪೈರುಗಳು, ಕುಡಿಯುವ ನೀರು, ಅದಕ್ಕೆ ಮಾತ್ರ ಸಾಕಾಗುತ್ತದೆ. ಅದನ್ನು ಹೊರತುಪಡಿಸಿ, ನೀರನ್ನು ಕೊಡುವುದಕ್ಕೆ ನಮಗೆ ನೀರು ಲಭ್ಯವಿಲ್ಲ ಎನ್ನುವ ಹೇಳಿಕೆಯನ್ನು ಕೊಟ್ಟಿದ್ದಾರೆ. ಇವರು ಕೊಟ್ಟು ಸುಮಾರು ದಿನಗಳು ಕಳೆದು ಹೋಗಿದೆ. ಅಂದಿನ ವರದಿ ಕೊಟ್ಟ ಸಂದರ್ಭಕ್ಕೂ ಇವತ್ತಿಗೂ ಸಂಗ್ರಹವಾಗಿದ್ದ ಅಲ್ಪಸ್ವಲ್ಪ ನೀರು ಕೂಡ ಕೆಳಮಟ್ಟಕ್ಕೆ ಇಳಿದು ಹೋಗಿದೆ. ಕಬಿನಿಯಲ್ಲಿ depth stage ಮುಟ್ಟಿದೆ. ಹೆಚ್.ಡಿ. ಕೋಟೆ, ನಂಜನಗೂಡು ತಾಲ್ಲೂಕು, ನರಸೀಪುರ ತಾಲ್ಲೂಕು, ಎಳಂದೂರು, ಕೊಳ್ಳೇಗಾಲದಲ್ಲಿ ಸುಮಾರು 1 ಲಕ್ಷ 20 ಸಾವಿರ ಎಕರೆಗಳ ಗತಿ, ಇನ್ನು 15–20

ದಿನಗಳಲ್ಲಿ ಏನಾದರೂ ಒಂದು ಹನಿ ನೀರು ಬಿಡದಿದ್ದರೆ ಸಂಪೂರ್ಣವಾಗಿ ಒಣಗಿ ಹೋಗುತ್ತದೆ. ರೈತರು ಮತ್ತೆ ಮೇಲೆ ಏಳುವುದಕ್ಕೆ ಸಾಧ್ಯವಿಲ್ಲ. ಅದೇ ರೀತಿಯಲ್ಲಿ ಕಾವೇರಿ ಡ್ಯಾಂನಲ್ಲಿ ನೀರಿನ ಮಟ್ಟ 97,96,95ಕ್ಕೆ ಇಳಿದಿದೆ. ಅಲ್ಲಿ ಏನು ಕಾಳು ಕಟ್ಟುವಂತಹ ಅಲ್ಪಸ್ವಲ್ಪ ಬೆಳೆಗಳಿವೆ. ಈ ಸಂದರ್ಭದಲ್ಲಿ ಅಲ್ಲಿನ ಭೂಮಿಗೆ ಸಂಪೂರ್ಣವಾಗಿ ನೀರು ಹರಿಸದೇ ಇದ್ದರೂ, ತೇವ ಮಾಡದೇ ಹೋದರೆ, ಇನ್ನು 20 ದಿನಗಳಲ್ಲಿ ಸಂಪೂರ್ಣವಾಗಿ ನಾಶವಾಗುತ್ತದೆ. ಈಗಾಗಲೇ ರೈತರು ಬೀದಿಯಲ್ಲಿದ್ದಾರೆ. ಅಣೆಕಟ್ಟಿನ ಬಳಿಗೆ ಹೋಗಿದ್ದಾರೆ. ಚಳುವಳಿಯನ್ನು ಪ್ರಾರಂಭ ಮಾಡುವಂತೆ ಇದೆ. ಕಾನೂನು ಸುವ್ಯವಸ್ಥೆ ಹದಗೆಟ್ಟಿದ ರೀತಿಯಲ್ಲಿ ನೋಡಿಕೊಳ್ಳುವುದು ಸರ್ಕಾರದ ಮತ್ತು ಎಲ್ಲಾ ಜನಪ್ರತಿನಿಧಿಗಳ ಕರ್ತವ್ಯ ಮತ್ತು ಜವಾಬ್ದಾರಿಯಾಗಿದೆ. ಈ ಸಂದರ್ಭದಲ್ಲಿ ತಾವು ನಾಳೆ ಕಾವೇರಿ ಅಥಾರಿಟಿ ಅಧ್ಯಕ್ಷರನ್ನು ಭೇಟಿ ಮಾಡುತ್ತೀದ್ದೀರಿ. ಸಂಸದರನ್ನು ಕರೆದುಕೊಂಡು ಹೋಗುತ್ತಿದ್ದೀರಿ. ಅವರಿಗೆ ಮನವರಿಕೆ ಮಾಡುವುದು ಒಂದು ಕಡೆ ಆದರೆ, ನಾವು ಎಲ್ಲಾ ವಿವರವಾದಂತಹ ಸಂದಷ್ಟದ ಪರಿಸ್ಥಿತಿಯನ್ನು, ರಾಜ್ಯದ ಜಲಾಶಯಗಳಿಗೆ ನೀರೇ ಇಲ್ಲದಂತಹ ಪರಿಸ್ಥಿತಿಯನ್ನು, ನಮ್ಮ ರೈತರು, ಜನರು ಆತಂಕ ಪಡಬೇಕಾಗಿಲ್ಲ. ಇಲ್ಲಿ ಬೆಳದಿರುವಂಥ ಬೆಳೆಗಳಿಗೆ ರಕ್ಷಣೆ ಮಾಡತಕ್ಕಂಥದ್ದು ಮಾತ್ರ ನೀರು ಇದೆ. ಕುಡಿಯುವದಕ್ಕಂಥು ನೀರು ಇಲ್ಲವೆಂದು ನೀವೇ CAC ಮುಂದೆ ಕೊಟ್ಟಿರುವಂಥ ವರದಿ ಏನಿದೆ. ಅದಕ್ಕೆ ವಿರುದ್ಧವಾದಂತಹ ತೀರ್ಮಾನವನ್ನು ಸರ್ಕಾರ ಕೈಗೊಳ್ಳದೇ, ಇದೊಂದು ಸೂಕ್ಷ್ಮವಾದಂತಹ ವಿಚಾರ. ಮತ್ತು ಅಷ್ಟೆ ಜನರ, ರೈತರ ಅಳಿವು-ಉಳಿವಿನ ಪ್ರಶ್ನೆ. ಈ ಎಲ್ಲಾ ಹಿನ್ನೆಲೆಯಲ್ಲಿ ಸರ್ಕಾರ ಒಂದು ನಿರ್ದಿಷ್ಟವಾದಂತಹ, ಬಲವಾದಂತಹ ನಿಲುವನ್ನು ತೆಗೆದುಕೊಳ್ಳುವುದರ ಜೊತೆಗೆ ರಾಜಕೀಯ ಬದ್ಧತೆಯನ್ನು ಪ್ರದರ್ಶನ ಮಾಡಿ ಒಟ್ಟಾರೆ ತಾವು ಏನು ಒಟ್ಟಾಗಿ ಸಂಸದರನ್ನು ಕರೆದುಕೊಂಡು ಹೋಗಿ CRA ಅಧ್ಯಕ್ಷರನ್ನು ಭೇಟಿ ಮಾಡಿಸುತ್ತಿದ್ದೀರಿ. ಅವರಿಗೆ ಒತ್ತಾಯ ಮಾಡಬೇಕು. ನಾವು ನೀರನ್ನು ಇಟ್ಟುಕೊಂಡು ಕೊಡುವುದಿಲ್ಲ ಎಂದು ಹೇಳುತ್ತಿಲ್ಲ. ನಮ್ಮ ನೀರು ನಿಮಗೇ ಬೇಕು, ಕೊಡುವುದಿಲ್ಲವೆಂದು ಹೇಳುತ್ತಿಲ್ಲ. 1924ರ ಒಡಂಬಡಿಕೆ ಎಲ್ಲವನ್ನು ಪರಾಮರ್ಶೆ ಮಾಡಿ ಆವತ್ತಿನ ಸನ್ನಿವೇಶ, ಇವತ್ತಿನ ಸನ್ನಿವೇಶ, ಮಳೆಯ ಪ್ರಮಾಣ, ಸಂಗ್ರಹವಾಗಿರವಂತಹ ನೀರು, ಇರತಕ್ಕಂಥ ಬೆಳೆಗಳು, ಕುಡಿಯುವ ನೀರಿನ ಪರಿಸ್ಥಿತಿ, ದನಕರುಗಳಿಗೆ ಕೆರೆಗುಂಟೆಗಳಲ್ಲಿ ಸಂಪೂರ್ಣವಾಗಿ ನೀರೇ ಇಲ್ಲದಂತಹ ಪರಿಸ್ಥಿತಿಯನ್ನು ನಾವು ಈಗಾಗಲೇ ವಿವರಿಸಿ ಹೇಳಿದ್ದೇವೆ. ಮತ್ತೆ ಮತ್ತೆ ಅದನ್ನೇ ಹೇಳುತ್ತೇನೆ. ಯಾವುದೇ ಕಾರಣಕ್ಕೂ ನಮ್ಮ ರೈತರು, ರಾಜ್ಯದ ಜನರು ಸಂಕಷ್ಟಕ್ಕೆ ಒಳಗಾಗದಂತಹ ರೀತಿಯಲ್ಲಿ,

ಇಲ್ಲಿ ಎಲ್ಲವೂ ಸೂಕ್ಷ್ಮವಾಗಿಯೇ ಹೇಳುತ್ತಾ ಬಂದಿದ್ದೀರಿ. ಆದರೆ, ನಿರ್ದಿಷ್ಟವಾಗಿ ನೀರು ಬಿಡುತ್ತೀರೋ ಇಲ್ಲವೋ, ಅಲ್ಲಿ ನೀರಿಲ್ಲ, ಸಂಗ್ರಹ ಇಲ್ಲ, ಕೊಡುವುದಕ್ಕೆ ಆಗುವುದಿಲ್ಲ ಎನ್ನುವುದು ಯಾವುದನ್ನೂ ಹೇಳದೇ, ಅತ್ಯಂತ ಜಾಣ್ಮೆಯಿಂದ, ತುಂಬಾ ಕಾನೂನಿನ ಪರಿಜ್ಞಾನವನ್ನು ಬಳಸಿ, ರಾಜಕೀಯ ಪ್ರಜ್ಞೆಯನ್ನು ಬಳಸಿ, ಚಾರಿತ್ರ್ಯವನ್ನು, ಕಾನೂನಿನ ಎಲ್ಲವನ್ನು ತೂರಿಸಿ, ತಾವು ಈ ಒಂದು ಹೇಳಿಕೆಯನ್ನು ತುಂಬಾ ಜಾಣ್ಮೆಯಿಂದ ಕೊಟ್ಟಿದ್ದೀರಿ. ತುಂಬಾ ಸಂತೋಷ, ಯಾರೂ ಜೈಲಿಗೆ ಹೋಗಬೇಕೆಂದು ಬಯಸಿಲ್ಲ. ಈ ಸರ್ಕಾರ ಬಿದ್ದು ಹೋಗಬೇಕೆಂದು ಬಯಸುವುದಿಲ್ಲ. ಆದರೆ ರೈತರ ಹಿತವನ್ನು ಕಾಪಾಡಿ, ನೀರು ಇಲ್ಲದೇ ಇರುವುದರಿಂದ ಕೊಡುವುದಕ್ಕೆ ಸಾಧ್ಯವಿಲ್ಲ. ಕಾನೂನನ್ನು ಗೌರವಿಸುತ್ತೇವೆ. ಆದರೆ ನಾವು ಬದುಕುವುದಕ್ಕೆ ಸಾಧ್ಯವಿಲ್ಲದಂತಹ ಸಂದರ್ಭದಲ್ಲಿ ನಮ್ಮನ್ನು ಸಾಯಿಸಿ, ಇನ್ನೊಬ್ಬರನ್ನು ಬದುಕಿಸಿ ಎನ್ನುವಂತಹ ಯಾವುದೇ ಕಾನೂನು ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಅದರಿಂದ ಸರ್ಕಾರವು ಇವೆಲ್ಲವನ್ನು ಕೂಡ Cauvery River Authority ಮುಂದೆ ಮತ್ತು ನ್ಯಾಯಾಲಯದ ಮುಂದೆ ಪುನರ್ ಪರಿಶೀಲನಾ ಅರ್ಜಿಯನ್ನು ಸಲ್ಲಿಸಿ ಅವರ ಮನವೊಲಿಸಿ ನಮ್ಮ ರೈತರನ್ನು ಮತ್ತು ನಮ್ಮ ರಾಜ್ಯವನ್ನು ಸಂರಕ್ಷಿಸಬೇಕು ಇದು ನಿಮ್ಮ ಜವಾಬ್ದಾರಿ ಮತ್ತು ಹೊಣೆಗಾರಿಕೆ ಇದೆ. ಆ ಜವಾಬ್ದಾರಿ ಮತ್ತು ಹೊಣೆಗಾರಿಕೆಯನ್ನು ನಿರ್ವಹಣೆ ಮಾಡುವಲ್ಲಿ ನಾವೆಲ್ಲರೂ ನಿಮ್ಮ ಜೊತೆಯಲ್ಲಿದ್ದೇವೆಂದು ಹೇಳಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ನಮ್ಮ ರಾಜ್ಯದ ರೈತರ ಹಿತವನ್ನು ಕಾಪಾಡಬೇಕೆಂದು ಹೇಳಿ ಆಗ್ರಹ ಮಾಡುತ್ತೇನೆ.

ಶ್ರೀ ಸಿ.ಎಸ್. ಪುಟ್ಟೇಗೌಡ (ಶ್ರವಣಬೆಳಗೊಳ) :– ಮಾನ್ಯ ಅಧ್ಯಕ್ಷರೆ, ನಾನು ಶಾಸಕವಾದ ಮೇಲೆ ಇಂತಹ ಪರಿಸ್ಥಿತಿ 3–4 ಸರ್ಕಾರದಲ್ಲಿ, 4–5 ಸಲ ಬಂದಿದೆ. ವಿರೋಧ ಪಕ್ಷದ ಕಡೆ ಕುಳಿತುಕೊಂಡಾಗ ನೀರು ಬಿಡಬೇಡಿ ಎಂದು ಆಗ್ರಹ ಮಾಡುತ್ತಾರೆ. ವಿರೋಧ ಪಕ್ಷದಲ್ಲಿ ಕುಳಿತುಕೊಂಡಿದ್ದವರು ಆಡಳಿತ ಪಕ್ಷದ ಕಡೆಗೆ ಹೋದ ಮೇಲೆ ರಾತ್ರೋರಾತ್ರಿ ಜನರಿಗೆ ಗೊತ್ತಿಲ್ಲದ ಹಾಗೆ ಚರ್ಚೆ ಆಗುವಾಗಲೇ ನೀರನ್ನು ಬಿಟ್ಟು ಕೋರ್ಟು ಆದೇಶವನ್ನು ಪಾಲಿಸಿದ್ದೇವೆನ್ನುವಂತಹ ಮಾತನ್ನು ಹೇಳುತ್ತಾರೆ. ಆ ಕಡೆ ಕುಳಿತುಕೊಂಡವರು ಈ ಕಡೆಗೆ ಬಂದರೆ ಅದೇ ಮಾತನ್ನು ಆಡುತ್ತಾರೆ. ಈ ಕಡೆ ಕುಳಿತವರು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಜಗದೀಶ್ ಶೆಟ್ಟರ್ ರವರು ಕುಳಿತಿರುವ ಜಾಗದಲ್ಲಿ ಏನು ಮಾಡಬೇಕೋ ಅದನ್ನೆ ಅವರು ಮಾಡುತ್ತಾರೆ. ನಾನು ಈ ಬಗ್ಗೆ ಏನು ಹೇಳುತ್ತೆನೆಂದರೆ ಈ ರಾಜ್ಯದ 6 ಕೋಟಿ ಜನರು ಎಲ್ಲರು ಕಲಿತವರಲ್ಲ, ವಿದ್ಯಾವಂತರಲ್ಲ ಲಾಯರ್ ಅಲ್ಲ.

ಬಹುಶಃ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಜಗದೀಶ್ ಶೆಟ್ಟರ್‌ರವರು ಲಾಯರ್ ಆಗಿದ್ದರೆ. ಮಾನ್ಯ ಸಿದ್ದರಾಮಯ್ಯನವರು ಸಹ ಲಾಯರ್ ಆಗಿದ್ದಾರೆ. ಟಿ.ಬಿ.ಜಯಚಂದ್ರರವರು ಸಹ ಲಾಯರ್ ಆಗಿದ್ದಾರೆ. ಬಹಳ ಜನರು ಇಲ್ಲಿ ಲಾಯರ್‌ಗಳಾಗಿದ್ದಾರೆ. ಆಮೇಲೆ ವಿಶೇಷವಾಗಿ ನಾರಿಮನ್ ಅಂತಹ ತಿಳಿದಂತಹ ಲಾಯರ್‌ಗಳು ಇದ್ದ ನಮ್ಮ ರಾಜ್ಯದ ಸೆಕ್ರೆಟರಿಗಳು ಎಲ್ಲರೂ ಇದ್ದು ಈ ಬಗ್ಗೆ ಚರ್ಚೆಗಳು ನಡೆಯುತ್ತಲೆ ಇದೆ. ಆದರೂ ಏನಾಗಿದೆ ಎಂದರೆ ಆ ಜಾಗದಲ್ಲಿ ಕುಳಿತುಕೊಂಡವರು ಅವರಿಗೆ ಇರುವಂತಹ ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕೆ ಏನು ಬೇಕೋ ಅಷ್ಟೇ ಕಾರ್ಯಕ್ರಮವು ನಡೆಯುತ್ತಿದೆ. ಈ ಕೆಡೆ ಇರುವಂತಹವರು ವಿರೋಧಪಕ್ಷದ ಸಾಲಿನಲ್ಲಿ ನಿಂತು ಈ ರಾಜ್ಯದ ಜನರಿಗೆ ನಾವು ಅವರ ಸಿಟ್ಟಿಗೆ ನಾವು ಬಲಿಯಾಗಬಾರದು ಎಂದು ಕೇಳುವಷ್ಟನೇ ಕೇಳುವುದನ್ನು ಬಿಟ್ಟರೆ ಒಂದು ಹೆಜ್ಜೆ ಇದಕ್ಕೆ ಏನು ಪರಿಹಾರ ಸಿಕ್ಕಿದಂತೆ ಕಾಣುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಜಗದೀಶ್ ಶೆಟ್ಟರ್‌ರವರು 100–120 ವರ್ಷದ ಅಗ್ರಿಮೆಂಟ್ ಬಗ್ಗೆ ಬಹಳ ಸವಿಸ್ತಾರವಾಗಿ ಹೇಳಿದರು. ಬಹಶಃ ಅವರು ಹೇಳಿದ ಪ್ರಕಾರ ಅಗ್ರಿಮೆಂಟ್ ಆ ಕಾಲಕ್ಕೆ ಸ್ವಾತಂತ್ರ್ಯ ಪೂರ್ವದಲ್ಲಿ ನಮ್ಮ ಅಜ್ಜದಿರ ಕಾಲದಲ್ಲಿ ಆಗಿರುವಂತಹ ಒಪ್ಪಂದವಾಗಿದೆ. ನಮ್ಮ ಅಜ್ಜಂದಿರ ಕಾಲಕ್ಕೆ ಅದು ಹೋಗಿ, ನಮ್ಮ ಅಪ್ಪಂದಿರ ಕಾಲವು ಹೋಗಿ, ನಮ್ಮ ಕಾಲವು ಮುಗಿದು ಈಗ ನಮ್ಮ ಮಕ್ಕಳ ಕಾಲವು ಬರುತ್ತಿದೆ. ಆ ಕಾಲಕ್ಕೆ ಅಶ್ವಿನಿ ಮಳೆಯೋ, ಭರಣಿ ಮಳೆಯೋ, ಉತ್ತರೆ ಮಳೆಯೋ, ಉಬ್ಬೆ ಮಳೆಯೋ ಆಗ ಕಾಲ ಕಾಲಕ್ಕೆ ಕರೆಕ್ಟಾಗಿ ಆಗುತ್ತಿತ್ತು. ಆಗ ಕೆರೆಕಟ್ಟೆಗಳು ತುಂಬಿಹೋಗುತ್ತಿತ್ತು. ಇದರ ಬಗ್ಗೆ ಯಾರು ಸಹ ಗಮನವನ್ನು ಹರಿಸುತ್ತಿರಲಿಲ್ಲ. ಆಗ ನಂಬಿಕಸ್ತರು ಇದ್ದರು. ಈ ಜಗತ್ತಿನಲ್ಲಿ ಇಷ್ಟೊಂದು ಚಟುವಟಿಕೆಗಳು ಇರುತ್ತಿರಲಿಲ್ಲ. ಇವತ್ತು ಏನಾಗಿದೆ ಎಂದರೆ ನೀರಿನ ಅಭಾವ ದಿನೇದಿನೇ ಜಾಸ್ತಿಯಾಗುತ್ತಿದೆ. ಚಿನ್ನ ಸಿಕ್ಕಿದರೂ ಕೂಡ ಕುಡಿಯುವುದಕ್ಕೆ ನೀರು ಸಿಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳೆ, ನಮ್ಮ ಹೊಲಕ್ಕೆ ನೀರು ಸಿಗುವುದಿಲ್ಲ ಎನ್ನುವಂತಹ ಸನ್ನಿವೇಶ ಇದೆ. ನೀವು ವಾದ ಮಾಡುವುದಕ್ಕೆ ಹೋದಾಗ ನಿಮಗೆ ಸಂಕಷ್ಟವು ಬಂದಾಗ ನೀವು ತಪ್ಪಿಸಿಕೊಳ್ಳುವುದಕ್ಕೆ ಎಷ್ಟು ಬೇಕೋ ಅಷ್ಟೇ ವಾದವನ್ನು ಮಾಡುತ್ತಾ ಬರುತ್ತಿದ್ದೀರಾ ಎಂದು ನನ್ನ ಭಾವನೆಯಾಗಿದೆ. ಅದು ನಿಮಗಷ್ಟೇ ಅಲ್ಲ, ಇದು ಹಿಂದೆ ನಾಲ್ಕಾರು ಸಲ ನಡೆದಿದೆ. ನೀವೇ ಇಲ್ಲಿ ರಾಜ್ಯದ ತಮಿಳುನಾಡು ರಾಜ್ಯದ ಮುಖ್ಯಮಂತ್ರಿಯನ್ನು ಹಣ್ಣೋ ಕಾಯೋ ಪೂಜೆ ಮಾಡುವುದಕ್ಕೆ ಕರೆದುಕೊಂಡು ಹೋಗಿ ಅವರನ್ನು ಬಾಯಿ ಮಾತಿಗಾದರೂ ಕರೆಯುವುದಾಗಲಿ ಮತ್ತು ಅವರು ನಿಮ್ಮ ಜೊತೆಯಲ್ಲಿ ಬಂದು ಮಾತುಕತೆಯನ್ನು ಆಡುವುದಾಗಲಿ ಅಥವಾ ನಮ್ಮನ್ನೆಲ್ಲಾ

ಆಳುತ್ತಿರೋ ಅಥವಾ ಸಂವಿಧಾನ ಒಕ್ಕೂಟದ ವ್ಯವಸ್ಥೆಯನ್ನು ಎದುರಿಸುವುದಕ್ಕೆ ನಮ್ಮ ರಕ್ಷಣೆಯನ್ನು ಕೊಡುವುದಕ್ಕೆ ನಿಂತಿರುವಂತಹ ಪಾರ್ಲಿಮೆಂಟ್ ಸದಸ್ಯರಾಗಲಿ ಈ ದೇಶದ ಪ್ರಧಾನ ಮಂತ್ರಿಗಳು ಎನಿಸಿಕೊಂಡವರು ಆಗಲಿ ಇದರ ಬಗ್ಗೆ ಜವಾಬ್ದಾರಿಯನ್ನು ತೆಗೆದುಕೊಂಡು ಇದಕ್ಕೆ ಶಾಶ್ವತವಾದಂತಹ ಪರಿಹಾರವನ್ನು ಕಂಡುಹಿಡಿಯಬೇಕಾಗಿದೆ. ಈ ಕೆ.ಆರ್.ಎಸ್. ಅಣೆಕಟ್ಟೆಯನ್ನು ಕಟ್ಟಿರುವುದು ನನಗೆ ಗೊತ್ತಿರುವ ಹಾಗೆ ಆ ಕಾಲದಲ್ಲಿ ಮಹಾರಾಜರಾದ ಶ್ರೀ ಕೃಷ್ಣರಾಜೇಂದ್ರ ಓಡೆಯಾರ್‌ರವರು, ಶ್ರೀ ವಿಶ್ವೇಶ್ವರಯ್ಯನವರೋ ಈ ಭಾಗದ ಜನರಿಗೆ ಈ ನಾಡಿನ ಜನರಿಗೆ ಈ ಸಂಸ್ಥಾನದ ಜನರಿಗೆ ಕುಡಿಯುವುದಕ್ಕೆ ಮತ್ತು ಹೊಲಗದ್ದೆಗಳಿಗೆ ಕಟ್ಟಿದ್ದಾರೆಂದು ನಾನು ಭಾವಿಸಿದ್ದೆ. ಈಚೆಗೆ ಮಾಜಿ ಮುಖ್ಯಮಂತ್ರಿಗಳಾದ ಮಾನ್ಯ ನಿಜಲಿಂಗಪ್ಪನವರು, ಶ್ರೀ ಡಿ. ದೇವರಾಜ ಅರಸುರವರು ಅಥವಾ ಇತ್ತೀಚೆಗೆ ಬಂದಂತಹ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣ, ಶ್ರೀ ಹೆಚ್.ಡಿ. ದೇವೇಗೌಡ ಯಾರ ಕಾಲದಲ್ಲಿಯೋ ಈ ಕಬಿನಿ ಜಲಾಶಯವನ್ನು ಆಯಾಯ ಕಾಲಕ್ಕೆ ಕಟ್ಟಿ ಕಂಪ್ಲೀಟ್ ಮಾಡಿದ್ದಾರೆ. ನಾವು ತುಂಬಿಸಿಕೊಂಡಿರುವಂತಹ ನೀರನ್ನು ತಮಿಳುನಾಡಿನ ಜನರು ಸಂಕಷ್ಟದಲ್ಲಿದ್ದಾರೆ ಅವರಿಗೆ ನೀರನ್ನು ಕೊಡಬೇಕು ಎಂದರೆ ಯಾವುದೋ ಒಂದು ಸಲ ನಮ್ಮ ಮನೆಯ ನೀರನ್ನು ಕೊಡಬಹುದು. ನಾವು ಮಡಿಕೆ ಕುಡಿಕೆಯಲ್ಲಿ ತುಂಬಿಕೊಂಡಿರುವಂತಹ ನೀರನ್ನು ಪಕ್ಕದ ಮನೆಯಲ್ಲಿ ಹಬ್ಬವೆಂತಲೋ, ಮದುವೆಯಂದೋ ನೀರನ್ನು ಕೊಡಬಹುದು. ಅವರು ಪ್ರತಿದಿನವು ಕೇಳುತ್ತಲೆ ಇದ್ದಾರೆಂದರೆ ರಾಜ್ಯದ ಸಾಮಾನ್ಯ ಜನರಿಗೆ ಒಂದು ರೀತಿಯ ಸಂಶಯ ಬರುತ್ತದೆ. ಏತಕ್ಕಾಗಿ ಹೀಗೆ ಆಗುತ್ತದೆ ? ನಾವು ಕಟ್ಟಿಕೊಂಡಿರುವಂತಹ ಅನೆಕಟ್ಟಿನಲ್ಲಿರುವಂತಹ ನೀರು ನಮಗೇ ಇಲ್ಲದಿರುವಾಗ, ನಮ್ಮ ಮನೆಯಲ್ಲಿ ಮಡಿಕೆ ಕುಡಿಕೆಯಲ್ಲಿಯೇ ನೀರು ಇಲ್ಲದೆ ಇರುವಾಗ ನೀರು ಕೊಡಿ ಎಂದು ಕೇಳುವುದು ಯಾವ ನ್ಯಾಯ ಎನ್ನುವಂತಹ ಅನುಮಾನ ಶುರುವಾಗುತ್ತದೆ. ಇದಕ್ಕಾಗಿ ಶಾಶ್ವತವಾದಂತಹ ಪರಿಹಾರವನ್ನು ಕಂಡುಹಿಡಿಯಬೇಕು. ಪಕ್ಕದ ರಾಜ್ಯದ ಮುಖ್ಯಮಂತ್ರಿಗಳೊ ಅಥವಾ ದೇಶದ ಪ್ರಧಾನ ಮಂತ್ರಿಗಳೊ ನೀವು ಮತ್ತು ನಿಮ್ಮ ಲಾಯರ್‌ಗಳು ಎಲ್ಲರೂ ಕೂಡ ಇನ್ನೊಂದು ಸಫರೇಟಾಗಿ ಡ್ಯಾಂ ಅನ್ನು ಎಲ್ಲಿಯಾದರೂ ಕಟ್ಟಿಕೊಳ್ಳುವುದಾಗಲಿ, ಇಂತಹ ಸಂಕಷ್ಟದಲ್ಲಿ ನೀರನ್ನು ಬಿಟ್ಟುಕೊಳ್ಳುವುದಕ್ಕೆ ಆಗುತ್ತದೆ. ಏನು ಫ್ಲಡ್ ಬಂದು ಕೊಚ್ಚಿಕೊಂಡು ಹೋಗಿ ಸಮುದ್ರಕ್ಕೆ ನೀರು ಸೇರುತ್ತಿದ್ದು ಆವತ್ತು ಕರ್ನಾಟಕ ರಾಜ್ಯದ್ದು ಮತ್ತು ತಮಿಳುನಾಡಿನ ಎರಡು ರಾಜ್ಯದ ಆಸಕ್ತಿಯನ್ನು ತೆಗೆದುಕೊಂಡು ಬೇಕಾದರೆ ವಿದ್ಯುತ್ ಬಳಕೆ ಇಲ್ಲದೆ ಇದ್ದರೆ ನಾವು ವಿದ್ಯುತ್ ಅನ್ನು ಬಳಸಿಕೊಳ್ಳಬೇಕು. ಮಾನ್ಯ

ಮುಖ್ಯಮಂತ್ರಿಗಳೆ, ನೀರನ್ನು ಕೊಡುವುಕ್ಕಾದರೂ ಡ್ಯಾಂ ಅನ್ನು ಕಟ್ಟಬೇಕು. ಇಲ್ಲವೆಂದರೆ ಹೇಗೋ ತಪ್ಪಿಸಿಕೊಳ್ಳುವುದಕ್ಕೆ ಈ ವಾದವನ್ನು ಮಾಡಿ ರಾಜ್ಯದ ಜನರಿಗೆ ಇವತ್ತು ಎಲ್ಲವು ಗೊತ್ತಿದೆ. ಏನಾದರೂ ಆಗಲಿ ಸುಪ್ರೀಂಕೋರ್ಟು ಆದೇಶವನ್ನು ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ನೀರನ್ನು ರಾತ್ರೋ ರಾತ್ರಿ ಬಿಟ್ಟುಬಿಡುತ್ತಾರೆ. ಈ ಸದನವನ್ನು ಮುಂದಕ್ಕೆ ಹಾಕಿಯಾದರೂ ಸರಿಯೇ ನೀರನ್ನು ಬಿಡುತ್ತಾರೆಂದು ಜನರು ಮಾತನಾಡಿಕೊಳ್ಳುತ್ತಾರೆ. ನಾವು ಈ ಕಡೆಯಲ್ಲಿ ವಾದವನ್ನು ಮಾಡುತ್ತಲೇ ಇದ್ದೇವೆ. ನೀವು ಏನೋ ಈ ಸಂಕಷ್ಟದ ಪರಿಸ್ಥಿತಿಯಲ್ಲಿ ತಪ್ಪಿಸಿಕೊಳ್ಳುವುದಕ್ಕಾಗಿ ನೀವು ಏನು ಮಾಡಬೇಕೋ ಅದನ್ನು ಮಾಡುತ್ತೀರಿ. ಇಲ್ಲಿ ನಾನು ಏನು ಹೇಳುತ್ತೇನೆಂದರೆ, ಇದಕ್ಕೆ ಶಾಶ್ವತವಾದಂತಹ ಪರಿಹಾರವನ್ನು ಕಂಡುಹಿಡಿಯಬೇಕು. ನಾವೆಲ್ಲರೂ ಮನುಷ್ಯರು, ನೀರು, ಗಾಳಿಯನ್ನು ಯಾರು ಕಟ್ಟಿಕೊಳ್ಳುವುದಕ್ಕಾಗುವುದಿಲ್ಲ. ನಮ್ಮ ಮನೆಯ ನೀರನ್ನು ನಾನೇ ಇಟ್ಟುಕೊಳ್ಳುವುದಾಗಲಿ, ನಮ್ಮ ಮನೆಯ ಕರೆಂಟನ್ನು ನಾನೇ ಇಟ್ಟುಕೊಳ್ಳುವುದಾಗಲಿ ನಾನು ತಿರುಗಾಡುವಂತಹ ದಾರಿಯನ್ನು ನಾನು ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಅದನ್ನು ಕೊಡಲೇಬೇಕು ಹಾಗೂ ತೆಗೆದುಕೊಳ್ಳಲೇಬೇಕು. ಇದಕ್ಕೆ ಶಾಶ್ವತವಾದಂತಹ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ನೀವು ಒಂದು ಆಹ್ವಾನವನ್ನು ಕೊಡಿ. ಕೊನೆಗೆ ಅದಕ್ಕಾದರೂ ಒಂದು ಹೊಸ ಡ್ಯಾಂ ಅನ್ನು ಕಟ್ಟುವುದಾಗಲಿ. ನೀವು ಅದಕ್ಕಾಗಿ ಎಷ್ಟು ಜಾಗವನ್ನು ಕೊಡುತ್ತಿರೋ, ಅವರು ಎಷ್ಟು ಜಾಗವನ್ನು ಕೊಡುತ್ತಾರೋ, ನೀವು ಎಷ್ಟು ಬಂಡವಾಳವನ್ನು ಹಾಕುತ್ತಿರೋ, ಅವರು ಎಷ್ಟು ಬಂಡವಾಳವನ್ನು ಹಾಕುತ್ತಾರೋ, ಈ Cheap Popularity ಮಾಡಿ ಈ ದೇಶದಲ್ಲಿ ಈ ದೇಶವೇ ಹಾಳಾಗಿ ಹೋಗುತ್ತಿದೆ. ಅದನ್ನು ಕೊಡುತ್ತೇವೆ ಇದನ್ನು ಕೊಡುತ್ತೇವೆ ಸಾಲ ಮನ್ನಾ ಮಾಡುತ್ತೇವೆ, ಸೈಕಲ್ ಅನ್ನು ಕೊಡುತ್ತೇವೆ, ತಾಳಿಯನ್ನು ಕೊಡುತ್ತೇವೆ ಎಲ್ಲವನ್ನು ಕೊಡುತ್ತೇವೆಂದು ಹೇಳುತ್ತೀರಿ. ಇದು ಕೇಂದ್ರ ಸರ್ಕಾರದ ದುಡ್ಡು, ರಾಜ್ಯ ಸರ್ಕಾರದ ದುಡ್ಡು ಎಂದು ಹೇಳುತ್ತೀರಿ. ಇವೆಲ್ಲವನ್ನು ಬಿಟ್ಟು ಕೇಂದ್ರ ಸರ್ಕಾರದವರನ್ನು ಒಳಗೊಂಡಂತೆ ತಮಿಳುನಾಡು ಸರ್ಕಾರ, ಕರ್ನಾಟಕ ಸರ್ಕಾರ ಮೂರು ಸರ್ಕಾರಗಳು ಸೇರಿ ತಜ್ಞರನ್ನು, ಬುದ್ಧಿವಂತರನ್ನು Legal Advisor ಅನ್ನು ಇಟ್ಟುಕೊಂಡು ಒಂದು ಹೊಸ ಡ್ಯಾಂ ಅನ್ನು ಕಟ್ಟಿ ಅದರಲ್ಲಿ ವಿದ್ಯುತ್ ಉತ್ಪಾದನೆಯನ್ನು ಮಾಡುವುದಾಗಲಿ ಇಂತಹ ಸಂಕಷ್ಟದಲ್ಲಿ ನೀರನ್ನು ಕೊಡುವುದಕ್ಕೆ ಏನು flood ಬಂದು ಕೊಚ್ಚಿಹೋಗುವಾಗ ಯಾರು ನೀರನ್ನು ಕೇಳುವುದಿಲ್ಲ. ತಮಿಳುನಾಡಿನವರು ಈಗ ಬ್ಯಾಕ್‌ಲಾಗ್ ನೀರನ್ನು ಕೇಳುತ್ತಿದ್ದಾರೆಯೇ? ಎಂದರೆ ಹೆಚ್ಚಾಗಿ ಹೋಗಿರುವಂತಹ ನೀರನ್ನು ಅವರು ನಮಗೆ ವಾಪಸ್ ತಿರುಗಿಸಿಕೊಡುತ್ತಾರೆಯೇ ?

ಇವೆಲ್ಲವೂ ಆಗುವುದಿಲ್ಲ. ಇವೆಲ್ಲವನ್ನು ಕೂಡ ನೀವು ಈ ವಿಚೇಚನೆಯನ್ನು ಇಟ್ಟುಕೊಂಡು ಮುಂದಾಲೋಚನೆಯನ್ನು ಇಟ್ಟುಕೊಂಡು ಒಂದು ರೀತಿಯಲ್ಲಿ ಶಾಶ್ವತವಾದಂತಹ ಪರಿಹಾರಕ್ಕೆ ನೀವು ಮುಂದಾಗಬೇಕು. ಈ ಬಗ್ಗೆ ನೀವು ಕೇಂದ್ರ ಸರ್ಕಾರಕ್ಕೆ ಮನವರಿಕೆಯನ್ನು ಮಾಡಿಕೊಡಬೇಕು. ಈ ಬಗ್ಗೆ ಜಡ್ಜ್‌ಗಳಿಗೂ ಸಹ ಮನವರಿಕೆಯನ್ನು ಮಾಡಿಕೊಡಬೇಕು. ಸುಪ್ರೀಂಕೋರ್ಟಿನ ಬಗ್ಗೆ ನಿನ್ನೆ ಯಾವುದೋ ಒಂದು ನ್ಯೂಸ್ ಚಾನಲ್‌ನಲ್ಲಿ ಕುಳಿತುಕೊಂಡು ಮಾತನಾಡುವಾಗ ಈ ಬಗ್ಗೆ ಮಾನ್ಯ ಸುಬ್ಬಯ್ಯನವರು ಹೇಳುತ್ತಿದ್ದರು. ನಾವು ಸಂವಿಧಾನಕ್ಕೆ ವಿರುದ್ಧವಾಗಿ ಸುಪ್ರೀಂಕೋರ್ಟಿನ ಆರ್ಡರ್ ಅನ್ನು ತಿರಸ್ಕಾರ ಮಾಡಿದರೆ ನಾವು ಉಳಿಯುವುದಕ್ಕೆ ಸಾಧ್ಯವೇ ? ಈ ಮಳೆ ನೀರು ಸ್ವಾಭಾವಿಕವಾಗಿ ಗಾಳಿ ಮತ್ತು ಬೆಳಕನ್ನು ಯಾರೋ ಅಂಗಡಿಯಲ್ಲಿ ತೆಗೆದುಕೊಂಡು ಇಟ್ಟುಕೊಂಡು ಕೊಡುವುದಕ್ಕಾಗುತ್ತದೆಯೇ? ಅದನ್ನು ತೆಗೆದುಕೊಳ್ಳುವುದಕ್ಕಾಗುತ್ತದೆಯೇ ? ಇದು ಸಾಧ್ಯವೆ ಇಲ್ಲ. ಈ ಪ್ರಕೃತಿ ಹೇಗೆ ಬರುತ್ತದೆಯೋ ಹಾಗೆ ಹೊಂದಾಣಿಕೆಯನ್ನು ಮಾಡಿಕೊಂಡು ಹೋಗಬೇಕಾಗುತ್ತದೆ. ನಾನು ಅಲ್ಲಿ ಕುಳಿತುಕೊಂಡು ಏನು ಹೇಳುತ್ತೇನೆಂದರೆ, ಕೋರ್ಟಿನಲ್ಲಾಗಲಿ, ಕೇಂದ್ರ ಸರ್ಕಾರದವರಾಗಲಿ ಅಥವಾ ನೀವಾಗಲಿ ಭರಣಿ ಮಳೆಯ ನೀರು ಇಷ್ಟೇ ಅಡಿ ನೀರು ಬರಬೇಕೆಂದರೆ ಅಲ್ಲಿ ಹುಯ್ಯುತ್ತಾ ಮಳೆ ? ಅಥವಾ ಉತ್ತರೆ ಮಳೆ ನೀರು ಇಷ್ಟೇ ಅಡಿ ನೀರನ್ನು ಬಿಡಬೇಕೆಂದು ನಾವು ಕಾನೂನನ್ನು ಮಾಡಿಕೊಂಡು ನಾವು ಇಟ್ಟುಕೊಂಡಿದ್ದೇವಾ? ಅದರಿಂದ natureಗೆ ತಕ್ಕಂತ ಈ ಪ್ರಕೃತಿಯ ಬದಲಾವಣೆಯ ಹವಮಾನದ ಬದಲಾವಣೆಗೆ ತಕ್ಕಂತೆ ಇವೆಲ್ಲದರ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡಿ ಒಂದು ಹೊಸ ಡ್ಯಾಂ ಅನ್ನು ಕಟ್ಟಿದರೂ ಕೂಡ ಆ ಬಳಕೆಯನ್ನು ಇಂತಹ ಸಂಕಷ್ಟದಲ್ಲಿ ನೀರನ್ನು ಬಳಕೆ ಮಾಡಿಕೊಂಡು ವಿದ್ಯುತ್ ಅನ್ನು ಉತ್ಪಾದನೆಯನ್ನು ಮಾಡಿ ವಿದ್ಯುತ್ ಇಲ್ಲದಿರುವ ಕಡೆಗೆ ವಿದ್ಯುತ್ ಅನ್ನು ಕೊಟ್ಟು ಇದಕ್ಕೆ ಯಾರ್ಯಾರೋ ಬಂಡವಾಳವನ್ನು ಹಾಕಿರಲಿ ಇದನ್ನು ಹಂಚಿಕೆ ಮಾಡಿಕೊಳ್ಳುವುದು ಒಳ್ಳೆಯದು ಎನ್ನುವಂತಹ ಮಾತನ್ನು ಹೇಳಿ ಇವತ್ತು ಏನೋ ಇಲ್ಲಿ ಕೆಟ್ಟ ಪರಿಸ್ಥಿತಿ ಇದೆ ನೀರಿನ ಪರಿಸ್ಥಿತಿ ಕೆಟ್ಟಿದ್ದು ಯಾವಾಗ ಅಂದರೆ ಈ ಜಗಳವು ಜೂನ್–ಜುಲೈನಲ್ಲಿ ಶುರುವಾಗಿದ್ದು, ಅಕಸ್ಮಾತ್ ಆ ತಿಂಗಳಲ್ಲಿ ಮಳೆಯು ಬಂದಿದ್ದರೆ ಅದು ಉಂಟು. ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗ ಇದೇ ರೀತಿಯಲ್ಲಿ ದೊಡ್ಡ ಜಗಳವು ಶುರುವಾಯಿತು. ಆಗ ಮೂರು ದಿನದಲ್ಲಿಯೇ ಡ್ಯಾಂ ತುಂಬಿಹೋಯಿತು. ಆ ವಿಚಾರವು ನಿಂತುಹೋಯಿತು. ನಿಮ್ಮ ಕಾಲದಲ್ಲಿಯೂ ಕೂಡ ಹೀಗೆ ಆಯಿತು. ಅಂದರೆ ಮೊನ್ನೆಯೂ ಕೂಡ ಇಂತಹ ಜಗಳವಾದಾಗ ಮಳೆ ಬಂದು ಜಗಳವು ನಿಂತುಹೋಯಿತು. ಇಂತಹ ಮಳೆ ಬರದೆ ಇರುವಂತಹ ಕಾಲದಲ್ಲಿ ಇನ್ನೂ ನವೆಂಬರ್ ಡಿಸೆಂಬರ್ ತಿಂಗಳಲ್ಲಿ

ಜಗಳವು ಶುರುವಾಯಿತು. ಇದಕ್ಕೆ ಸಮಗ್ರವಾದಂತಹ ವಿವೇಚನೆಯನ್ನು ಇಟ್ಟುಕೊಂಡು, ದೂರದೃಷ್ಟಿಯನ್ನು ಇಟ್ಟುಕೊಂಡು ನಾವು ನೆರೆಹೊರೆಯ ರಾಜ್ಯಗಳು ಯಾವಾಗಲೂ ಕೂಡ ಸಮಾಧಾನವಾಗಿರಬೇಕೆನ್ನುವಂತಹ ದೃಷ್ಟಿಯಲ್ಲಿ ಇದು ಎರಡು ರಾಜ್ಯದ ಜನರ interest ಆಗಿದೆ. ಏನಾಗುತ್ತದೆ ಎಂದು ಇಲ್ಲಿ ನಾವೆಲ್ಲರೂ ಗುದ್ದಾಡಿಕೊಂಡು ಇದ್ದರೆ ಜನರು ಸುಮ್ಮನಿರುವುದಕ್ಕಾಗುತ್ತದೆಯೇ ? ಏ, ನಮ್ಮ ಲೀಡರ್ ಎಲ್ಲರೂ ಅಲ್ಲಿಗೆ ಹೋಗಿದ್ದಾರೆ ನಮ್ಮ ಜನರು ಅಲ್ಲಿ ಕೇಳುತ್ತಿದ್ದಾರೆ ಇವರು ಅಲ್ಲೆಲ್ಲೋ ಅಡ್ಡವನ್ನು ಹಾಕುವುದು ಅವರು ಅಲ್ಲೆಲ್ಲೋ ಅಡ್ಡವನ್ನು ಹಾಕುವುದು ಅವರ ಜನರು ಇಲ್ಲಿ ತಿರುಗಾಡುವಹಾಗಿಲ್ಲ. ಈ ಜನರು ಅಲ್ಲಿ ತಿರುಗಾಡುವಹಾಗಿಲ್ಲ. ಇಂತಹ ಒಂದು ಪರಿಸ್ಥಿತಿ ಸಾರ್ವಜನಿಕರ ಆಸ್ತಿಪಾಸ್ತಿಗಳಿಗೂ ಕೂಡ ನಷ್ಟವಾಗುತ್ತದೆ. ಈ ಬಗ್ಗೆ ದೂರದೃಷ್ಟಿಯನ್ನು ಇಟ್ಟುಕೊಂಡು ನೀವು ಸಮಗ್ರವಾಗಿ ನಿಮ್ಮ ಕಾಲಕ್ಕೆ ಆದರೂ ಕೂಡ ಇದಕ್ಕೊಂದು ಅಂತ್ಯ ಹಾಡತಕ್ಕಂತಹ ಒಂದು ಆರಂಭವಾದರೂ ಆಗಲಿ ಎನ್ನುವಂತಹ ಮಾತನ್ನು ಹೇಳಿ ಇವತ್ತು ಏನು ಸಂಕಷ್ಟದಲ್ಲಿದ್ದೀರಿ. ಈ ನೀರನ್ನು ಕೊಡುವುದಕ್ಕೆ ನಮ್ಮ ಕಷ್ಟ ಎಷ್ಟು ಇದೆ ಎನ್ನುವುದನ್ನು ನೀವೇ ಅರ್ಥಮಾಡಿಕೊಂಡು ಸುಪ್ರೀಂಕೋರ್ಟು ಮತ್ತು ಕೇಂದ್ರ ಸರ್ಕಾರಕ್ಕೆ ನೀರನ್ನು ಕೊಡಬಾರದು ಎನ್ನುವಂತಹ ಮಾತನ್ನು ಹೇಳಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಬಿ.ಎನ್. ವಿಜಯಕುಮಾರ್ (ಜಯನಗರ) :– ಮಾನ್ಯ ಅಧ್ಯಕ್ಷರೆ, ಪ್ರತಿ ಸಾರಿಯೂ ನೀರು ಹೆಚ್ಚು ಕಡಿಮೆ ಆದಾಗ ಮಳೆ ಬಾರದೆ ಇದ್ದಾಗ ಹೋರಾಟಗಳು ನಡೆಯುತ್ತಿರುವುದನ್ನು ನಾವೆಲ್ಲರೂ ಗಮನಿಸಿದ್ದೇವೆ. ಹಿಂದಿನ ಸರ್ಕಾರಗಳಲ್ಲಿ ಏನೇನು ತಪ್ಪುಗಳು ಆಗಿದೆ, ನೀರು ಬಿಟ್ಟ ಮೇಲೆ ಕೋರ್ಟಿಗೆ ಹೋಗಿರುವುದಾಗಲಿ, ಕೋರ್ಟಿನ ಆದೇಶದ ಮೇರೆ ನೀರು ಬಿಟ್ಟಿರುವುದಾಗಲಿ ಎಲ್ಲವೂ ಆಗಿದೆ. ಆದರ ಬಗ್ಗೆ ಎಷ್ಟು ಚರ್ಚೆ ಮಾಡಿದರೂ ಈಗ ಉಪಯೋಗಕ್ಕೆ ಬರುವುದಿಲ್ಲವೆಂದು ಕಾಣಿಸುತ್ತದೆ. ಈಗ ನಾನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ನಿಮ್ಮ ಮೂಲಕ ಕೇಳುತ್ತೇನೆ. ಈಗ ತಕ್ಷಣದಲ್ಲಿ ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿ ಕೇಂದ್ರದ ನೀರಾವರಿ ಮಂತ್ರಿಗಳನ್ನು ಭೇಟಿ ಮಾಡಿ ರಾಜ್ಯದ ಎಲ್ಲಾ ಎಂಪಿಗಳು ವಿರೋಧಪಕ್ಷದ ನಾಯಕರೆಲ್ಲರನ್ನು ಕರೆದುಕೊಂಡು ಹೋಗಿ ತಕ್ಷಣ ಭೇಟಿ ಮಾಡಿ ಇದಕ್ಕೊಂದು ಶಾಶ್ವತವಾದಂತಹ ಪರಿಹಾರವನ್ನು ಹುಡುಕುವಂತಹ ಒಂದು ಪ್ರಯತ್ನವನ್ನು ದಯವಿಟ್ಟು ಮಾಡಬೇಕೆನ್ನುವಂತಹ ಬೇಡಿಕೆಯನ್ನು ಮಾಡುತ್ತೇನೆ. ನಿಜವಾಗಿಯೂ ಬೆಂಗಳೂರಿಗೆ ಹೆಚ್ಚು ಸಮಸ್ಯೆಯಾಗುತ್ತದೆ. ಈ ನಗರಕ್ಕೆ 30 ಟಿಎಂಸಿ ನೀರು ಬೇಕಾಗುತ್ತದೆ. ಇಡೀ ರಾಜ್ಯದಲ್ಲಿ ಕುಡಿಯುವುದಕ್ಕೆ ನೀರಿನ ಸಮಸ್ಯೆಯಾದರೂ

ಕೂಡ ಬೆಂಗಳೂರಿಗೆ ಜಾಸ್ತಿ ಅದರ ಪರಿಣಾಮ ಅಥವಾ ಕೆಟ್ಟ ಪರಿಣಾಮವಾಗುತ್ತದೆ. ಅದಕ್ಕಾಗಿ ದಯಮಾಡಿ ನಿಮ್ಮಲ್ಲಿ ಒಂದು ವಿನಂತಿಯನ್ನು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಈ ಬಗ್ಗೆ ತಕ್ಷಣ ಗಮನವನ್ನು ಕೊಟ್ಟು ಅಲ್ಲಿಗೆ ಒಂದು ನಿಯೋಗವನ್ನು ಕರೆದುಕೊಂಡು ಹೋಗಿ ಕೇಂದ್ರದ ಮಂತ್ರಿಗಳನ್ನು ಮತ್ತು ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿ ಈ ಸಮಸ್ಯೆಗೊಂದು ಶಾಶ್ವತವಾದಂತಹ ಪರಿಹಾರವನ್ನು ತಂದುಕೊಡಬೇಕೆನ್ನುವಂತಹ ವಿನಂತಿಯನ್ನು ಮಾಡುತ್ತೇನೆ.

ಶ್ರೀ ರಮೇಶ್ ಬಂಡಿಸಿದ್ದೇಗೌಡ (ಶ್ರೀರಂಗಪಟ್ಟಣ) :– ಇವತ್ತು ಕಾವೇರಿ ವಿಚಾರದಲ್ಲಿ ಅತ್ಯಂತ ಸೂಕ್ಷ್ಮವಾದ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅನೇಕ ಸರ್ಕಾರಗಳು ನೀರು ಬಿಡುವುದಿಲ್ಲವೆಂದು ಹೇಳಿ ನೀರು ಬಿಟ್ಟಂಥ ಉದಾಹರಣೆಗಳು ಸಹ ನಮ್ಮ ಮುಂದೆ ಇವತ್ತು ಇವೆ. ಇದು ವಾಸ್ತವ ಕೂಡ, ಆದರೆ ಇವತ್ತಿನ ನಮ್ಮ ಪರಿಸ್ಥಿತಿ ಏನಾಗಿದೆ ಎಂದರೆ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಂಥ ಸಂದರ್ಭದಲ್ಲಿ ಭತ್ತ ಒಡೆಯಲಿಕ್ಕೆ ಬೆಳೆ ಬಂದಿದೆ ಅದು ಕಾಳು ಆಗಬೇಕಾದರೆ ನಾವು ನೀರು ಕೊಡಲೇಬೇಕು. ನೀರು ಕೊಡಲಿಲ್ಲವೆಂದರೆ ಯಾವುದೇ ಕಾರಣಕ್ಕೂ ನಮಗೆ ಬೆಳೆದಿರುವಂಥ ಭತ್ತ ನಮ್ಮ ರೈತರಿಗೆ ಸಿಗುವ ಪ್ರಶ್ನೆಯೇ ಇಲ್ಲ ಎಂಬ ಮಾತನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಜೊತೆಗೆ ನಾಳೆ ಕೇಂದ್ರ ಸರ್ಕಾರವನ್ನು ಭೇಟಿ ಮಡುವ ಸಂದರ್ಭದಲ್ಲಿಯೂ ಸಹ ನಮ್ಮ ವಿರೋಧ ಪಕ್ಷದ ಮುಖಂಡರುಗಳನ್ನು, ನಾಯಕರುಗಳನ್ನು ಸೇರಿಸಿಕೊಂಡು ಸಂಸದರ ಜೊತೆಗೆ ನಮ್ಮ ರೈತರ ಕಷ್ಟವನ್ನು ಮನವರಿಕೆ ಮಾಡಿಕೊಡುವ ದಿಕ್ಕಿನಲ್ಲಿ ತಾವು ಶ್ರಮ ವಹಿಸಬೇಕೆಂದು ತಮ್ಮಲ್ಲಿ ಕೋರಲಿಕ್ಕೆ ಇಚ್ಛೆಪಡುತ್ತೇನೆ. ಮತ್ತೆ ಇವತ್ತು ನಮ್ಮ ಪರಿಸ್ಥಿತಿ ಹೇಗಿದೆ ಎಂದರೆ ನಾವು ಪ್ರತಿ ದಿವಸ 4–5 ಸಾವಿರ ಕ್ಯೂಸೆಕ್ಸ್ ನೀರು ತಮಿಳುನಾಡಿನ ಬಿಳಿಗುಂಡ್ಲುಗೆ ಹೋಗುತ್ತಿದೆ. ಇವತ್ತು ನಾವು ತಿಳಿದ ಪ್ರಕಾರ 4,900 ಚಿಲ್ಲರೆ ನೀರು ತಮಿಳುನಾಡಿನ ಬಿಳಿಗುಂಡ್ಲುಗೆ ಹೋಗುತ್ತಿದೆ. ನಾವು ಕೊಡತಕ್ಕಂಥ ನೀರಿನೊಂದಿಗೆ ಹೆಚ್ಚುವರಿಯಾಗಿ 5000 ಕ್ಯೂಸೆಕ್ಸ್ ನೀರು ಕೇಳುತ್ತಿದ್ದಾರೆ. ದಯಮಾಡಿ ಕೇಂದ್ರ ಸರ್ಕಾರಕ್ಕೆ ನಮ್ಮ ಕಷ್ಟವನ್ನು ಮನದಟ್ಟು ಮಾಡಿಕೊಡಬೇಕು. ಇವತ್ತೇನು ನೀರು ಬಿಡಲಿಕ್ಕೆ 5 ದಿವಸಗಳ ಸಮಯ ಕೇಳಿದ್ದಾರೆ ಅದನ್ನು 10 ದಿವಸಗಳೆಂದು ಸಮಯ ತೆಗೆದುಕೊಂಡು ಕೇಂದ್ರ ಸರ್ಕಾರಕ್ಕೆ ಅದನ್ನು ಮನವರಿಕೆ ಮಾಡಿಕೊಟ್ಟರೆ ನಮ್ಮ ಸಮಸ್ಯೆ ಪರಿಹಾರವಾಗುತ್ತದೆ ಎನ್ನುವ ನಮ್ಮ ಮನವಿಯನ್ನು ತಮ್ಮ ಮುಂದ ಇಡಲಿಕ್ಕೆ ಇಷ್ಟಪಡುತ್ತೇನೆ. ಇವತ್ತು ನೀರು ಬಿಡಲೇಬೇಕಾದಂಥ ಪರಿಸ್ಥಿತಿ ಬಂದರೆ ನಾನು ಒತ್ತಾಯ ಮಾಡುತ್ತೇನೆ. ರೈತರಿಗೆ ಪರಿಹಾರ

ಕೊಡುವಂಥ ದಿಕ್ಕಿನಲ್ಲಿ ನೀವು ನಾಳೆ ಸಂಸದರ, ವಿರೋಧಪಕ್ಷದ ನಾಯಕರುಗಳನ್ನು ಕರೆದುಕೊಂಡು ಹೋಗಿ ಕೇಂದ್ರ ಸರ್ಕಾರದ ಜೊತೆ ಏನು ಮನವಿ ಮಾಡುತ್ತೀರಿ ರೈತರಿಗೆ ಪರಿಹಾರ ಕೊಡುವ ನಿಟ್ಟಿನಲ್ಲಿ ನೀವು ಈಗಲೇ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲವಾದಲ್ಲಿ ಇವತ್ತೇನು ಜನರು ರಸ್ತೆಯಲ್ಲಿ ನಿಂತಿದ್ದಾರೆ, ರೈತರು ಬೀದಿಗೆ ಬಿದ್ದಿದ್ದಾರೆ ನಿಜವಾಗಲೂ ಅವರ ಪರಿಸ್ಥಿತಿ ಹೇಳತೀರಲಿಕ್ಕಾಗದ ರೀತಿಯಲ್ಲಿ ಪರಿಸ್ಥಿತಿಯನ್ನು ಮುಟ್ಟುತ್ತದೆ. ಒಂದು ಕಡೆ ನೀವು 25000 ಸಾಲವನ್ನು ಪರಿಹಾರ ಮಾಡಿರುವಿರಿ, ಮನ್ನಾ ಮಾಡಿರುವಿರಿ. ಅದೇ ಹೊರೆ ಮತ್ತೆ ಬೀಳುತ್ತದೆ. ಆ ಹೊರೆಯನ್ನು ಹೊರುವವರು ಯಾರು ಎನ್ನುವಂಥ ಪ್ರಶ್ನೆ ಮತ್ತೆ ನಿಮ್ಮ ಮುಂದೆ ಹಾಗು ರೈತರ ಮುಂದೆ ಇದೆ. ಇವತ್ತು ಸ್ಪಷ್ಟವಾಗಿ ಸರ್ಕಾರ ಒಂದು ನಿಲುವನ್ನು ತೆಗೆದುಕೊಳ್ಳಲೇಬೇಕಾದಂಥ ಒಂದು ಅನಿವಾರ್ಯತೆ ಇದೆ. ಇಂಥ ಅನಿವಾರ್ಯತೆಯಿರುವ ಈ ಸಂದರ್ಭದಲ್ಲಿ ರೈತರ ಚಿಂತನೆಯನ್ನು, ಕಾಳಜಿಯನ್ನು ಗಮನದಲ್ಲಿಟ್ಟುಕೊಂಡು ತೀರ್ಮಾನ ತೆಗೆದುಕೊಳ್ಳಬೇಕು ಎಂಬ ಮನವಿಯನ್ನು ಮಾಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಬಿ. ಚಂದ್ರಶೇಖರ್ (ಕೆ.ಆರ್.ಪೇಟೆ) :– ಇವತ್ತು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ತಿಳಿಸುತ್ತೇನೆ. ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಅವರು ತಮ್ಮ ಹೇಳಿಕೆಗಳನ್ನು ಸದನದಲ್ಲಿ ಮಂಡಿಸಿದ್ದಾರೆ. ಅದರಲ್ಲಿ ಒಂದು ಮಾತನ್ನು ಹೇಳುತ್ತಾರೆ. ಈ ಮಧ್ಯ ಸಿಎಂಸಿ ಕೇಂದ್ರದ ತಂಡ ರಾಜ್ಯದಲ್ಲಿರುವಂಥ ನೀರು ಬೆಳೆ ಬೆಳೆಯಲಿಕ್ಕೆ ಮತ್ತೆ ಕುಡಿಯಲಿಕ್ಕೆ ಮಾತ್ರ ಸಾಧ್ಯವಾಗುತ್ತದೆಂದು ಹೇಳಿ ಒಂದು statement ಕೊಟ್ಟ ಮೇಲೆಯೂ ಸಹ ಸುಪ್ರೀಂಕೋರ್ಟ್ ಈ ರೀತಿ ಜಡ್ಜ್‌ಮೆಂಟ್ ಕೊಟ್ಟಿದ್ದಾರೆಂದು ಇದರ ಹಿಂದೆ ಏನಿದೆ ಎನ್ನುವುದನ್ನು ನಾವೆಲ್ಲರೂ ಯೋಚನೆ ಮಾಡತಕ್ಕಂಥ ಒಂದು ನಡವಳಿಕೆ ನಾವು ತೀರ್ಮಾನ ಮಾಡಬೇಕು. ಕೇಂದ್ರದಿಂದ ಕಳುಹಿಸಿರುವಂಥ ತಂಡದವರು ಈ ಕರ್ನಾಟಕ ರಾಜ್ಯದಲ್ಲಿರುವಂಥ ನೀರನ್ನು ತಂಡದವರೇ ಸಾಕಾಗುವುದಿಲ್ಲವೆಂದು ಹೇಳಿದ ಮೇಲೆ ಸುಪ್ರೀಂಕೋರ್ಟ್ ಮತ್ತೆ ಈ ರೀತಿ ಜಡ್ಜ್‌ಮೆಂಟ್ ಕೊಟ್ಟರೂ ಎಂದು ಹೇಳಿದ್ದಾರೆಂದರೆ ಇದರ ಬಗ್ಗೆ ನಾವು ಈ ರಾಜ್ಯದ ಜನ ಏನು ತೀರ್ಮಾನ ಮಾಡಬೇಕೆಂದು ಈ ಸಭೆ ತೀರ್ಮಾನ ಮಾಡಬೇಕು, ಏಕೆಂದರೆ ಇದರ ಹಿಂದೆ ಏನೆಲ್ಲಾ ಇದೆಯೆಂದು ನಾವು ಅರ್ಥ ಮಾಡಿಕೊಳ್ಳದೇ ಹೋದರೆ ಈ ದೇಶದ ಜನಪ್ರತಿನಿಧಿಗಳಾಗಿರುವಂಥ ನಾವು ಈಗ ನ್ಯಾಯಾಲಯಕ್ಕೆ ಗೌರವ ಕೊಡತಕ್ಕಂಥದ್ದು ನಿಜ, ಆದರೆ ನಮ್ಮ ಪ್ರಾಣ ಕಳೆದುಕೊಂಡರೂ ನ್ಯಾಯ ಕೊಡುವುದೆ ? ಹಾಗಾಗಿ ಈ

ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದು ಇಷ್ಟೆ, ಇವತ್ತಲ್ಲ ನಾಳೆ ಇದು ಕೊನೆಯಾಗಲಿಕ್ಕೆ ಏನಾದರೂ ಈಗಲೇ ಯೋಜನೆ ಮಾಡಬೇಕು ಇಲ್ಲವೇ 224 ಜನ ಶಾಸಕರನ್ನು ದೆಹಲಿಗೆ ಕರೆದುಕೊಂಡು ಹೋಗಿ. ಸುಪ್ರೀಂಕೋರ್ಟ್ ಮುಂದೆ ಸತ್ಯಾಗ್ರಹ ಮಾಡೋಣ. ಅದರ ಬಗ್ಗೆ ನಾವು ಯಾವುದೇ ತ್ಯಾಗಕ್ಕೂ ಸಿದ್ಧರಿದ್ದೇವೆ. ಅದನ್ನು ಬಿಟ್ಟು ಇಂಥ ಜಡ್ಜ್‌ಮೆಂಟ್‌ಗಳಿಗೆ ಒತ್ತು ಕೊಡುವಂಥದ್ದು ಆಗುವುದೇ ಆದರೆ ಮುಂದಿನ ದಿನಗಳಲ್ಲಿ ನಾವು ನಮ್ಮ ಮಕ್ಕಳಿಗೆ ಬರೆ ಎಳೆಯಬೇಕಾಗುತ್ತದೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಯಾವುದೇ ನ್ಯಾಯಾಲಯಗಳು ನ್ಯಾಯವನ್ನು ಕೊಡತಕ್ಕಂಥ ಸಂದರ್ಭದಲ್ಲಿ ಪ್ರಾಮಾಣಿಕವಾದಂಥ ಜವಾಬ್ದಾರಿಯನ್ನು ಅರಿತು ಕೆಲಸ ಮಾಡಬೇಕೆಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ನಮ್ಮನ್ನು ಜೈಲಿಗೆ ಹಾಕಲಿ, ಅದರ ಬಗ್ಗೆ ಎರಡನೇ ಪ್ರಶ್ನೆ ಇಲ್ಲ. ನನ್ನ ತಾಲ್ಲೂಕಿನಲ್ಲಿ ಒಂದು ಉದಾಹರಣೆಗೆ ಹೇಳುವುದಾದರೆ ಆರು ತಿಂಗಳು ಆದರೂ ಹೋದ ವರ್ಷ modernization ಮಾಡಬೇಕೆಂದು ಕಳೆದ ಸಾರಿ ಬೆಳೆಗೆ ನೀರು ಕೊಟ್ಟಿಲ್ಲ. ಈಗ ಈ ನೀರು ಕೊಟ್ಟಿದ್ದೇವೆ. ಸುಮಾರು 35–40 ಸಾವಿರ ಎಕರೆ ಬೆಳೆ ಬೆಳದು ನಿಂತಿದೆ. ಅವರಿಗೆ ಒಂದು ತಿಂಗಳು ಒಳಗೆ ನೀರು ಕೊಡಲಿಲ್ಲವೆಂದರೆ ಇಡೀ ಬೆಳೆ ಭಸ್ಮವಾಗುತ್ತದೆ. ನಾವು ನಮ್ಮ ಕಷ್ಟವನ್ನು ಹೇಳುತ್ತಿದ್ದೇವೆ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳೆ, ಯಾವುದೇ ತ್ಯಾಗಕ್ಕಾದರೂ ಸಹ ನಾವು ಸಿದ್ಧರಾಗೋಣ. ನೀವು ಕಳೆದ ಸಾರಿ ನಮ್ಮೆಲ್ಲರನ್ನು, ಇಡೀ ವಿರೋಧ ಪಕ್ಷದವರೆಲ್ಲರನ್ನು ಕರೆದುಕೊಂಡು ಹೋಗಿ ಎಲ್ಲ ರೈತರನ್ನು ಕರೆದುಕೊಂಡು ವಿಶ್ವಾಸಕ್ಕೆ ತೆಗೆದುಕೊಂಡು ಹೋಗಿ ಯಾವುದೇ ಕಾರಣಕ್ಕೂ ನೀರು ಬಿಡುವುದಿಲ್ಲವೆಂದು ಹೇಳಿದಾಗ ಇಂಥ ಒಬ್ಬ ನಾಯಕ ನಮ್ಮ ರಾಜ್ಯದಲ್ಲಿದ್ದಾರಲ್ಲ ಎಂದು ನಾವು ಬಹಳ ಸಂತೋಷ ಪಟ್ಟೆವು. ಈಗ ನೋಡಿದರೆ ನೀವು ಯಾರೋ ಏನೋ ಹೇಳಿದರೆಂದು ನೀರು ಬಿಟ್ಟುಬಿಟ್ಟಿದ್ದೀರಿ. ಇನ್ನೊಂದು ವಿಚಾರ ಇವತ್ತು 5–10 ಟಿಎಂಸಿ ನೀರು ಬಿಟ್ಟು ಸೋಮವಾರ ಬನ್ನಿ ಎಂದು ಹೇಳಿದ್ದಾರೆ. ಇನ್ನೊಂದು ವಾರ ಹದಿನೈದು ದಿವಸಗಳಾದ ಮೇಲೆ ಇನ್ನೂ 5 ಟಿಎಂಸಿ ನೀರು ಬಿಟ್ಟು ಬನ್ನಿ ಎಂದು ಸುಪ್ರೀಂಕೋರ್ಟ್‌ನವರು ಹೇಳುವುದಿಲ್ಲವೆನ್ನುವುದಕ್ಕೆ ಏನು ಖಾತ್ರಿ ಇದೆ ? ದಯಮಾಡಿ ತವು ಈ ಬಗ್ಗೆ ಚಿಂತನೆ ಮಾಡಬೇಕು. ಆದ್ದರಿಂದ ನಾವೆಲ್ಲಾ ನಿಮ್ಮ ಜೊತೆ ಇದ್ದೇವೆ. ನೀವು ಎಲ್ಲಿಗೆ ಬೇಕಾದರೂ ನಮ್ಮನ್ನು ಕರೆದುಕೊಂಡು ಹೊಗಿ ನಾವು ಆ ತ್ಯಾಗಕ್ಕೆ ಸಿದ್ಧರಾಗಿದ್ದೇವೆ. ಇನ್ನಾವುದಕ್ಕೆ ಕಾರಣಕ್ಕೂ ಸುಪ್ರೀಂಕೋರ್ಟ್ ಆದೇಶ ಇದೆಯೆಂದು ಹೇಳಿ ನೀರು ಬಿಡಬಾರದು ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ ನನ್ನ ಈ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಳವಳ್ಳಿ) :- ಸುಪ್ರೀಂಕೋರ್ಟ್‌ನಿಂದ ನಿನ್ನೆ ಕಾವೇರಿ ತೀರ್ಪು ಬಂದಾಗ ನಮ್ಮ ನೋವನ್ನು ಈ ಸದನದಲ್ಲಿ ನಿವೇದನೆ ಮಾಡಿಕೊಂಡಿದ್ದೇವೆ. ಇವತ್ತು ಅದರ ಪೂರ್ಣ ಸಾರಾಂಶ ನಮಗೂ ಕೂಡ ಅರ್ಥವಾಗಿದೆ. ಸುಪ್ರೀಂಕೋರ್ಟ್ ಆದೇಶಕ್ಕೆ ನಾವ್ಯಾರು ಎದುರಾಡುವಂತಿಲ್ಲ ಎಂಬ ಕಹಿ ಸತ್ಯ ಕೂಡ ನಮಗೆ ಗೊತ್ತಿದೆ. ಇತ್ತೀಚೆಗೆ ಮಾನ್ಯ ಮುಖ್ಯಮಂತ್ರಿಗಳು ಬೆಂಗಳೂರಿನ ನಾಲ್ಕನೆ ಹಂತದ ಕುಡಿಯುವ ನೀರಿನ ಯೋಜನೆಯನ್ನು ಉದ್ಘಾಟನೆ ಮಾಡುವಾಗ ನಮ್ಮ ಸುರೇಶ್ ಕುಮಾರ್‌ರವರು ತಮ್ಮ ಭಾಷಣದಲ್ಲಿ ಒಂದು ಮಾತನ್ನು ಹೇಳಿದರು. ನಾಲ್ಕನೆ ಹಂತದ ಕೊಳವೆ ಎಷ್ಟು ಅಗಲ ಇದೆ, ಎಷ್ಟು ಕಿ.ಮೀ. ಇದೆ. ಎಷ್ಟು ಕಿ.ಮೀ. ನೀರು ಹೋಗಲಿಕ್ಕೆ ಸಾಮರ್ಥ್ಯ ಹೊಂದಿದೆ ಎನ್ನುವುದನ್ನು ವಿವರಿಸುತ್ತಾ ಹೇಳುತ್ತಿದ್ದರು. ನಾನು ಆ ಸಭೆಯಲ್ಲಿ ನಮಗೆ ಕುಡಿಯಲಿಕ್ಕೆ ನೀರು ಕೊಡದೇ ಮಾರ್ಗಮಧ್ಯಕ್ಕೆ ಆ ಯೋಜನೆಗೆ ಅವಕಾಶ ಮಾಡಿಕೊಡುವುದು ಈ ಸರ್ಕಾರದ ಭದ್ಧತೆ ಏನು ಎಂದು ವಾದ ಮಾಡುತ್ತಾ ನಾನು ವೇದಿಕೆ ಮೇಲೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಿವೇದನೆ ಮಾಡಿಕೊಂಡೆನು. ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ಮಾರ್ಗ ಮಧ್ಯದ ಹಳ್ಳಿಗಳಿಗೆ ನಾವು ನೀರು ಕೊಡುತ್ತೇವೆಂದು ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು ಮಾರ್ಗ ಮಧ್ಯದಲ್ಲಿರುವ ಹಳ್ಳಿಗಳಿಗೆ ನೀರನ್ನು ಕೊಡುತ್ತೇವೆಂಬ ಮಾತನ್ನು ಹೇಳಿದ್ದರು. ಆದರೆ ಒಂದು ಮಾತನ್ನು ನಿಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಮಳವಳ್ಳಿ ಕ್ಷೇತ್ರದ ತೊರೆಕಾಡನಹಳ್ಳಿಯಿಂದ ಬೆಂಗಳೂರಿಗೆ ಒಂದು ಕಾರು ಹೋಗುವಷ್ಟು ಅಗಲದ ಅಳತೆಯ ಕೊಳವೆಯೊಳಗೆ ನೀರು ಹೋಗುತ್ತದೆ. ಇವತ್ತು ನಮ್ಮಲ್ಲಿರುವ ಕೆ.ಆರ್.ಎಸ್.ಯಿರಬಹುದು, ಹೇಮಾವತಿಯಿರಬಹುದು, ಹಾರಂಗಿಯಿರಬಹುದು, ಕಬಿನಿಯಿರಬಹುದು ಎಲ್ಲಾ ಸೇರಿ ನಮ್ಮಲ್ಲಿ ಲಭ್ಯತೆಯಿರುವ ನೀರು 34 ಟಿ.ಎಂ.ಸಿ. ಎಂದು ನೀರಾವರಿ ಇಲಾಖೆಯ ಮಾಹಿತಿ ಹೇಳುತ್ತಿದೆ. ಅದರಲ್ಲಿ ಬೆಳೆಗಳಿಗೆ ಹೋಗುತ್ತಿದೆ ಅದಕ್ಕೆ ನೀರು ಕೊಡಬೇಕೆಂದು ನಾವು ಬಾಯಿ ಮುಚ್ಚಿಕೊಂಡು ಇದ್ದೇವೆ. ಆದರೆ ನಮ್ಮ ಕೊನೆ ಭಾಗದ ರೈತರಿಗೆ ನೀರನ್ನೇ ಕೊಡಲಿಲ್ಲ. ನೀವು ಈ ಬಾರಿ ಬೆಳೆಯನ್ನು ಹಾಕಬೇಡಿ. ನೀವು ಬೆಳೆ ಹಾಕಿದರೆ ನಾವು ನೀರನ್ನು ಕೊಡುವುದಿಲ್ಲವೆಂದು ಹೇಳಿ ನೀರನ್ನೇ ಕೊಡಲಿಲ್ಲ. ಶ್ರೀರಂಗಪಟ್ಟಣ ಮತ್ತು ಪಾಂಡವಪುರದವರು ಇವತ್ತು ಬೆಳೆ ಹಾಕಿಕೊಂಡು ಸುಮಾರಾಗಿ ಬೆಳೆಯನ್ನು ಕಾಣುತ್ತಿದ್ದಾರೆ. ನಮಗೆ ತಿನ್ನುವುದಕ್ಕೆ ಅನ್ನ ಇಲ್ಲ. ಈ ವರ್ಷ ರೈತರು ಭತ್ತವಲ್ಲ ರಾಗಿ ಕೂಡ ಬೆಳೆಯುವುದಕ್ಕಾಗಿಲ್ಲ. ಈ ಸಂದರ್ಭದಲ್ಲಿ ಹಲವಾರು ಸಾರಿ ಮಾನ್ಯ ನೀರಾವರಿ ಸಚಿವರು ಅವರ ಇಲಾಖೆಯ ಅಧಿಕಾರಿಗಳಿಗೆ

ಸೂಚನೆಯನ್ನು ಕೊಟ್ಟರೂ ಕೂಡ ನಮ್ಮ ಭಾಗದ ಕೆರೆಗಳಿಗೆ ನೀರನ್ನು ಕೊಡುವಂತಹ ಕೆಲಸವನ್ನು ಇಲ್ಲಿಯವರೆಗೆ ಮಾಡಿಲ್ಲ. ಜಿಲ್ಲಾ ಉಸ್ತುವಾರಿ ಸಚಿವರು ನಾಮಕಾವಸ್ತೆಗೆ ಆದೇಶವನ್ನು ಕೊಟ್ಟಿದ್ದಾರೆಯೇ ಹೊರತು ಅದರ ಅನುಷ್ಠಾನದ ಬಗ್ಗೆ ಜವಾಬ್ದಾರಿಯನ್ನು ಎಲ್ಲೂ ಕೂಡ ನಿರ್ವಹಿಸಿಲ್ಲ. ನನ್ನ ಭಾಗದ ಒಂದೇ ಒಂದು ಕೆರೆಗೆ ನೀರನ್ನು ಕೊಡಿಸಿದ್ದೇನೆಂದು ಅವರು ಹೇಳಿದರೆ ಅದಕ್ಕೆ ನಾನು ತಲೆ ಬಾಗುತ್ತೇನೆ. ನಾನು ನೋವಿನ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇನ್ನು ಆರು ತಿಂಗಳು ಮಳೆಯಿಲ್ಲ. ನನ್ನ ಭಾಗದಲ್ಲಿ ಬೆಳೆ ಕೂಡ ಇಲ್ಲ. ಕುಡಿಯುವುದಕ್ಕೆ ಕೆರೆಗಳಿಗೂ ಕೊಡುವುದಿಲ್ಲವೆಂದರೆ ಇಂತಹ ಸಂಕಷ್ಟ ಪರಿಸ್ಥಿತಿಯಲ್ಲಿದ್ದಾಗ ಈ ತೀರ್ಪಿನ ಬಗ್ಗೆ ನಾವಿಲ್ಲಿ ಚರ್ಚೆ ಮಾಡಬೇಕಾದರೆ ನಮ್ಮ ನೋವನ್ನು ಯಾವ ಪದಗಳಲ್ಲಿ ಈ ಸದನದಲ್ಲಿ ಅಥವಾ ಸುಪ್ರೀಂಕೋರ್ಟ್‌ಗೆ ಯಾವ ರೀತಿಯಲ್ಲಿ ಹೇಳಬಹುದೆಂದು ನನಗೆ ಅರ್ಥವಾಗುತ್ತಿಲ್ಲ. ಈ ಸದನದ ಗಮನಕ್ಕೆ ಒಂದು ನೋವಿನ ವಿಚಾರವನ್ನು ನಾನು ಹೇಳುವುದು ಇದನ್ನು ಬೇರೆ ರೀತಿಯಲ್ಲಿ ಪ್ರತಿಪಾದನೆ ಮಾಡುವುದಕ್ಕೆ ನಾನು ತಯಾರಿಲ್ಲ. ಆದರೆ ವಸ್ತುಸ್ಥಿತಿಯನ್ನು ಅರ್ಥ ಮಾಡಿಕೊಂಡು ಇವತ್ತು ನೀರನ್ನು ಕೊಡಿ ಎಂದು ಹೇಳುತ್ತಿರುವ ಸುಪ್ರೀಂಕೋರ್ಟ್‌ಗೆ ಕೇಂದ್ರ ಸರ್ಕಾರ ಕೂಡ ನೀರಿನ ಲಭ್ಯತೆ ಇಲ್ಲವೆಂದು ಸ್ಪಷ್ಟವಾದ ಮಾಹಿತಿಯನ್ನು ಕೊಟ್ಟಿದೆ. ಅಂತಹ ಸಂದರ್ಭದಲ್ಲಿ ಕಟ್ಟೆಯೆಲ್ಲಿ ಇಷ್ಟೊಂದು ಸಾಮರ್ಥ್ಯದ ನೀರಿದ ಎನ್ನುವುದು, ಈ ಕರೆಗಳಿಗೆ ನೀರನ್ನು ಕೊಟ್ಟಿದ್ದರೆ ಇನ್ನಷ್ಟು ನೀರು ಕಡಿಮೆಯಾಗುತ್ತಿರಲಿಲ್ಲವೇ ? 34 ಟಿ.ಎಂ.ಸಿ. ನೀರು ಶೇಖರಣೆಯಾಗಿದೆಯೆಂದು ದಾಖಲೆಯಲ್ಲಿದೆ ನಮ್ಮ ಕೆರೆಗಳಿಗೆ ನೀರು ಕೊಟ್ಟಿದ್ದರೆ ಅದು ಚಾಮರಾಜನಗರ ಜಿಲ್ಲೆ, ಮಂಡ್ಯ ಜಿಲ್ಲೆ ಅಥವಾ ಮೈಸೂರು ಜಿಲ್ಲೆಯ ಕೆರೆಗಳಿಗೆ ನೀರನ್ನು ತುಂಬಿಸಿದ್ದರೆ ಅಂತರ್‌ಜಲ ಉಳಿಯುತ್ತಿತ್ತು, ಕುಡಿಯುವ ನೀರಿಗೆ ಅನುಕೂಲವಾಗುತ್ತಿತ್ತು. ಇವತ್ತು ತಿನ್ನುವುದಕ್ಕೆ ಅನ್ನವಿಲ್ಲದಿದ್ದರೂ ಕೂಡ ದನಕರುಗಳಿಗೆ ಕುಡಿಯುವುದಕ್ಕಾದರೂ ನೀರಿನ ಲಭ್ಯತೆಯಿರುತ್ತಿತ್ತು. ಜವಾಬ್ದಾರಿಯಿಂದ ಆ ಇಲಾಖೆಯ ಅಧಿಕಾರಿಗಳು ಕೆಲಸವನ್ನು ನಿರ್ವಹಿಸಿದ್ದರೆ ಆ ಒಂದು ಆದೇಶ ನಮಗೆ ಮಾರಕವಾಗಿ ಬರುತ್ತಿರಲಿಲ್ಲ. ಈ ಒಂದು ಕಹಿ ಸತ್ಯವವನ್ನು ನಾನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ತಮ್ಮ ಮುಖಾಂತರ ನಿವೇದನೆ ಮಾಡಿಕೊಳ್ಳುತ್ತಿದ್ದೇನೆ. ಈಗಲೂ ಕೂಡ ಕಾಲ ಮಿಂಚಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆ ಪ್ರಕಾರ ಹೇಳುವುದಾದರೆ ನಾಳೆ ಸಂಸದರ ನಿಯೋಗವನ್ನು ಕರೆದುಕೊಂಡು ಸನ್ಮಾನ್ಯ ಪ್ರಧಾನ ಮಂತ್ರಿಗಳು ಮತ್ತು ಮಾನ್ಯ ಸಚಿವರುಗಳನ್ನು ಭೇಟಿ ಮಾಡುವುದಕ್ಕೆ ಹೋಗುತ್ತಿದ್ದಾರೆ. ಬುಧವಾರದಿಂದ ನೀರನ್ನು ಬಿಡಬೇಕೆಂಬುದು ಸುಪ್ರೀಂಕೋರ್ಟ್‌ನ

ವಾದ. ಅಂದರೆ ನಾಳೆ ಶುಕ್ರವಾರ ಹೋದರೆ ಶನಿವಾರ ಮತ್ತು ಭಾನುವಾರ ನ್ಯಾಯಾಲಯ ಮತ್ತು ಕೇಂದ್ರ ಸರ್ಕಾರಕ್ಕೆ ರಜೆ. ಹಾಗಾಗಿ ಇವರು ಸೋಮವಾರದೊಳಗೆ ನೀರನ್ನು ಬಿಟ್ಟಿರಲೇಬೇಕು, ಇದು ಕಡ್ಡಾಯ. ಈ ದೇಶದ ಕಾನೂನನ್ನು ನಾವ್ಯಾರೂ ಮೀರುವುದಕ್ಕೆ ಸಾಧ್ಯವಿಲ್ಲವೆಂಬುದು ಸತ್ಯ. ಇಂಥ ಸಂದರ್ಭದಲ್ಲಿ ಇವತ್ತು ನಿಯೋಗ ಹೋದರೂ ಅಷ್ಟೆ ಹೋಗದಿದ್ದರ ಅಷ್ಟೆ, ಐದು ದಿನದ 10 ಟಿ.ಎಂ.ಸಿ. ನೀರನ್ನು ನಾವು ಬಿಟ್ಟು ಅಲ್ಲಿ ವಾದವನ್ನು ಮಾಡಬೇಕಾದಂಥ ಅನಿವಾರ್ಯತೆ ನಮ್ಮ ಕಣ್ಮುಂದೆ ಕಾಣುತ್ತಿದೆ. ನಾವು ಎಷ್ಟೇ ವಾದ ಮಾಡಿದರೂ ಕೂಡ ಸೋಮವಾರದೊಳಗೆ ಈ ನೀರನ್ನು ಬಿಟ್ಟೇ ಹೋಗಬೇಕಾಗುತ್ತದೆ. ಅಂಥ ಸಂದರ್ಭದಲ್ಲಿ ನನ್ನ ನಿವೇದನೆ ಇಷ್ಟೇ , ಬೆಳೆಗಳು ಏನೇನಾಗಿದೆಯೋ, ಬೆಳೆಗಳಿಗೆ ಯಾವ ರೀತಿಯಲ್ಲಿ ಪರಿಹಾರವನ್ನು ನೀವು ಕೊಡುತ್ತಿರೋ ಇಲ್ಲವೋ ಅದು ಬೇರೆ ವಿಚಾರ. ಮಾನ್ಯ ಮುಖ್ಯಮಂತ್ರಿಗಳೆ ನಾನು ಕೈಮುಗಿದು ಬೇಡಿಕೊಳ್ಳುತ್ತೇನೆ. ನನ್ನ ತಾಲ್ಲೂಕಿನಲ್ಲಿ ಯಾವುದಾದರೂ ಒಂದು ಕೆರೆಯಲ್ಲಿ ನೀರಿದೆ ಎಂದರೆ ನಾನು ಇನ್ನೊಂದು ದಿನ ಈ ಸದನವನ್ನು ಪ್ರವೇಶ ಮಾಡುವುದಿಲ್ಲ. ದಯಮಾಡಿ ನಮ್ಮ ಬರಡು ಭೂಮಿಯ ಕೆರೆಗಳಿಗೆ ನೀರನ್ನು ಉಣಿಸುವ ಜವಾಬ್ದಾರಿಯಲ್ಲಿ ಈ ತೀರ್ಮ ಮತ್ತೆ ಮತ್ತೆ ನಮಗೆ ಮಾರಕವಾಗದ ರೀತಿಯಲ್ಲಿ ಪ್ರತಿ ಸಂದರ್ಭದಲ್ಲಿ ಈ ಕಟ್ಟಕಡೆಯ ಅಚ್ಚುಕಟ್ಟು ಪ್ರದೇಶಗಳ ಕೆರೆಗಳಿಗೆ ನೀರುಣಿಸುವಂತಹ ಸ್ಪಷ್ಟವಾದ ಆದೇಶ ಇಲಾಖೆಗಳಲ್ಲಿರಬೇಕು. ಇಲ್ಲವಾದರೆ ಬೆಳೆಯಲ್ಲಿರುವುದಕ್ಕೆ ಪರಿಹಾರವೆಂಬ ವಿಚಾರ ಮಾತ್ರ ಇದೆ. ಕಟ್ಟಕಡೆಯ ವಿಚಾರವನ್ನು ಕೂಡ ಗಮನಿಸಿ ಅದರಲ್ಲಿರುವ ಕಹಿ ಸತ್ಯ ಮತ್ತು ಆ ಭಾಗದ ಹಳ್ಳಿಗಳ ಬವಣೆ ಇದರ ಜೊತೆಜೊತೆಯಲ್ಲಿ ಕುಡಿಯುವ ನೀರಿಗೆ ಬವಣೆಪಡುತ್ತಿರುವ ಸಂದರ್ಭದಲ್ಲಿ ಕೆರೆಗಳಿಗೂ ಕೂಡ ನೀರಿಲ್ಲ. ಇಲ್ಲ ಮಲ್ಟಿ ವಿಲೇಜ್ ಸ್ಕೀಂ ಅನ್ನು ನಮಗೆ ಕೊಡಿ ಎಂದು ಬೇಡಿಕೊಂಡರೆ ಅದು ಕೂಡ ಆಗಿಲ್ಲ. ಆರ್.ಡಿ.ಪಿ.ಆರ್. ಇಲಾಖೆಯ ಸಚಿವರು ಇಲ್ಲಿಲ್ಲ. ಈ ಇಲಾಖೆ ಯಾವ ರೀತಿ ಕಾರ್ಯನಿರ್ವಹಿಸುತ್ತಿದೆಯೆಂದರೆ ಈ ಯೋಜನೆಗಳನ್ನು ಕೇಂದ್ರ ಸರ್ಕಾರ ಅನುಮೋದನೆ ಮಾಡುವುದಕ್ಕೆ ತಯಾರಿದೆ ಆದರೆ ಡಿ.ಎಸ್.ಆರ್. ರೆಡಿಯಾದರೂ ಕೂಡ ಇಲ್ಲಿಯವರೆಗೆ ಅನುಮೋದನೆ ಕೊಡದಿರುವಂತಹ ಪರಿಸ್ಥಿತಿಯಲ್ಲಿ ನಾವು ಕಾಯುತ್ತಿದ್ದೇವೆ. ಅದಕ್ಕೋಸ್ಕರ ತಮ್ಮಲ್ಲಿ ನನ್ನ ವಿನಮ್ರ ಮನವಿ ದಯಮಾಡಿ ಕಾವೇರಿ ಭಾಗದ ವಂಚಿತ ಮಕ್ಕಳು ನಾವು ಆದುದರಿಂದ ಕುಡಿಯುವ ನೀರಿಗೆ ಆದ್ಯತೆ ಕೊಡಿ. ಈ ಸಂದರ್ಭದಲ್ಲಿ ನಮಗಾಗಿರುವ ಅನ್ಯಾಯಕ್ಕೆ ನಾವು ನ್ಯಾಯವನ್ನು ನ್ಯಾಧೀಕರಣದಿಂದ ಪಡೆಯುವುದರ ಜೊತೆಗೆ ನಮಗೆ ಆ ನ್ಯಾಯದೊಳಗೆ

ಅನ್ಯಾಯವಾಗಿರುವಂತ ಕಟ್ಟಕಡೆಯ ಬದುಕಿನ ಜನ ನಾವಿದ್ದೇವೆ. ನಮ್ಮ ಸಂಕಷ್ಟವನ್ನು ಅರ್ಥ ಮಾಡಿಕೊಂಡು ಈ ಸರ್ಕಾರ ಮತ್ತೊಂದು ಒಳಗಿನ ನ್ಯಾಯವನ್ನು ನೀಡಬೇಕೆಂಬ ಮನವಿಯನ್ನು ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಎಸ್. ಪ್ರಕಾಶ್ (ಹಾಸನ): ಮಾನ್ಯ ಅಧ್ಯಕ್ಷರೆ, ತಾವು ಕಾವೇರಿಗೆ ಉತ್ಸವ ಮೂರ್ತಿಗಳು ಹೇಮಾವತಿ ಬಗ್ಗೆ ಮಾತನಾಡಲು ತಾವು ಅವಕಾಶ ಕೊಡುವವರೆಗೂ ಸುಮ್ಮನಿದ್ದೆವು. ನೆರೆ ಮೂರ್ತಿಗಳದ್ದೇ ಮೆರವಣಿಗೆ ಜಾಸ್ತಿ. ಇವತ್ತು ಹೇಮಾವತಿ ಭಾಗದಲ್ಲಿ ನಮಗಿರುವುದು ಸುಮಾರು 800 ಎಕರೆ ಅಚ್ಚುಕಟ್ಟು ಪ್ರದೇಶ. ಹಾಸನ ನಗರಕ್ಕೆ ಕುಡಿಯುವ ನೀರಿನ ಸಮಸ್ಯೆಯಿದೆ. ಅದೇ ರೀತಿ ಉದ್ದಕ್ಕೂ ಬರುವಂತಹ ಸಕಲೇಶಪುರ, ಬೇಲೂರು, ಚಿಕ್ಕಮಗಳೂರು ಇರಬಹುದು ಈ ರೀತಿ ಎಲ್ಲಾ ಕಡೆ ಕುಡಿಯುವುದಕ್ಕೆ ನೀರನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಕುಡಿಯುವ ನೀರಿನ ವ್ಯವಸ್ಥೆ ಇದೇ ರೀತಿಯಾದರೆ ಬೆಂಗಳೂರಿನ ಮಹಾ ಜನತೆ ಇಲ್ಲೇ ಕುಳಿತ್ತಿದ್ದಾರೆ ಅವರು ನಾಳ್ಕನೆ ಹಂತ ತೆಗೆದುಕೊಂಡು ಹೋಗಿದ್ದಾರೆ. ಈ ಯಾವ ರೀತಿ ಸಮಸ್ಯೆಯನ್ನು ಬಗೆಹರಿಸುತ್ತಾರೆಂದು ದೇವರಿಗೆ ಗೊತ್ತು. ಕುಡಿಯುವ ನೀರಿನ ಸಮಸ್ಯೆ ಬಹಳ ಜಟಿಲವಾಗುತ್ತಿದೆ. ಆದ್ದರಿಂದ ಬೆಂಗಳೂರಿನ ಜನತೆ ಯಾವ ರೀತಿ ಉತ್ತರವನ್ನು ಹೇಳುತ್ತಾರೆಂದು ಯೋಚನೆ ಮಾಡಿದೆ. ನಾನು ಒಂದು ಮಾತನ್ನು ಕೇಳ ಬಯಸುತ್ತೇನೆ. ನಾವು ಯಾವ ಸಮಸ್ಯೆ ಬಂದಾಗ ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೆವೆಯೋ ಬೇರೆ ಸಂದರ್ಭದಲ್ಲಿ ಈ ಎರಡು ರಾಜ್ಯಗಳ ನೀರಿನ ಸಮಸ್ಯೆ ಬಂದಾಗ ಈ ಸರ್ಕಾರ ವಕೀಲರ ಮುಖಾಂತರ, ನ್ಯಾಯಾಲಯದ ಮುಖಾಂತರ ಅಥವಾ ನಮ್ಮ ಸರ್ಕಾರದ ಅಧಿಕಾರಿಗಳು ಹೋಗಿರಬಹುದು ಅಥವಾ ಕೇಂದ್ರ ಸರ್ಕಾರದಿಂದ ಬಂದಂತಹ ಅಧಿಕಾರಿಗಳಿರಬಹುದು ಇವರಿಗೆ ಎಷ್ಟು ಕೋಟಿ ರೂ.ಗಳ ಹಣವನ್ನು ನಮ್ಮ ಸರ್ಕಾರ ಖರ್ಚು ಮಾಡಿದೆ? ಸಕಲೇಶಪುರ ನಗರದಲ್ಲಿ ಸುಮಾರು ಅರ್ಧ ಭಾಗ ಮಾತ್ರ ನಗರದಿಂದ ಪುರಸಭೆ ಕಟ್ಟಡದಿಂದ ಈಚೆಗೆ ಹೇಮಾವತಿ ಬರುತ್ತದೆ ಆಚೆಗೆ ಕೆಂಪೊಳೆ ಬರುತ್ತದೆ. ಕೇವಲ 8–10 ಕಿ.ಮೀ. ವ್ಯಾಪ್ತಿಯಲ್ಲಿ ಕೆಂಪೊಳೆ ಹರಿಯುತ್ತದೆ. ಎಷ್ಟು ಟಿ.ಎಂ.ಸಿ. ನೀರು ಸಮುದ್ರದ ಪಾಲಾಗುತ್ತದೆಂದು ಅಲ್ಲೇ ನೋಡಿ. ಕೇವಲ 10 ಕಿ.ಮೀ. ದೂರದಲ್ಲಿದೆ. ಕುಡಿಯುವ ನೀರಿನ ವ್ಯವಸ್ಥೆಗೆ ಅಥವಾ ಬೆಳೆಗಳಿಗೆ ಯಾವುದಕ್ಕಾದರೂ ಆ ನೀರನ್ನು ಬಳಸುವಂತಹ ಪ್ರಯತ್ನವನ್ನು ಮಾಡಲಿ, ಇಂತಹ ಕಷ್ಟದ ಪರಿಸ್ಥಿತಿಯಲ್ಲಿದ್ದಾಗ ಅದ್ಯಾವುದನ್ನು ಮಾಡದೇ ನೀವು ನೀರನ್ನು ಕೊಡುತ್ತೇವೆಂದರೆ ಹೇಗೆ? ಇದ್ದರೆ ನೀರನ್ನು ಕೊಡಿ ಸಂತೋಷ ನಮಗೆ ಕುಡಿಯುವುದಕ್ಕೆ ನೀರಿಲ್ಲ. ಅವರಿಗೆ ಬೆಳೆಗೆ ಕೊಡುತ್ತೇವೆಂದರೆ ಇದರಲ್ಲಿ ಯಾವ ಅರ್ಥವಿದೆ. ಅದರಿಂದ ಬಹಳಷ್ಟು ತೊಂದರೆಗಳನ್ನು ಅನುಭವಿಸುವ ಪರಿಸ್ಥಿತಿಯಲ್ಲಿ ನಾವಿದ್ದೇವೆ.

ಅದರಲ್ಲೂ ಡ್ಯಾಂಅನ್ನು ಕಟ್ಟಿದಂತಹ ಜನ ಸುತ್ತಲೂ ಶೀತ ಪ್ರದೇಶದಲ್ಲಿ ಮುಳುಗಿ ಹೋಗಿದ್ದಾರೆ. ಹೊಳೆನರಸೀಪುರ, ಸಕಲೇಶಪುರ ಮತ್ತು ಹಾಸನ ತಾಲ್ಲೂಕಿನಲ್ಲಿ ಆ ಭಾಗದ ಜನ ಕಷ್ಟ ಅನುಭವಿಸುತ್ತಾರೆ. ಕಾವೇರಿ ಉಗಮ ಸ್ಥಾನದಲ್ಲಿ ತಾವಿದ್ದೀರಿ. ಕಾವೇರಿಯಿಂದ ಏನೂ ಅನುಕೂಲವಾಗುವುದಿಲ್ಲ. ಎಲ್ಲಾ ಶೀತ ಮತ್ತು ತೋಟಗಳೆಲ್ಲಾ ಮುಳುಗಡೆಯಾಗುತ್ತಿದೆ. ಆದ್ದರಿಂದ ಆ ನೀರಿನ ಪ್ರಯೋಜನವನ್ನು ಪಡೆಯುವ ಜನ ಇಲ್ಲೇ ಕುಳಿತ್ತಿದ್ದಾರೆ. ಬೆಂಗಳೂರಿನ ಜನ ಏಕೆ ಸ್ವಲ್ಪ ಮಾತನಾಡುವುದನ್ನು ಕಲಿಯುತ್ತಿಲ್ಲ? ತಮಿಳುನಾಡಿನಲ್ಲಿ ಸ್ವಲ್ಪ ತೊಂದರೆಯಾದರೆ ಖಾಲಿ ಕೊಡವನ್ನು ಹಿಡಿದುಕೊಂಡು ಕಿ.ಮೀ. ವರೆಗೆ ನಿಲ್ಲುತ್ತಾರೆ. ಇವರಿಗೇನು ತೊಂದರೆಯಾಗಿದೆ? ಇವರಿಗೆ ನಾವು ನೀರನ್ನು ಹಿಡಿದು ಕೊಡುತ್ತಿದ್ದೇವೆ. ಅವರು ಮೌನವಾಗಿದ್ದಾರೆ. ನಾವು ಇಷ್ಟೆಲ್ಲಾ ತೊಂದರೆಗಳನ್ನು ಅನುಭವಿಸಿ ಗಲಾಟೆಗಳನ್ನು ಮಾಡಬೇಕಾಗಿದೆ. ಆದ್ದುದರಿಂದ ದಯಮಾಡಿ ಇದರಲ್ಲಿ ಯಾವುದೇ ಬಿನ್ನಾಭಿಪ್ರಾಯ ಬೇಡ. ತಮಿಳುನಾಡು ಇರಲಿ ಕರ್ನಾಟಕವಿರಲಿ ಒಕ್ಕೂಟದ ವ್ಯವಸ್ಥೆಯಲ್ಲಿ ನಾವಿಬ್ಬರು ಅಣ್ಣ–ತಮ್ಮಂದಿರ ಹಾಗೆ ಹೊಂದಿಕೊಂಡು ಹೋಗಬೇಕಾಗುತ್ತದೆ. ನಮಗೆ ನೀರಿನ ಅಭಾವ ಇರುವ ಸಂದರ್ಭದಲ್ಲಿ ಇಷ್ಟೊಂದು ಹಠಮಾರಿತನ ಮಾಡುವುದು ಯಾರಿಗೂ ಒಳ್ಳೆಯದಲ್ಲ ಎನ್ನುವುದು ನಮ್ಮ ಭಾವನೆ ಇದನ್ನು ಅವರು ತಿಳಿದುಕೊಳ್ಳಬೇಕಾಗುತ್ತದೆ. ಆದ್ದರಿಂದ ದಯಮಾಡಿ ತಮ್ಮ ಮುಖಾಂತರ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಮಾನ್ಯ ನೀರಾವರಿ ಸಚಿವರಿಗೆ ಹೇಳುತ್ತಿದ್ದೇನೆ ಯಾವುದೇ ಸಂದರ್ಭದಲ್ಲೂ ಅವರು ವಿತರಣೆಯನ್ನು ಮಾಡಲಿ ಅಥವಾ ಪುನರ್ ಪರಿಶೀಲನೆ ಅರ್ಜಿಯನ್ನು ಹಾಕಲಿ ನಮಗೆ ನೀರನ್ನು ಕೊಡುವ ವ್ಯವಸ್ಥೆಯನ್ನು ಮಾಡಲಿ ಎಂದು ನಾನು ಬಯಸುತ್ತೇನೆ.

ಶ್ರೀ ಕೆ. ಎಂ. ಶಿವಲಿಂಗೇಗೌಡ (ಅರಸೀಕೆರೆ): ಮಾನ್ಯ ಅಧ್ಯಕ್ಷರೆ, ನಮ್ಮ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಯಾವ ರೀತಿ statement ಮಾಡಿ ಯಾವ ರೀತಿ ನುಣುಚಿಕೊಳ್ಳಬೇಕೆಂದು ಹೇಳಿ ಹಿಂದಿನವರೆಲ್ಲಾ ಹೇಗೆ ನೀರು ಬಿಟ್ಟರೆಂದು ಹೇಳಿ ಕೋಟ್ ಮಾಡಿದ್ದಾರೆ. ನಾನು ಕೂಡ ನಾಳೆ ಬಿಡುತ್ತೇನೆ ವಿಧಿ ಇಲ್ಲ ಏನು ಮಾಡುವುದಕ್ಕಾಗುತ್ತದೆಂದು ಹೇಳಿದ್ದಾರೆ. ನಮಗೆಲ್ಲಾ ಮರೆತು ಹೋಗಿತ್ತು ಜ್ಞಾಪಕ ಮಾಡಿದ್ದಾರೆ ಬಹಳ ಸಂತೋಷ. ನಿಜ ಈ ಗಡಿ ಮತ್ತು ನೀರಾವರಿ ಸಮಸ್ಯೆಗಳು ಬಹಳ ಬೃಹದಾಕಾರವಾಗಿ ಕರ್ನಾಟಕದಲ್ಲಿ ರಾಜ್ಯ ರಾಜ್ಯಗಳ ಮಧ್ಯ ಸಂಘರ್ಷಕ್ಕೆ ದಾರಿ ಮಾಡುತ್ತಿದೆ. ಈ ಬಗ್ಗೆ ಬಹಳ ಜನ ಮಾತನಾಡಿದ್ದಾರೆ, ಏನಾದರೂ ಮಾಡಿ ಇದಕ್ಕೆ ಒಂದು ಪರಿಹಾರ ಕಂಡು ಹಿಡಿಯುವುದಕ್ಕೆ ಸಾಧ್ಯವಿಲ್ಲವೇ? ಇಂತಹ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಸಹಬಾಳ್ವೆಯಿಂದ

ಲ-12-ಲ

ಬಗೆಹರಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲವೇ ಎನ್ನುವ ಭಾವನೆಯನ್ನು ವ್ಯಕ್ತಪಡಿಸುತ್ತಿದ್ದೇನೆ. ಇದಕ್ಕೆ ಯಾರೂ ಕಾರಣರಲ್ಲ. ಇದಕ್ಕೆ ಪರಿಸರ ಕಾರಣ, ಮಳೆ, ಕಾಲದ ಮಹಿಮೆ ಈ ರೀತಿ ಮಾಡುತ್ತಿದೆ. ಹಿಂದೆ ಬೇಕಾದಷ್ಟು ಮಳೆ ಬಂದು ನೀರು ಹರಿದು ಹೋಗುತ್ತಿದ್ದರು ಅದನ್ನು ಯಾರೂ ಕೇಳಲಿಲ್ಲ. ಅದನ್ನು ಉಪಯೋಗಿಸಿಕೊಳ್ಳಲಿಲ್ಲ. ಕೃಷ್ಣಾ ಬೇಸಿನ್‌ನಲ್ಲಿ ಬೇಕಾದಷ್ಟು ನೀರನ್ನು ಕೊಟ್ಟರೂ ಅದನ್ನು ಉಪಯೋಗ ಮಾಡಿಕೊಳ್ಳವುದಕ್ಕೆ ನಮಗೆ ಶಕ್ತಿಯೇ ಇಲ್ಲ. ಇಂದು ಕಾವೇರಿ ಬೇಸಿನ್‌ನಲ್ಲಿ ಬಹಳ ಕಡಿಮೆ ಪ್ರಮಾಣದ ನೀರು ಲಭ್ಯವಿದೆ. ಅಲ್ಲಿ ಬೇಡಿಕೆ ಮಾತ್ರ ಜಾಸ್ತಿಯಾಗುತ್ತಿದೆ. ಬೇಡಿಕೆ ಜಾಸ್ತಿಯಾದಂತೆಲ್ಲಾ ಆ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಬರ ಬಂದಿದೆ. ಆ ಭಾಗದಲ್ಲಿ ದೇವರು ಮುನಿಸಿಕೊಂಡಿರಬೇಕು. ಆ ಭಾಗದ ಉಗಮಸ್ಥರು ನೀವು. ತಲಕಾವೇರಿಯಲ್ಲಿ ಏನಾಗುತ್ತಿದೆಯೋ ಏನೋ? ರಾಜರು ಈ ನದಿಯನ್ನು ಕೇರಳದ ಕಡೆಗೆ ತಿರುಗಿಸುವುದಕ್ಕೆ ಮಾಡಿದ್ದರು ಎಂದು ಬೆಳಿಗ್ಗೆ chamber ನಲ್ಲಿ ನೀವು ಹೇಳಿದಿರಿ. ಒಂದು ವೇಳೆ ಆ ರೀತಿ ಮಾಡಿದ್ದರೆ ತಮಿಳುನಾಡು ರಾಜ್ಯದ ಕಾಟ ತಪ್ಪುತ್ತಿತ್ತು. ಆದರೆ ಇಂದು ಏನಾಗಿದೆ ಎಂದರೆ ರಾಜ್ಯಗಳ ಒಕ್ಕೂಟದಲ್ಲಿ, ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ನಾವು ಮಾಡಿಕೊಂಡಿರುವ ಕೆಲವೊಂದು ನಿಯಮಗಳ ನಿಬಂಧನೆ ಪ್ರಕಾರ ರಾಜ್ಯ ರಾಜ್ಯಗಳ ನಡುವೆ ನೀರಿನ ಹಂಚಿಕೆ ವಿವಾದ ಇದ್ದೇ ಇರುತ್ತದೆ. ಇಂತಹ ಸಂದರ್ಭದಲ್ಲಿ ನಾವು ಏನು ಮಾಡಬೇಕೆಂದರೆ (ಗೊಂದಲ) ಯಾವ ಸಚಿವರು ಇಲ್ಲದಿದ್ದರೆ ಏನಾಗುಬೇಕು ನಾನು ಮಾತನಾಡುವುದು ರೆಕಾರ್ಡ್ ಆಗುತ್ತದೆ, ಅದನ್ನು ತೆಗೆದುಕೊಂಡು ನಮ್ಮ ಜನರಿಗೆ ಕೊಡುತ್ತೇವೆ. ಅದನ್ನು ತೆಗೆದುಕೊಂಡು ಹೋಗಿ ಜನಗಳಿಗೆ ಕೊಟ್ಟು ನೀರಾವರಿ ವಿಚಾರದ ಬಗ್ಗೆ ಬಹಳಷ್ಟು ಸುಧೀರ್ಘವಾಗಿ ಭಾಷಣ ಮಾಡಿದ್ದೇವೆಂದು ಹೇಳುತ್ತೇವೆ. ಯಾವ ಮಂತ್ರಿ ಕೇಳಿದರೆ ಏನು, ಕೇಳದಿದ್ದರೆ ಏನು? ಭಾಷಣ ಮಾಡುತ್ತೇವೆ, ಅದರ ಪ್ರತಿ ಕೊಡುತ್ತಾರೆ ಅದನ್ನು ತೆಗೆದುಕೊಂಡು ನಮ್ಮ ಜನಗಳಿಗೆ ಕೊಡುತ್ತೇವೆ. ಇನ್ನು ಏನು ಮಾಡುವುದಕ್ಕೆ ಆಗುತ್ತದೆ ನಮಗೆ, ಅದ್ದರಿಂದ ಇವತ್ತಿನ ಈ ಸಂದರ್ಭದಲ್ಲಿ ನಾನು ಎರಡು ಸಲಹೆಗಳನ್ನು ಕೊಡಬಯಸುತ್ತೇನೆ. ಮಾನ್ಯ ಪುಟ್ಟೇಗೌಡರು ಈ ಬಗ್ಗೆ ಬಹಳ ಸೂಕ್ತವಾದ ಸಲಹೆಯನ್ನು ಕೊಟ್ಟಿದ್ದಾರೆ. ಇಲ್ಲಿ ಏನಾಗುತ್ತದೆ ಎಂದರೆ ತಮಿಳುನಾಡು ರಾಜ್ಯದವರು ಬಹಶಃ ಇದನ್ನು ರಾಜಕೀಯ ಅಸ್ತ್ರವನ್ನಾಗಿ ಬಳಸಿಕೊಳ್ಳುತ್ತಿದ್ದಾರೆ. ಅದರಲ್ಲೂ ಶ್ರೀಮತಿ ಜಯಲಲಿತಾ ಅವರು ತಮಿಳುನಾಡು ರಾಜ್ಯದ ಮುಖ್ಯಮಂತ್ರಿಯಾದಾಗಲೇ ಈ problem ಹೆಚ್ಚಾಗಿ ಆಗುತ್ತದೆ. ನಮ್ಮ ಮತಕ್ಷೇತ್ರವಾದ ಅರಸೀಕೆರೆಯಲ್ಲಿ ತಮಿಳುನಾಡು ಭಾಗದ ಜನರಿರುವುದರಿಂದ, ಆ ಜನರ ನಂಟು ನನಗೆ ಜಾಸ್ತಿಯಿದ್ದು, ನೀರಾವರಿಗೆ ನಿಮ್ಮ ಭಾಗದಲ್ಲಿ ತೊಂದರೆಯಿದೆಯೇ? ಏತಕ್ಕಾಗಿ ಈ ರೀತಿ ನಮ್ಮ ಕರ್ನಾಟಕಕ್ಕೆ ಪದೇ ಪದೇ

ತೊಂದರೆ ಮಾಡುತ್ತೀರೆಂದು ಕೇಳುತ್ತೇನೆ. ಅದಕ್ಕೆ ಅವರು ಅಲ್ಲಿ ತೊಂದರೆಯಿಲ್ಲ, ಎಲ್ಲಾ ಬೆಳೆ ಬಂದಿದೆ ಎಂದು ಹೇಳುತ್ತಾರೆ. ಸಾವಿರಾರು ಜನ ನಮ್ಮ ಅರಸೀಕೆರೆಯಿಂದ ಬೆಳೆ ಬೆಳೆಯುವುದಕ್ಕೆ ಅಲ್ಲಿಗೆ ಹೋಗುತ್ತಾರೆ. ಏನಾದರೂ ಮಾಡಿ ನನ್ನ ಮುಖ್ಯಮಂತ್ರಿಯ ಅವಧಿಯಲ್ಲಿ ಕರ್ನಾಟಕವನ್ನು ಹೆದರಿಸಿ ಇಷ್ಟು ಟಿ.ಎಂ.ಸಿ. ನೀರನ್ನು ತೆಗೆದುಕೊಂಡೆ ಎಂಬುದು ಅವರಿಗೆ prestige ವಿಷಯ. ಈ ರೀತಿಯ prestige ಗಾಗಿ ಕ್ಯಾತೇ ತೆಗೆಯುವ ಕೆಲಸವನ್ನು ಅಲ್ಲಿನ ಮುಖ್ಯಮಂತ್ರಿಗಳು ಮಾಡುತ್ತಾರೆ. ನಾವೂ ಸಹ ರಾಜಕೀಯಕ್ಕೋಸ್ಕರವೇ "ರಕ್ತ ಕೊಟ್ಟೇವು, ನೀರು ಬಿಡೆವು" ಎಂದು ನಾವು ಹಾಗೂ ನಮ್ಮ ಸಂಘಟನೆಗಳು ಕೂಗುತ್ತವೆ. ನಾವೆಲ್ಲಾ ಕೂಗಿ ಕೂಗಿ ಇಂದು ಇಲ್ಲಿಗೆ ಬಂದಿದ್ದೇವೆ. ಆದರೆ ಇದಕ್ಕೆ ಒಂದು ಪರಿಹಾರ ಕಂಡು ಹಿಡಿಯುವುದಕ್ಕೆ ಆಗುವುದಿಲ್ಲವೇ? ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ತಮಿಳುನಾಡು ಈ ಮೂರು ಭಾಗಗಳಲ್ಲಿ ಸೇರಿ ಒಂದು ಕಡೆ ಕುಳಿತು ಚರ್ಚೆ ಮಾಡಿ. ಪ್ರತಿನಿತ್ಯ ನೀರು ಬಿಟ್ಟರೂ ಅಥವಾ ಬಿಡದಿದ್ದರೂ ಮೂರುವರೆಯಿಂದ ನಾಲ್ಕು ಸಾವಿರ ಕ್ಯೂಸೆಕ್ಸ್ ಸ್ಟೋರೇಜ್ ನೀರು ಲಿಕೇಜ್ ಆಗಿ ಹರಿದು ಹೋಗೇ ಹೋಗುತ್ತದೆ. ಆ ನೀರು ಹೋಗುವುದನ್ನು ಯಾರೂ ಗಣನೆಗೆ ತೆಗೆದುಕೊಳ್ಳುತ್ತಾರೆ? ಅಂತದ್ದನ್ನೆಲ್ಲಾ ಪರಿಗಣಿಸಿ ಸ್ಟೋರೇಜ್ ಟ್ಯಾಂಕ್ ನಿರ್ಮಿಸಬೇಕು, ನಮ್ಮದು ಹಾಗೂ ಅವರದು ಸ್ವಲ್ಪ ಭೂಮಿ ಹೋದರೂ ಪರವಾಗಿಲ್ಲ. ಇಂತಹ ಸಂದರ್ಭಗಳು ಬಂದಾಗ ಸಮುದ್ರಕ್ಕೆ ಬೀಳತಕ್ಕಂತ ನೀರನ್ನು ತಡೆದು ಒಂದು ಸ್ಟೋರೇಜ್ ಟ್ಯಾಂಕ್‌ನ್ನು ಕಟ್ಟಿ 50–100–200 ಟಿ.ಎಂ.ಸಿ. ನೀರು ಸಂಗ್ರಹಿಸಿಡುವ ಒಂದು ಡ್ಯಾಮ್‌ನ್ನು ನಿರ್ಮಾಣ ಮಾಡಬೇಕು. Upper Krishna ದಲ್ಲಿ ಸ್ಟೋರೇಜ್ ಮಾಡಲು ನಿರ್ಮಿಸಿರುವ ಟ್ಯಾಂಕ್ ರೀತಿಯಲ್ಲಿಯೇ ಮಾಡಿ. ಅಂತಿಮ ತೀರ್ಪಿನಲ್ಲಿ ತಮಿಳುನಾಡು ರಾಜ್ಯಕ್ಕೆ 190 ಟಿ.ಎಂ.ಸಿ. ನೀರನ್ನು ಬಿಡಬೇಕೆಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ನಿರ್ಣಯವನ್ನು ಪಾಸ್ ಮಾಡಿದ್ದಾರೆ. ಆ ರೀತಿಯಲ್ಲಿ ನಾವು ಬಿಡುಗಡೆ ಮಾಡುವುದಕ್ಕೆ ಇಷ್ಟು ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಲಕ್ಷಾಂತರ ಕೋಟಿ ರೂ. ಬಜೆಟ್ ನ್ನು ಮಂಡಿಸುವ ಈ ರಾಜ್ಯ, ಕೇಂದ್ರ ಸರ್ಕಾರ ಮತ್ತು ತಮಿಳುನಾಡು ಸರ್ಕಾರ ಈ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲವೇ? ಶಾಶ್ವತವಾದ ಪರಿಹಾರವನ್ನು ಏಕೆ ಕಂಡುಹಿಡಿಯಲಿಲ್ಲ? ರೈತರು ಅಲ್ಲಿ ಜೀವ ಹಿಡಿದುಕೊಂಡು ನಿಂತಿದ್ದಾರೆ. ಎಲ್ಲಾ ಬೆಳೆಗಳನ್ನು ಹಾಕಿದ್ದಾರೆ. ತಮಿಳುನಾಡು ರಾಜ್ಯಕ್ಕೆ ಬಾಗಿಲು ತೆಗೆದು ನೀರನ್ನು ಬಿಟ್ಟು ಬಿಟ್ಟರೆ ನಮ್ಮ ಜನರ ಬೆಳೆ ಎಲ್ಲಿ ಒಣಗಿ ಹೋಗುತ್ತದೋ, ಬ್ಯಾಂಕಿನಲ್ಲಿ ಮಾಡಿರುವ ಸಾಲ ತೀರಿಸುವುದು ಹೇಗೆ ಎಂಬ ಸಂಕಷ್ಟದಲ್ಲಿದ್ದು, ಬೀದಿಗೆ ಬಂದು ಮೈಗೆ ಮಣ್ಣು ಉಜ್ಜಿಕೊಂಡು ರೈತರು ತಕತಕನೆ ಕುಣಿಯುತ್ತಿದ್ದಾರೆ. ಇದನ್ನೆಲ್ಲಾ ನೋಡಿದಾಗ 65 ವರ್ಷದ ಈ ಸ್ವಾತಂತ್ರ್ಯ

ಭಾರತದ ಇತಿಹಾಸದಲ್ಲಿ ಇಂತಹ ಒಂದು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಆಗದೆ, ಕ್ಲಿಷ್ಟಕರವಾದ ಪರಿಸ್ಥಿತಿಯಲ್ಲಿದ್ದು, ಚರ್ಚೆ ಮಾಡಿ, ಈ ಸದನದಲ್ಲಿ ಮುಖ್ಯಮಂತ್ರಿಗಳನ್ನು ಈ ಬಗ್ಗೆ ಕೇಳುವುದು, ಏನೇನೋ ರಾಜಕೀಯ ಬಣ್ಣಗಳನ್ನು ಕಟ್ಟಿಕೊಂಡು ಕುಣಿಯುವುದು, ಇದನ್ನೆಲ್ಲಾ ನಿಲ್ಲಿಸಬೇಕು. ನಿಜವಾಗಿಯೂ ಇಂತಹ ಒಂದು ಸಮಸ್ಯೆಗೆ ಯಾರಾದರೊಬ್ಬರು ಪರಿಹಾರವನ್ನು ಕಂಡು ಹಿಡಿಯಲೇಬೇಕು. ರಾಜಕೀಯ ದೊಂಬರಾಟಕ್ಕೆ ಈ ಸಮಸ್ಯೆಯನ್ನು ಬಿಟ್ಟು ಕೊಳ್ಳುವುದಾದರೆ ಮಾನವೀಯತೆ ದೃಷ್ಟಿಯಿಂದ ನಿಜವಾಗಿಯೂ ಒಳ್ಳೆಯದಲ್ಲ ಎಂಬುದನ್ನು ಮಾನ್ಯ ಅಧ್ಯಕ್ಷರ ಮುಖಾಂತರ ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇದರ ಜೊತೆಗೆ ಇನ್ನೊಂದು ವಿಚಾರ ಹೇಳುವುದಾದರೆ ಈಗಾಗಲೇ ಮಾನ್ಯ ಸರ್ವೋಚ್ಚ ನ್ಯಾಯಾಲಯವು ತೀರ್ಪನ್ನು ಕೊಟ್ಟಿದೆ. ಇದು ಸುಪ್ರೀಂ ಕೋರ್ಟ್‌ನ ಘನ ನ್ಯಾಯಾಲಯದ ತೀರ್ಪು. ನೀರಿಲ್ಲದೆ ನಾವು ಸತ್ತೂ ಪರವಾಗಿಲ್ಲ, ಬೆಳೆ ಒಣಗಿದರೂ ಪರವಾಗಿಲ್ಲ ಯಾವ ಮಾಹಿತಿ ಆಧಾರದ ಮೇಲೆ ಈ ರೀತಿಯ ತೀರ್ಪನ್ನು ಕೊಟ್ಟಿದ್ದಾರೆ ಎಂಬುದು ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳೇ ಹೇಳಿರುವುದೇನೆಂದರೆ, ಪ್ರಧಾನ ಮಂತ್ರಿಗಳಿಗೆ ಕಳುಹಿಸಿರುವ ನಿಯೋಗದ ವರದಿಯಲ್ಲಿ ಇಲ್ಲಿರುವಂತಹ ನೀರಿನ ಲಭ್ಯತೆ ಕೇವಲ ಇಲ್ಲಿ ಕುಡಿಯುವುದಕ್ಕೆ ಮಾತ್ರ ಅಗುತ್ತದೆ ಹಾಗೂ ಹೀಗಿರುವಂತಹ ಪಸ್ತುಸ್ಥಿತಿಯನ್ನು ಕಾಪಾಡುವುದಕ್ಕೆ ಮಾತ್ರ ಸಾಧ್ಯವಿದೆ. ಬೇರೆ ನೀರನ್ನು ಬಿಡುವುದಕ್ಕೆ ಸಾಧ್ಯವಿಲ್ಲ ಎಂಬ statement ನ್ನು ಮಾನ್ಯ ಮುಖ್ಯಮಂತ್ರಿಗಳೇ ಹೇಳಿದ್ದಾರೆ. ಇಂತಹ ವರದಿಯನ್ನು ಆ ನಿಯೋಗದಲ್ಲಿ ಕೊಟ್ಟ ಮೇಲೆ ಕೇಂದ್ರ ಸರ್ಕಾರದ ಮಾನ್ಯ ಪ್ರಧಾನ ಮಂತ್ರಿಗಳು ಇವತ್ತು ನೀರಿನ ಲಭ್ಯತೆ ಇಲ್ಲ, ನಾವು ಸತ್ತು, ನಮ್ಮ ಕರ್ನಾಟಕದ ಜನತೆಯನ್ನು ಸಾಯಿಸಿ, ನಮ್ಮಲ್ಲಿರುವ ಜಾನುವಾರುಗಳನ್ನು ಸಾಯಿಸಿ, ನಮ್ಮಲ್ಲಿರುವ ನೀರನ್ನು ಬೇರೆ ರಾಜ್ಯಕ್ಕೆ ಬಿಡುಗಡೆ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಮಾನ್ಯ ಪ್ರಧಾನ ಮಂತ್ರಿಗಳು ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಒಂದು affidavit ನಲ್ಲಿ ಹಾಕಬಹುದಾಗಿತ್ತು ಎಂಬುದು ನನ್ನ ಭಾವನೆ. ಇವುಗಳೆಲ್ಲದರ ಮಧ್ಯದಲ್ಲಿ ಅಂತಿಮವಾಗಿ ಒಂದು ತೀರ್ಪನ್ನು ಕೊಟ್ಟಿದ್ದೀರಿ ಮೂರು ಸಾವಿರ ಕ್ಯೂಸೆಕ್ಸ್ ನೀರು ಹೋಗುತ್ತಿದೆ ಅದರ ಜೊತೆಗೆ ಇನ್ನೂ ಎರಡು ಕ್ಯೂಸೆಕ್ಸ್ ನೀರು ಸೇರಿ ಒಂದು ತಿಂಗಳೂಗಳ ಕಾಲ ಬಿಡಿ ಎಂದು ಆದೇಶ ಮಾಡುವುದಕ್ಕೆ ಆಗುತ್ತಿರಲಿಲ್ಲವೇ? ಅಲ್ಲಿಗೆ 10 ಟಿ.ಎಂ.ಸಿ. ನೀರು ಆಗುತ್ತಿತ್ತು. ಅದನ್ನು ಬಿಡುವುದಿಲ್ಲ. ಇಂದು ಬೆಂಗಳೂರು ಬಹಳ ಬೃಹತ್ತಾಗಿ ಬೆಳೆದಿದೆ. ಒಂದು ದಿವಸ ಕಾವೇರಿ ನೀರು ಬೆಂಗಳೂರಿಗೆ ಬರಲಿಲ್ಲವೆಂದರೆ ಬೆಂಗಳೂರು ಉಳಿಯುತ್ತದೆಯೇ? ಬೆಂಗಳೂರು ಅಭಿವೃದ್ಧಿ ಆಗುತ್ತದೆಯೇ? ಬೆಂಗಳೂರಿನ ಭವಿಷ್ಯ ಕಾವೇರಿ ನೀರಿನ ಮೇಲೆ ಇಂದು ನಿಂತಿದೆ. ಆ ಒಂದು ದೃಷ್ಟಿಯಿಂದ ನಾವು

ಆಲೋಚನೆ ಮಾಡುವುದಾದರೆ, ಇಂದು ನಿಜವಾಗಿಯೂ ಕರ್ನಾಟಕದ ಭವಿಷ್ಯ ಬೆಂಗಳೂರಿನ ಮೇಲೆ ನಿಂತಿರತಕ್ಕಂಥ ಈ ಸಂದರ್ಭದಲ್ಲಿ ಬೆಂಗಳೂರು, ಅದಲ್ಲದೆ ನಾವೆಲ್ಲಾ ಬೆಳೆಗೆ ನೀರು ಕೊಡಿ ಎಂದು ಕೇಳುತ್ತಿಲ್ಲ. Floride ಅಂಶ ನೀರಿನಲ್ಲಿ ಜಾಸ್ತಿಯಾಗಿರುವುದರಿಂದ ನಾವು ಈಗ ಕುಡಿಯುವ ನೀರಿಗಾಗಿ ಹೇಮಾವತಿ ನದಿಗೆ ಕೆಲವು ಯೋಜನೆಗಳ ಮುಖಾಂತರ ಮಾಡಿದ್ದೇವೆ. ಆ ನದಿ ನೀರನ್ನು ಈಗ ತೆಗೆದುಕೊಳ್ಳುತ್ತಿದ್ದೇವೆ. ಈಗಾಗಲೇ ಅಲ್ಲಿಯೂ ಸಹ ಕುಡಿಯುವ ನೀರಿಲ್ಲವೆಂದರೆ ಹೇಗೆ ಏತ ನೀರಾವರಿ ಮುಖಾಂತರ ಹೋಗಿದ್ದೇವೆ ಆ ಕುಡಿಯುವ ನೀರು ನಮಗಿಲ್ಲವೆಂದರೆ ಯಾವ ರೀತಿ ಸಾಧ್ಯವಾಗುತ್ತದೆ? ಇಂತಹ ಪರಿಸ್ಥಿತಿಯನ್ನು ಅರಿತು ದಯಮಾಡಿ ಪರಿಹಾರವನ್ನು ಮಾಡಬೇಕು. ಇನ್ನು ಮುಂದೆ ಈ ಪರಿಸರವನ್ನು ನೋಡಿದರೆ ಗಂಗಾ ಕೃಷ್ಣ ಸಂಗಮವಾಗಬೇಕೆಂದು ಇತ್ತೀಚೆಗೆ ತಜ್ಞರು ಹೇಳುತ್ತಿದ್ದರು. ಗಂಗಾ ಕೃಷ್ಣ ಸಂಗಮವಾಗದಿದ್ದರೆ ದಕ್ಷಿಣ ಭಾರತಕ್ಕೆ ಭವಿಷ್ಯವಿಲ್ಲವೆಂದು ಹೇಳುತ್ತಿದ್ದರು. ಆ ಕಾರಣದಿಂದ ಮಾನ್ಯ ಪ್ರಧಾನ ಮಂತ್ರಿಗಳು ಮನಸ್ಸು ಮಾಡಬೇಕು. ಈ cheap popularity ಕಾರ್ಯಕ್ರಮಗಳನ್ನು ನಿಲ್ಲಿಸಿ ಸಂಗಮವಾದರೂ ಮಾಡಿದರೆ ಈ ದೇಶದ ಭವಿಷ್ಯಕ್ಕೆ ಒಳ್ಳೆಯದಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಮಾನ್ಯ ಮುಖ್ಯಮಂತ್ರಿಗಳು ಈ ನಿಟ್ಟಿನಲ್ಲಿ ಯೋಚನೆ ಮಾಡಿ, ಮಾನ್ಯ ಪ್ರಧಾನ ಮಂತ್ರಿಗಳೇ ಒತ್ತಾಯ ತರಬೇಕು, ನ್ಯಾಯಾಲಯಕ್ಕೆ ಹೋದರೆ ಸರಿಹೋಗುವುದಿಲ್ಲ. ಮಾನ್ಯ ಸರ್ವೋಚ್ಚ ನ್ಯಾಯಾಲಯದಿಂದ ನಮಗೆ ಒಳ್ಳೆಯದಾಗುವುದಿಲ್ಲವೆಂಬುದು ನಾನು ನೋಡಿದ್ದೇನೆ. ಕೇಂದ್ರ ಸರ್ಕಾರದ ಮಾನ್ಯ ಪ್ರಧಾನ ಮಂತ್ರಿಗಳೇ ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಒಂದು affidavit ಸಲ್ಲಿಸಬೇಕು. ತಾವು ಈ ಒಂದು ನಿಟ್ಟಿನಲ್ಲಿ, ಮಾನ್ಯ ಪ್ರಧಾನ ಮಂತ್ರಿಗಳಿಗೆ ವಸ್ತು ಸ್ಥಿತಿಯನ್ನು ತಿಳಿಸಿ ಇವತ್ತಿನ ದಿವಸ ಯಾವುದೇ ಕಾರಣದಿಂದ ನೀರನ್ನು ಬಿಡುವುದಕ್ಕೆ ಸಾಧ್ಯವಿಲ್ಲವೆಂದು ತಿಳಿಸಿರಿ. ನಮ್ಮ ರಾಜ್ಯದ ಜನಗಳಿಗೆ ವಿಷ ಕೊಡಿ, ನಮ್ಮ ರಾಜ್ಯದ ಜನರನ್ನು ಸಾಯಿಸಿ, ನಂತರ ನೀವು ನೀರು ತೆಗೆದುಕೊಂಡು ಹೋಗಿ ಎನ್ನುವ ನಿರ್ಧಾರವನ್ನು ತಾವು ಹೇಳಬೇಕು. ಈ ರೀತಿ ಹೇಳುವ ಕಾಲ ಸಮೀಪ ಬರುತ್ತಿದೆ. ಈ ಒಂದು ನಿಟ್ಟಿನಲ್ಲಿಯೇ ಸರ್ಕಾರ ವ್ಯವಹರಿಸಬೇಕು ಎನ್ನುವ ಮಾತನ್ನು ಸಹ ಈ ಸಂದರ್ಭದಲ್ಲಿ ಹೇಳಿ, ಮಾತನಾಡಲು ಅವಕಾಶ ಮಾಡಿಕೊಟ್ಟ ಸನ್ಮಾನ್ಯ ಅಧ್ಯಕ್ಷರಿಗೆ ಧನ್ಯವಾದಗಳನ್ನರ್ಪಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಶ್ರೀನಿವಾಸ್ (ಮಂಡ್ಯ): ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯಿಂದ ಇದುವರೆಗೂ ಸುಪ್ರೀಂ ಕೋರ್ಟಿನಿಂದ ಬಂದಂಥ ತೀರ್ಪು, ಸಿ.ಅರ್.ಎ. ತೀರ್ಪು ಮತ್ತು ಸಿಎಂಸಿ ತೀರ್ಪುಗಳು ಎಲ್ಲವೂ ಸಹ ಕರ್ನಾಟಕದ ವಿರುದ್ಧವಾಗಿದೆ. ಈಗ

ಸುಪ್ರೀಂ ಕೋರ್ಟ್10 ಸಾವಿರ ಕ್ಯೂಸೆಕ್ಸ್ ನೀರನ್ನು ಪ್ರತಿ ದಿನ ಬಿಡಬೇಕು ಎಂದು ಹೇಳಿದೆಯೋ, ಈಗಾಗಲೇ ಬಿಳಿಗುಂಡ್ಲುನಿಂದ ಬಂದ ವರದಿ ಪ್ರಕಾರ 5 ಸಾವಿರ ಕ್ಯೂಸೆಕ್ಸ್ ನೀರು ಕರ್ನಾಟಕದಿಂದ ತಮಿಳುನಾಡಿಗೆ ಹೋಗುತ್ತಿದೆ. ಇನ್ನು 5 ಸಾವಿರ ಹೆಚ್ಚುವರಿ ಕ್ಯೂಸೆಕ್ಸ್ ನೀರನ್ನು ಮಾತ್ರ ಬಿಡಬೇಕಾಗಿದೆ. ಆದರೆ Contempt of Court ಆಗುತ್ತದೆ ಎನ್ನುವ ದೃಷ್ಟಿಯಿಂದ ಹೆದರಿ ನೀರನ್ನು ಬಿಡಬೇಕಾಗಿಲ್ಲ, ನಾವು ಪುನರ್ ಪರಿಶೀಲನಾ ಅರ್ಜಿಯನ್ನು ಸುಪ್ರೀಂ ಕೋರ್ಟಿಗೆ ಹಾಕುವುದರ ಮುಖಾಂತರ ನಮ್ಮ ಮೇಲೆ ಒದಗಿ ಬಂದಿರುವ ಸಂಕಷ್ಟವನ್ನು ಪರಿಹರಿಸಿಕೊಳ್ಳಬಹುದೆಂದು ನಾನು ಭಾವಿಸುತ್ತಿದ್ದೇನೆ. ಏಕೆಂದರೆ 5 ಸಾವಿರ ಕ್ಯೂಸೆಕ್ಸ್ ನೀರು ಆಗಲೇ ಪ್ರತಿ ದಿನ ಹೋಗುತ್ತಿದೆ. ಇದೆಲ್ಲದರ ಜೊತೆಗೆ ನಮ್ಮ ಕಾವೇರಿ ಕಣಿವೆಯ ಎಲ್ಲಾ ಜಿಲ್ಲೆಗಳ, ತಾಲ್ಲೂಕುಗಳ ಕೇಂದ್ರಗಳಿಗೆ ಕುಡಿಯುವ ನೀರು ಕಾವೇರಿ ನದಿ ನೀರೇ ಆಗಿದೆ. ಏನಾದರೂ 5 ಟಿಎಂಸಿ ನೀರನ್ನು ತಮಿಳುನಾಡಿಗೆ ಬಿಟ್ಟಿದ್ದೇ ಆದರೆ, ಯಾವ ತಾಲ್ಲೂಕು ಕೇಂದ್ರಕ್ಕಾಗಲೀ, ಜಿಲ್ಲಾ ಕೇಂದ್ರಕ್ಕಾಗಲೀ ಮತ್ತು ರಾಜಧಾನಿ ಬೆಂಗಳೂರಿಗೆ 2–3 ದಿನ ನೀರು ಇಲ್ಲವೆಂದರೆ ಆಗುವ ಪರಿಣಾಮ ಎಂಥ ಕಠೋರ ಎನ್ನುವುದನ್ನು ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಅರಿತುಕೊಳ್ಳಬೇಕು ಮತ್ತು ಇದನ್ನು ಪರಿಶೀಲಿಸಬೇಕು ಎಂದು ಕೇಳಿಕೊಳ್ಳುತ್ತಿದ್ದೇನೆ. ಇದೆಲ್ಲದರ ಜೊತೆಗೆ ನಮ್ಮ ಕಾವೇರಿ ಕಣಿವೆಯ ನದಿ ಪಾತ್ರದಲ್ಲಿ ಮತ್ತು ಅಚ್ಚುಕಟ್ಟುದಾರರಲ್ಲಿ ಬೆಳೆಗಳು ಇನ್ನು 15–20 ದಿನಗಳಲ್ಲಿ ಕಟಾವಿಗೆ ಬರುತ್ತವೆ, ಕೊನೆಯ ಹಂತಕ್ಕೆ ತಲುಪಿದ್ದೇವೆ. ಇನ್ನು 15 ದಿನ ನೀರನ್ನು ಕೊಟ್ಟರೆ ಬೆಳೆಗಳು ಕೈಗೆ ಸಿಗುತ್ತವೆ. ಈಗೇನಾದರೂ ನೀರನ್ನು ಹರಿಸದೇ ಇದ್ದರೆ ಬೆಳೆ ಸಂಪೂರ್ಣವಾಗಿ ನಾಶವಾಗುತ್ತವೆ. ದನಕರುಗಳಿಗೆ ಮೇವು ಸಿಗುವುದಿಲ್ಲ. ಜನರಿಗೆ ಆಹಾರ ಸಿಗುವುದಿಲ್ಲ, ಸಾಲಗಾರಾಗುತ್ತಾರೆ, ಬವಣೆ ಜಾಸ್ತಿಯಾಗುತ್ತದೆ. ಇದೆಲ್ಲದರ ಜೊತೆಗೆ ಸರ್ಕಾರ ಪರಿಹಾರವನ್ನು ಕೊಡಬೇಕಾಗುತ್ತದೆ. ಗುಂಟೆಗೆ ಕನಿಷ್ಟ 1 ಸಾವಿರದಂತೆ 1 ಎಕರೆಗೆ 40 ಸಾವಿರ ರೂ.ಗಳ ಪರಿಹಾರವನ್ನು ರೈತರಿಗೆ ಕೊಡಬೇಕಾಗುತ್ತದೆ. ಇದೆಲ್ಲವನ್ನು ಮನದಟ್ಟು ಮಾಡಿಕೊಂಡು ಸುಪ್ರೀಂಕೋರ್ಟ್‌ಗೆ ಪುನರ್ ಪರಿಶೀಲನಾ ಅರ್ಜಿಯನ್ನು ಹಾಕಿ ನಮ್ಮ ಮೇಲೆ ಬಂದಿರುವಂಥ ಸಂಕಟವನ್ನು ಪರಿಹರಿಸಬೇಕೆಂದು ಹೇಳಿ ತಮ್ಮ ಮೂಲಕ ಸರ್ಕಾರವನ್ನು ನಾನು ಒತ್ತಾಯ ಮಾಡುತ್ತಿದ್ದೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನಮ್ಮ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮಿ ಲೇಔಟ್): ಸನ್ಮಾನ್ಯ ಸಭಾಧ್ಯಕ್ಷರೆ, ಇವತ್ತು ಏನು ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯನ್ನು ಮಂಡಿಸಿದ್ದಾರೆ, ಸುಪ್ರೀಂಕೋರ್ಟ್‌ನಿಂದ ಬಂದಿರುವಂಥ ಈ ಒಂದು ತೀರ್ಪು ಕರ್ನಾಟಕದ ರೈತರಿಗೆ ಹಾಗೂ ಕುಡಿಯುವ

ನೀರಿಗೆ ಅವಲಂಬಿತವಾಗಿರುವ ಕರ್ನಾಟಕದ ಜನತೆಗೆ ಇದೊಂದು ಮರಣ ದಂಡನೆ ಎಂದು ಹೇಳಿ ಈ ಸಂದರ್ಭದಲ್ಲಿ ನಾನು ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುತ್ತೇನೆ. ಏಕೆಂದರೆ ಬಹುಶಃ ಟಿಪ್ಪು ಸುಲ್ತಾನ್ ಕಾಲದಿಂದ ಈ ಒಂದು ಕೆ.ಆರ್.ಎಸ್. ನಿರ್ಮಾಣದ ಹಿನ್ನೆಲೆ, ಇತಿಹಾಸವನ್ನು ಮೆಲುಕು ಹಾಕಿ ನೋಡಿದಾಗಲೂ ಸಹ ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ. ಎಲ್ಲೋ ಒಂದು ಕಡೆ ನಾವು ಇನ್ನು ಈ ಒಂದು ಹೇಳಿಕೆಯಲ್ಲಿ ಹೇಳಿರುವ ರೀತಿಯಲ್ಲಿ Presidency Princely States ಬಗ್ಗೆ ಏರ್ಪಟ್ಟಂಥ 1892ರ ಹಾಗೂ 1924ರ ಒಪ್ಪಂದಗಳ ಹಿನ್ನೆಲೆಯಲ್ಲೇ ಈ ಒಂದು ವಾದ ವಿವಾದಗಳು ನಡೆಯುತ್ತಿರುವುದು ಮತ್ತು ಆರಂಭಿಕವಾಗಿ ಕೆ.ಆರ್.ಎಸ್.ನ್ನು ನಿರ್ಮಾಣ ಮಾಡತಕ್ಕಂಥ ಸಂದರ್ಭದಲ್ಲಿ ನಮ್ಮಲ್ಲಿ ಎಷ್ಟು ಎಕರೆ ಜಮೀನನ್ನು ಉಳುಮೆ ಮಾಡತಕ್ಕಂಥದ್ದನ್ನು ಲೆಕ್ಕ ಹಾಕಿ ಇಟ್ಟುಕೊಂಡಿರುವುದೇ ವಾದ ವಿವಾದಗಳು ಆಗುತ್ತಿವೆ. ಇವತ್ತು ಅಪ್ಪ ಹಾಕಿದ ಆಲದ ಮರಕ್ಕೆ ನಾವು ನೇಣು ಹಾಕಿಕೊಳ್ಳುವಂಥ ಅಗತ್ಯತೆ ಇಲ್ಲ. ಬಹುಶಃ ಇಲ್ಲಿ ಹೇಳಿದ ಹಾಗೆ ನಾವು ವಿಫಲರಾಗಿದ್ದೇವೆ, ಅವಕಾಶವನ್ನು ಉಪಯೋಗಿಸಿಕೊಳ್ಳಲಿಲ್ಲ, ಉಪಯೋಗಿಸಿಕೊಳ್ಳಲಿಲ್ಲ ಎಂದು ಹೇಳುತ್ತಾರೆ ಏಕೆ ಉಪಯೋಗಿಸಿಕೊಳ್ಳಲಿಲ್ಲ? ಈ ಸಂದರ್ಭದಲ್ಲಿ ಎಲ್ಲೋ ಒಂದು ಕಡೆ dead lock ನ್ನು ಹಾಕಬೇಕಾಗುತ್ತದೆ. ಒಕ್ಕೂಟದಲ್ಲಿದೇವೆ ನಿಜ. ಇವತ್ತು ರಾಷ್ಟ್ರೀಯ ಜಲ ನೀತಿ ಎನ್ನುವುದು ಇದುವರೆಗೂ ಬಂದಿಲ್ಲ ಎಲ್ಲಿಯವರೆಗೂ ಮುಂದುವರೆಸಿಕೊಂಡು ಹೋಗೋಣ? ಹಲವಾರು ಜನ ಹಿರಿಯ ಸದಸ್ಯರು ಎಲ್ಲರೂ ಹೇಳಿದಂತೆ ಇಡೀ ಕರ್ನಾಟಕದಲ್ಲಿ ಪ್ರಮುಖವಾಗಿ ಕುಡಿಯುವ ನೀರಿಗೆ, ಜಾನುವಾರುಗಳಿಗೆ, ನಿಂತಿರುವಂಥ ಬೆಳೆಗೆ ಇವತ್ತು ನೀರಿಲ್ಲದ್ದಂಥ ಸ್ಥಿತಿಯಲ್ಲಿ ಇಂತ ಮರಣ ದಂಡನೆಯನ್ನು ಇವತ್ತು ಸನ್ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಳ್ಳುತ್ತಾರಾ? ಈ ಸರ್ಕಾರ ಒಪ್ಪಿಕೊಳ್ಳುತ್ತದೆಯೇ? ಇಲ್ಲಿರುವಂಥ 224 ಶಾಸಕರುಗಳು ನಾವು ಒಪ್ಪಿಕೊಳ್ಳಬೇಕೆ? ಸುಪ್ರೀಂಕೋರ್ಟಿಗೆ ಹೇಳಬೇಕಾಗುತ್ತದೆ, ರಾಷ್ಟ್ರಪತಿಗಳ ಮುಖೇನ, ಪ್ರಧಾನಮಂತ್ರಿಗಳ ಮುಖೇನ ಹೇಳಬೇಕಾಗುತ್ತದೆ. ನಾವು ಬೆಂಗಳೂರಿನ ಜನತೆಗೆ ಹೋಗಿ ಉತ್ತರ ಕೊಡಬೇಕಾಗುತ್ತದೆ. ಮೈಸೂರು, ಹಾಸನ, ಮಂಡ್ಯದಲ್ಲಿ ನಿಂತಿರುವಂಥ ರೈತರಿಗೆ ,ಈ ವಿಧಾನಸಭೆಯಿಂದ ಹೋಗಿ ಉತ್ತರ ಕೊಡಬೇಕಾಗುತ್ತದೆ. ಇವತ್ತು ಈ ಒಂದು ತೀರ್ಮ ಪೂರ್ವಗ್ರಹ ಪೀಡಿತವಾಗಿಲ್ಲ ಎನ್ನುವುದಕ್ಕೆ ಇಲ್ಲಿರುವಂಥ ಸಾಕ್ಷಿ ಏನೆಂದರೆ ಇಲ್ಲಿ ಬಂದಿರುಪಂಥ ಕೇಂದ್ರದ ತಂಡದ ವರದಿಯನ್ನು ಸಹ ಗಣನೆಗೆ ತೆಗೆದುಕೊಂಡಿಲ್ಲವೆಂದರೆ, ಇವತ್ತು ಕರ್ನಾಟಕವನ್ನು ಅಥವಾ ಕರ್ನಾಟಕದ ರೈತಾಪಿ ಜನರನ್ನು ಅಥವಾ ಇಲ್ಲಿ ಸ್ಥಿರ ಸರ್ಕಾರ ಇಲ್ಲ ಎನ್ನುವುದನ್ನು ನೋಡಿ ಏನಾದರೂ ಆಟವಾಡುತ್ತಿದ್ದಾರಾ? ಈ ರೀತಿಯಾಗಿ ತೀರ್ಮಗಳನ್ನು ಕೊಟ್ಟು ಕರ್ನಾಟಕವನ್ನು ಕಡೆಗಣಿಸುವಂಥದ್ದನ್ನು ಖಂಡಿತವಾಗಿ

ಒಪ್ಪಿಕೊಳ್ಳುವಂಥದ್ದು ಸರಿಯಲ್ಲ. ಈ ಒಂದು ತೀರ್ಪಿನಿಂದ ಎಲ್ಲೋ ಒಂದು ಕಡೆ ನಾವು ಇನ್ನೂ ಜೀತ ಪದ್ಧತಿಯಲ್ಲಿದ್ದೇವೆ ಎನ್ನುವುದು ಕರ್ನಾಟಕದ ಇತಿಹಾಸವನ್ನು ಓದಿದಾಗ ಗೊತ್ತಾಯಿತು. ಮೈಸೂರು ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಿದಾಗಲೂ ಸಹ ತಮಿಳುನಾಡು ಇದೇ ರೀತಿಯ ವಾದವನ್ನು ಮಂಡಿಸಿದೆ. ಮದರಾಸು ಯೂನಿವರ್ಸಿಟಿಯನ್ನೇ ಮುಂದುವರೆಸಬೇಕು ಎಂದು ಹೇಳುತ್ತದೆ. ಬಹುಶಃ ಇವತ್ತು ಇನ್ನೂ Princely States ಅನ್ನು ಇದ್ದೇವೆಯೇ ಅಥವಾ ನಾವು ಬ್ರಿಟಿಷ್ ರಿಂದ ಸ್ವತಂತ್ರ ಬಂದಿದ್ದಕ್ಕೆ ನಾವು ಬದ್ಧರಾಗಿದ್ದೇವೆಯೇ ಎನ್ನುವುದನ್ನು ನಾವು ಪ್ರಶ್ನೆ ಮಾಡಬೇಕಾಗುತ್ತದೆ. ದಯಮಡಿ ಮುಖ್ಯಮಂತ್ರಿಗಳೇ, ನಿಮ್ಮನ್ನು ಮಂಡ್ಯದ ರೈತರು ಮಾದೇಗೌಡರಾದಿಯಾಗಿ ಹೇಳಿದರು, ನೀವು ಕೊಟ್ಟಂಥ ಮಾತು ನೀರು ಬಿಡುವುದಿಲ್ಲ ಎಂದಿದ್ದಕ್ಕೆ ನಿಮ್ಮನ್ನು ಮೆರವಣಿಗೆ ಮಾಡುತ್ತೇವೆ ಎಂದು ಹೇಳಿದರು. ಇವತ್ತು ಸಹ ನಿಮ್ಮನ್ನು ಮೆರವಣಿಗೆ ಮಾಡಬೇಕು ಎಂದು ಜನ ಕಾಯುತ್ತಿದ್ದಾರೆ. ದಯವಿಟ್ಟು ಅಧಿಕಾರ ಎನ್ನುವುದು ಹಣೆಬರಹದಲ್ಲಿದ್ದರೆ ಮುಂದುವರೆಯಬಹುದು, ಇವತ್ತು ಕೇಂದ್ರಕ್ಕಾಗಲಿ ಸುಪ್ರೀಂಕೋರ್ಟಿಗಾಗಲಿ ಕರ್ನಾಟಕದ ಜನತೆಯ ನೋವನ್ನು ಅವರಿಗೆ ತಲುಪಿಸಬೇಕು ಎನ್ನುವುದಾದರೆ ನಾವು ಬೇಕಾದರೆ ಅಧಿಕಾರ ಬಿಡುತ್ತೇವೆಯೇ ಹೊರತು ನೀರು ಬಿಡುವುದಿಲ್ಲ ಎನ್ನುವಂಥ ತೀರ್ಮಾನವನ್ನು ತೆಗೆದುಕೊಳ್ಳಿ ಆಗ ನಿಜವಾಗಿಯೂ ಹೇಳುತ್ತೇನೆ, ನೀವು ಒಬ್ಬ ಗಂಡುಮೆಟ್ಟಿನ ನಾಡಿನಲ್ಲಿ ಆಯ್ಕೆಯಾಗಿರುವಂಥ ಮುಖ್ಯಮಂತ್ರಿಗಳ ಜೊತೆಗೆ ಇರುತ್ತೇವೆ ಎನ್ನುವಂತ ಮಾತನ್ನು ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳಿಗೆ ಒತ್ತಾಯ ಮಾಡುವುದಕ್ಕೆ ಬಯಸುತ್ತೇನೆ. ಇವತ್ತು ಹೇಳಿದಂತೆ ಎಲ್ಲಾ 224 ಶಾಸಕರು ನಿಮ್ಮ ಜೊತೆಗೆ ದೆಹಲಿಗೂ ಬರುತ್ತೇವೆ. ರಾಷ್ಟ್ರಪತಿ ಭವನಕೂ ಬರುತ್ತೇವೆ, ಕರ್ನಾಟಕದ ಕಾವೇರಿ ಕಣಿವೆ ರೈತರ ಕಣ್ಣೀರಿನ ಮೇಲೆ, ಇವತ್ತು ಆ ರೈತರ ಸಮಾಧಿ ಮೇಲೆ ಇವತ್ತು ತಮಿಳುನಾಡಿನ ರೈತರಿಗೆ ಮೃಷ್ಟಾನ್ನ ಭೋಜನ ಉಣಿಸುವುದಕ್ಕೆ ನಾವು ತಯಾರಾಗಿದ್ದೇವೆಯೇ ಎನ್ನುವಂಥದ್ದು, 1ನೇ ಬೆಳೆ, 2ನೇ ಬೆಳೆ ಹಾಗೂ 3ನೇ ಬೆಳೆಗೆ ಅವರಿಗೆ ನೀರು ಬೇಕು, ನಮಗೆ ಕುಡಿಯುವುದಕ್ಕೆ ನೀರಿಲ್ಲ ಎಂದು ಹೇಳಿದರೆ, ನಾವು ಎಲ್ಲಿದ್ದೇವೆ? ಏಕೆ ಈ ಜೀತಪದ್ಧತಿ? ಏಕೆ ಈ ಗುಲಾಮಗಿರಿ? ಇನ್ನೂ slavery ಯಾಗಿರುವುದು ಸೂಕ್ತವಲ್ಲ, ಇವೆಲ್ಲಾ ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ. ನಮಗೆ ಕುಡಿಯುವ ನೀರಿಗೆ ಇರುವಂಥ 24 ಟಿ.ಎಂ.ಸಿ. ಲಭ್ಯ ನೀರಿನಲ್ಲಿ ಇವತ್ತು ಬೆಂಗಳೂರು ನಗರದ ಎಲ್ಲರಿಗೂ ಇರುವಂಥ ನೀರಿನಲ್ಲಿ ನಾವು ಏನು ಉತ್ತರ ಕೋಡೋಣ? 4ನೇ ಹಂತದಲ್ಲಿ ಕೇವಲ 100 ಎಂ.ಎಲ್.ಡಿ. ಮಾತ್ರ ನೀರು ಬಂದಿರುವುದು, ಇನ್ನೂ 400 ಎಂ.ಎಲ್.ಡಿ. ನೀರು ಬಂದಿಲ್ಲ. ಬೇಸಿಗೆವರೆಗೂ ನಾವು ಹೇಗೆ ಕಳೆಯುವುದಕ್ಕೆ ಆಗುತ್ತದೆ?

ಇವತ್ತು ನಾವು ಹೇಮಾವತಿಯಿಂದ ಬೆಂಗಳೂರಿಗೆ ನೀರು ಕೊಡಿ, ತಿಪ್ಪಗೊಂಡನಹಳ್ಳಿಗೆ ನೀರು ಕೊಡಿ, ನೆಲಮಂಗಲಕ್ಕೆ ನೀರು ಕೊಡಿ, ಮಂಡ್ಯದ ಸುತ್ತಮುತ್ತ ಇರುವಂಥ, ತುಮಕೂರಿನ ಸುತ್ತಮುತ್ತ ಇರುವಂಥ ಊರುಗಳಿಗೆ ಕೊಡಿ ಎಂದು ಕೇಳುತ್ತಿದ್ದೇವೆ. ಕುಡಿಯುವ ನೀರಿಗೆ ನಮಗೆ ಲಭ್ಯತೆ ಇಲ್ಲದೇ ಇರುವಂಥ ಸಂದರ್ಭದಲ್ಲಿ ದಯವಿಟ್ಟು ಈ ಒಂದು ಕಠಿಣವಾದ ನಿಲುವನ್ನು ತೆಗೆದುಕೊಳ್ಳೋಣ,. ಇರತಕ್ಕಂಥ 120 ದಿವಸ ಒಂದು ತಿರ್ಮಾನ ತೆಗೆದುಕೊಳ್ಳಿ, ಬದ್ದರಾಗಿ ಅದಕ್ಕೆ ನೋಡೋಣ ಏನಾಗುತ್ತದೋ, ಯಾವ ರೀತಿಯಾಗಿ ಎಲ್ಲರನ್ನು ಜೈಲಿಗೆ ಹಾಕುತ್ತಾರೋ ಅಥವಾ ಯಾವ ರೀತಿಯಾಗಿ ಸುಪ್ರೀಂ ಕೋರ್ಟಿಗೆ ತೆಗೆದುಕೊಂಡು ಹೋಗಿ ನಿಲ್ಲಿಸುತ್ತಾರೋ ಅದಕ್ಕೆ ಬದ್ದರಾಗೋಣ, ದಯವಿಟ್ಟು ಇವತ್ತು ಗಂಡೆದೆಯ ತೀರ್ಮಾನವನ್ನು ತೆಗೆದುಕೊಳ್ಳಬೇಕು. ನಾವು ನಿಮ್ಮ ಜೊತೆ ಇದ್ದೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ರವಿ ಸುಬ್ರಹ್ಮಣ್ಯ (ಬಸವನಗುಡಿ): ಸನ್ಮಾನ್ಯ ಸಭಾಧ್ಯಕ್ಷರೆ, ಸುಪ್ರೀಂಕೋರ್ಟ್ ತೀರ್ಪು ಕರ್ನಾಟಕದ ಜನತೆಯ ಮೇಲೆ ಯಾವ ಒಂದು ಆಘಾತಕಾರಿ ಪರಿಣಾಮವನ್ನು ಬೀರಿದೆ ಎನ್ನುವುದರ ಬಗ್ಗೆ ಸಾಕಷ್ಟು ವಿಷಯಗಳನ್ನು ಕಾವೇರಿ ಬೇಸಿನ್ ಭಾಗದ ನಮ್ಮ ರೈತರ ಪರವಾಗಿ ಅನೇಕ ಜನ ಶಾಸಕರು ಪ್ರಸ್ತಾಪವನ್ನು ಮಾಡಿದ್ದಾರೆ. ಇವತ್ತು ಇದು ಬರೀ ಕಾವೇರಿ ಬೇಸಿನ್ ಜನರಿಗೆ ಮಾತ್ರವಲ್ಲ ವಿಶೇಷವಾಗಿ ಬೆಂಗಳೂರು ಮಹಾನಗರದ ಜನತೆಗೆ ಇರತಕ್ಕಂಥ ಕುಡಿಯುವ ನೀರಿನ ವ್ಯವಸ್ಥೆಯ ಒಂದೇ-ಒಂದು ಆಧಾರ ಕಾವೇರಿ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಸುಧೀರ್ಘವಾದಂಥ ವಿಷಯಗಳನ್ನು ಸದನದ ಮುಂದೆ ಇಟ್ಟು, ಮುಂದಿನ ಕ್ರಮಗಳನ್ನು ಆಚರಣೆಗೆ ತರುತ್ತೇವೆ. ರಾಜ್ಯದ ಸಂಸದರ ನಿಯೋಗವನ್ನು ಮಾನ್ಯ ಪ್ರಧಾನಮಂತ್ರಿಗಳ ಸಮ್ಮುಖಕ್ಕೆ ತೆಗೆದುಕೊಂಡು ಹೋಗುತ್ತೇವೆ ಎನ್ನುವಂಥ ಮಾತನ್ನು ತಿಳಿಸಿದ್ದಾರೆ, ಈ ಸಂದರ್ಭದಲ್ಲಿ ಇವತ್ತು ಬೆಂಗಳೂರು ಮಹಾನಗರಕ್ಕೆ ಕುಡಿಯುವ ನೀರನ್ನು ತರತಕ್ಕಂಥ ನಿಟ್ಟಿನಲ್ಲಿ ತಿಪ್ಪಗೊಂಡನಹಳ್ಳಿ ಒಣಗಿ ಹೋಗಿದೆ ಮತ್ತು ಹೇಮಾವತಿ ನೀರನ್ನು ಬೆಂಗಳೂರಿಗೆ ಹರಿಸುತ್ತೇವೆ ಎನ್ನುವಂತ ಮಾತನ್ನು ಹಿಂದೆ ಅನೇಕ ಬಾರಿ ಪ್ರಸ್ತಾಪ ಮಾಡಿದ್ದರು. ಶ್ರೀ ಸುರೇಶ್ ಕುಮಾರ್ ರವರು ತಿಪ್ಪಗೊಂಡನಹಳ್ಳಿ ಜಲಾನಯನ ಪ್ರದೇಶದ ಅಭಿವೃದ್ಧಿಯಾಗಬೇಕೆಂದು ಸುಮಾರು 8–10 ವರ್ಷಗಳ ಹಿಂದೆ ಒಂದು ಪಾದಯಾತ್ರೆ ಮಾಡಿದರು. ಇತ್ತೀಚೆಗೆ ಶಾಸಕರಾದ ಶ್ರೀ ವಿಶ್ವನಾಥ್‌ರವರು ಕೂಡಾ ಒಂದು ಪಾದಯಾತ್ರೆಯನ್ನು ಮಾಡಿ ಆ ಭಾಗವನ್ನು ಪುನಃಶ್ಚೇತನಗೊಳಿಸಬೇಕೆನ್ನುವ ಒಂದು ಪ್ರಯತ್ನವನ್ನು ಮಾಡಿ ಸರ್ಕಾರಕ್ಕೆ ಒಂದು ಒತ್ತಾಸೆಯನ್ನು ತಂದಿದ್ದರು. ಇವತ್ತು ಈ ಸರ್ಕಾರ ಕಾವೇರಿ ಬೇಸಿನ್ ನಿಂದ ಬೆಂಗಳೂರು ಮಹಾನಗರಕ್ಕೆ ಹೊಸದಾಗಿ 500

ಎಂ.ಎಲ್.ಡಿ. ನೀರನ್ನು ತರಬೇಕು ಎನ್ನುವ ಒಂದು ಪ್ರಯತ್ನವನ್ನು ಮಾಡಿದುದರ ಪರಿಣಾಮವಾಗಿ ಮೊದಲನೇ ಹಂತವಾಗಿ 100 ಎಂ.ಎಲ್.ಡಿ. ನೀರು ಬಂದಿದೆ, ಇನ್ನು ಬಾಕಿ 400 ಎಂ.ಎಲ್.ಡಿ. ನೀರು ಬೆಂಗಳೂರಿಗೆ ಹರಿಯಬೇಕಾಗಿದೆ. ಇನ್ನು ನಮಗೆ ಮಳೆ ಬರತಕ್ಕದ್ದು ಸುಮಾರು 6–7 ತಿಂಗಳುಗಳ ನಂತರ, ಆದರೆ ಬೆಂಗಳೂರಿಗೆ ಇರತಕ್ಕಂಥ ಒಂದೇ ಒಂದು ಆಸರೆ ಕಾವೇರಿ. ಈ ಕಾವೇರಿಯಲ್ಲಿ ಇರತಕ್ಕಂಥ ನೀರನ್ನು ಸುಪ್ರೀಂ ಕೋರ್ಟಿನ ಆದೇಶದ ಮೇರೆಗೆ ನಾವು ಇವತ್ತೇನಾದರೂ ಹರಿಸಿದ್ದೇ ಆದಲ್ಲಿ, ಬೆಂಗಳೂರಿನ ಜನತೆ ಮಹದೊಂದು ಘೋರವಾದಂತಹ ಬರವನ್ನು ಎದುರಿಸಬೇಕಾಗುತ್ತದೆ. ಏಕೆಂದರೆ ಇಲ್ಲಿ ಈಗಾಗಲೇ ಅಂತರ್ಜಲ ಸಂಪೂರ್ಣವಾಗಿ ಕುಸಿದಿರತಕ್ಕಂಥ ಸಂದರ್ಭದಲ್ಲಿ ಯಾವುದೇ ಬೋರ್ ವೆಲ್ ಗಳಲ್ಲಿ ನೀರಿಲ್ಲ. ನಾವು ಸಂಪೂರ್ಣವಾಗಿ ಕಾವೇರಿ ನೀರಿನ ಮೇಲೆ ಅವಲಂಬಿತ ಆಗಿರಬೇಕಾಗಿರುವಂತಹ ಸಂದರ್ಭದಲ್ಲಿ ಈಗ ನಾವೇನು ನಿರ್ಧಾರ ತೆಗೆದುಕೊಳ್ಳಬೇಕು ಎನ್ನುವುದು ಬೆಂಗಳೂರಿನ ಜನತೆಗೆ ಬಹಳ ಒಂದು ನೋವಿನ ಸಂಗತಿಯಾಗಿದೆ. ಇವತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ, ಬೆಂಗಳೂರು ಖ್ಯಾತಿಯನ್ನು ಪಡೆದಿದೆ. ಬೇರೆ ಬೇರೆ ರಾಷ್ಟ್ರಗಳ ಜನ ಬೆಂಗಳೂರಿನ ಕಡೆಗೆ ದಿಕ್ಕನ್ನು ನೋಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಬೆಂಗಳೂರಿಗೆ ಸಮರ್ಪಕವಾದಂತಹ ನೀರನ್ನು ಹರಿಸತಕ್ಕಂಥ ಜವಾಬ್ದಾರಿ ಇವತ್ತು ಸರ್ಕಾರದ ಮೇಲಿದೆ. ಆದ್ದರಿಂದ ಇವತ್ತು ಸೂಕ್ತವಾದಂತಹ ನಿರ್ಧಾರವನ್ನು ಸರ್ಕಾರ ತೆಗೆದುಕೊಳ್ಳಬೇಕಾಗಿದೆ. ಮಾನ್ಯ ಅಧ್ಯಕ್ಷರೆ ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯಲಿಕ್ಕೆ ಇಚ್ಛೆಪಡುತ್ತೇನೆ. ಇವತ್ತು ತಮಿಳುನಾಡಿನಲ್ಲಿ ಕಾವೇರಿ ಬೇಸಿನ್ ಎಲ್ಲೆಲ್ಲಿ ಹೋಗುತ್ತದೋ, ಆ ಭಾಗದಲ್ಲಿ ಎಲ್ಲಾ ಕಡೆಗೆ ಅಂತರ್ಜಲವನ್ನು ವೃದ್ಧಿ ಮಾಡುವುದಕ್ಕೆ ಅನೇಕ ಟ್ಯಾಂಕುಗಳ ನಿರ್ಮಾಣವಾಗಿದೆ. ಅದೇ ರೀತಿಯಲ್ಲಿ ಕರ್ನಾಟಕದಲ್ಲಿ ನಾವು ಎಲ್ಲೆಲ್ಲಿ ಮಳೆಗಾಲದಲ್ಲಿ ನೀರನ್ನು store ಮಾಡಬಹುದು, ಅದರ ಬಗ್ಗೆ ವಿಶೇಷವಾದಂತಹ ಆಸಕ್ತಿಯನ್ನು ಸರ್ಕಾರ ವಹಿಸಬೇಕಾಗುತ್ತದೆ. ಈಗಾಗಲೇ ನಮಗೆ ಗೊತ್ತಿದೆ. ಕಾವೇರಿಯಲ್ಲಿ ಇಷ್ಟು ಟಿಎಂಸಿ ನೀರಿದೆ, ಕೆ.ಆರ್.ಎಸ್.ನಲ್ಲಿ ಇಷ್ಟು ನೀರಿದೆ ಎಂದು ನಾವು ಅಂದಾಜು ಮಾಡುತ್ತಿದ್ದೇವೆ. ಆದರೆ ಅದರಲ್ಲಿ ಇರತಕ್ಕಂಥ ಹೂಳಿನ ಪ್ರಮಾಣವೆಷ್ಟು ? ಎನ್ನುವುದನ್ನು ನಾವು ಸಂಪೂರ್ಣವಾಗಿ ಇನ್ನೂ ಅಳೆಯಲಿಕ್ಕೆ ಆಗಿಲ್ಲ. ಆದ್ದರಿಂದ, ಇಲ್ಲಿರತಕ್ಕಂಥ ಹೂಳನ್ನು ಮುಂದಿನ ದಿನಗಳಲ್ಲಿ ಯಾವ ರೀತಿ ನಾವು ಎತ್ತಬೇಕು ಎನ್ನುವುದನ್ನೂ ಕೂಡ ನಾವು ಯೋಚನೆ ಮಾಡಬೇಕಾಗುತ್ತದೆ. ತನ್ಮೂಲಕವಾಗಿ ಹೆಚ್ಚಿನ ನೀರನ್ನು ಕಾವೇರಿಯಲ್ಲಿ, ಕೆಆರ್ಎಸ್‌ನಲ್ಲಿ ಸಂಗ್ರಹ ಮಾಡಲಿಕ್ಕೆ ಸಾಧ್ಯವಾಗುತ್ತದೆಯೇ ? ಎನ್ನುವುದನ್ನು ಸರ್ಕಾರ ಗಮನಿಸಬೇಕು. ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು

ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಲು ಈಗಾಗಲೇ ನಿಯೋಗವೊಂದನ್ನು ತೆಗೆದುಕೊಂಡು ಹೋಗಿ ಒತ್ತಾಯವನ್ನು ತರುತ್ತೇವೆಂದು ಹೇಳಿದ್ದಾರೆ, ಅದನ್ನು ಮಾಡುವುದರ ಜೊತೆಗೆ, ಇವತ್ತು Revision Petition ವೊಂದನ್ನು ಹಾಕಲಿಕ್ಕೆ ಆಗುತ್ತದೆಯೇ, ಎನ್ನುವುದನ್ನು ಯೋಚನೆ ಮಾಡಬೇಕು. ಇವತ್ತು ಕರ್ನಾಟಕಕ್ಕೆ ಏನು ಅನ್ಯಾಯವಾಗುತ್ತಿದೆ, ಅದನ್ನು ತಡೆಹಿಡಿಯುವುದರ ಜೊತೆಗೆ, ಒಂದೇ ಒಂದು ಬಾರಿಗೆ ಇದರ ಬಗ್ಗೆ ಸಮಗ್ರವಾದಂತಹ ತೀರ್ಪು ಬರುವಂತಹ ರೀತಿಯಲ್ಲಿ ನೋಡಿಕೊಳ್ಳಬೇಕೆಂದು ತಮ್ಮ ಮುಖಾಂತರವಾಗಿ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಮಂಜು (ಅರಕಲಗೂಡು) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಕಾವೇರಿ ಬಗ್ಗೆ ನೀಡಿದ ಹೇಳಿಕೆಯ ಬಗ್ಗೆ ಈಗಾಗಲೇ ಹಲವಾರು ಜನ ಹಿರಿಯ ಸದಸ್ಯರು ತಮ್ಮ ವಿಚಾರಗಳನ್ನು ಹೇಳಿದ್ದಾರೆ. ಬಹುಶಃ ಈಗ ನಾವು ನಮ್ಮ ಸಮಾಧಾನಕ್ಕೆ ಮತ್ತು ನಮ್ಮ ಕ್ಷೇತ್ರದ ಜನತೆಗೆ ಗೊತ್ತಾಗಲಿ ಎಂದು ಮಾತನಾಡುತ್ತಿದ್ದೇವೆ. ವಸ್ತುಸ್ಥಿತಿಯನ್ನು ನಾವು ಯಾರೂ ಕೂಡ ಅರಿತುಕೊಂಡು ಏನು ಆಗಬೇಕೆಂಬ ಬಗ್ಗೆ ಚಿಂತನೆ ಮಾಡುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ನನ್ನ ಸಲಹೆ ಏನೆಂದರೆ, ತಾವು 200 ವರ್ಷಗಳ ಹಿಂದಿನ ಇತಿಹಾಸವನ್ನು ತಮ್ಮ ಹೇಳಿಕೆಯಲ್ಲಿ ಹೇಳಿಕೊಂಡು ಬಂದಿದ್ದೀರು, ಕಾವೇರಿ ನೀರನ್ನು ಹಿಂದಿನಿಂದಲೂ ನಾವು ಯಾವ ರೀತಿಯಾಗಿ ಕರ್ನಾಟಕ ರಾಜ್ಯಕ್ಕೆ ಉಪಯೋಗವಾಗುವ ರೀತಿಯಲ್ಲಿ ಮೊದಲಿನಿಂದಲೂ ಮಾಡಿಕೊಂಡು ಬರಲಿಲ್ಲ ಎನ್ನುವುದನ್ನು ತಾವು ಮನದಟ್ಟು ಮಾಡಿದ್ದೀರಿ. ಆ ರೀತಿ ಮಾಡಿಕೊಂಡಿರುವವರು ನಾವೇ ಇವತ್ತು ಕಾವೇರಿ ನೀರಿನ ಮುಖಾಂತರ ತಮಿಳುನಾಡಿನ ಮುಖ್ಯಮಂತ್ರಿಗಳು ರಾಜಕೀಯವನ್ನು ಮಾಡುತ್ತಿದ್ದಾರೆಂದರೆ ತಪ್ಪಾಗಲಾರದು. ನಮಗೆ ಇವತ್ತು ನೀರಿಲ್ಲವೆಂದು ಸಂಕಟವಾಗಿದೆ. ಇವತ್ತು ನಮಗೆ ಕುಡಿಯಲು ಮತ್ತು ಬೆಳೆದು ನಿಂತಿರತಕ್ಕಂಥ ಬೆಳೆಗೆ ನೀರು ಬೇಕಾಗಿದೆ. ಅವರು 50 ಕ್ಯೂಸೆಕ್ಸ್ ವಾಟರ್ ಅನ್ನು ಕೇಳಿರತಕ್ಕಂಥದ್ದು, ಕೋರ್ಟ್ ಆದೇಶ ಮಾಡಿರತಕ್ಕಂಥದ್ದು ಮುಂದಿನ ಸಾಂಬಾ ಬೆಳೆಗೆ, ಬಹುಶಃ ಕೋರ್ಟಿಗೆ ನಮ್ಮವರು ಎಷ್ಟೇ ವಾದ ಮಾಡಿ, ಏನೇ ಹೇಳಿದರೂ ಕೂಡ ಪ್ರಯೋಜನವಾಗೆಲ್ಲ. ಈಗಾಗಲೇ ಮಾನ್ಯ ಪುಟ್ಟೇಗೌಡರು ಹೇಳಿದ್ದು, ಅವರು ನಿಜವಾಗಿಯೂ ಬಹಳ ಒಳ್ಳೆಯ ಸಲಹೆಯೊಂದನ್ನೂ ಸಹ ನಮಗೆ ಕೊಟ್ಟರು. ಬಹುಶಃ ಇದು never ending subject ಇದು ತೀರ್ಮಾನವಾಗಬೇಕಾದರೆ ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದ ಜೊತೆಗೆ ಮಾತನಾಡಿ, ತಮಿಳುನಾಡಿನ ಸರ್ಕಾರದ ಜೊತೆಗೆ ಮಾತನಾಡಿ ನಮ್ಮ ಕಾವೇರಿ ಮತ್ತು ಹೇಮಾವತಿ ಹೊಳೆಗಳಿಗೆ ಚೆಕ್‌ಡ್ಯಾಂಗಳನ್ನು ನಾವು ನಿರ್ಮಾಣ ಮಾಡಬೇಕು. ಈ ಬಗ್ಗೆ

ಅವರ ಜೊತೆಗೆ ಮಾತನಾಡಬೇಕು. ನಮಗೆ ಹೇಳಲು ಬೇಜಾರಾಗುತ್ತದೆ. ಅವರು ನಮ್ಮ ಕೆರೆಗಳ ಮತ್ತು ನಮ್ಮ ಡ್ಯಾಮಿನ ನೀರಿನ ಹೂಳನ್ನು ತೆಗೆಯುವುದಕ್ಕೆ ಅಡಚಣೆ ಮಾಡಿ, ಕೋರ್ಟಿನಿಂದ ಆರ್ಡರ್ ಮಾಡಿ ನಿಲ್ಲಿಸಿದಂತಹ ದಿನಗಳನ್ನೂ ಕೂಡ ನಾವು ನೋಡಿದ್ದೇವೆ. ಇದು permanent ಪರಿಹಾರ ಆಗಬೇಕು ಎನ್ನುವುದಾದರೆ, ಎಲ್ಲಾದರೂ ಒಂದು ಕಡೆ storage ಅನ್ನು, ಅದರ Place ಅನ್ನು ಹುಡುಕಿ ನೀವು ಮಾಡುವಂತಹ ಕೆಲಸ ಮಾಡಿದರೆ ಮಾತ್ರ ಇದು ಪರಿಹಾರವಾಗಲಿಕ್ಕೆ ಸಾಧ್ಯವಾಗುತ್ತದೆಯೇ ಹೊರತು, ಇಲ್ಲದಿದ್ದರೆ ಯಾವುದೇ ಕಾರಣದಿಂದಲೂ ಇದು ಪರಿಹಾರವಾಗುವುದಿಲ್ಲ. ಪ್ರತಿ ವರ್ಷ ಸುಪ್ರೀಂಕೋರ್ಟ್‌ನವರು ಆರ್ಡರ್ ಮಾಡುತ್ತಲೇ ಇರುತ್ತಾರೆ. ಇದು ಹೇಗೆ ಎಂದರೆ, ಮನೆಯನ್ನು ಬಾಡಿಗೆಗೆ ತೆಗೆದುಕೊಂಡು, ಒಂದು ತಿಂಗಳು ಮನೆಯಲ್ಲಿ ಇರಲಿಲ್ಲ, ಅದಕ್ಕಾಗಿ ನಾನು ಬಾಡಿಗೆಯನ್ನು ಕೊಡುವುದಿಲ್ಲವೆಂದು ಹೇಳಿದಂತೆ ಈಗ ಆಗುತ್ತಿದೆ. Already ಇಷ್ಟು ಟಿಎಂಸಿ ವಾಟರ್ ಅನ್ನು ಬಿಡಬೇಕೆಂದು ಕೋರ್ಟ್ ಆರ್ಡರ್ ಮಾಡಿಬಿಟ್ಟಿದೆ. ಅವರು ಬ್ಯಾಕ್‌ಲಾಗ್ ಬೇರೆ ಕೇಳುತ್ತಿದ್ದಾರೆ. ಇವತ್ತು ಪ್ರತಿ ದಿನಕ್ಕೆ 10 ಸಾವಿರ ಕ್ಯೂಸೆಕ್ಸ್ ವಾಟರ್ ನೀರನ್ನು ಬಿಡಬೇಕೆಂದು ಮಾಡಿರತಕ್ಕಂಥ ಆರ್ಡರ್ ಏನಿದೆ, ನಿಜವಾಗಿಯೂ ಅದು ನಮ್ಮ ಅದೃಷ್ಟ. Atleast, 25 ಸಾವಿರ ಕ್ಯೂಸೆಕ್ಸೋ ಅಥವಾ 50 ಸಾವಿರ ಕ್ಯೂಸೆಕ್ಸೋ ನೀರನ್ನು ಪ್ರತಿದಿನ ಬಿಡಿ ಎಂದು ಅವರು ಹೇಳಿದ್ದರೆ ಕಷ್ಟವಾಗುತ್ತಿತ್ತು. ಈಗಾಗಲೇ ಸರ್ಕಾರದ ಗಮನಕ್ಕೂ ಕೂಡ ಬಂದಿದೆ. 3–4 ಕ್ಯೂಸೆಕ್ಸನಷ್ಟು ನೀರು ಹೋಗುತ್ತಿದೆ, ಅದರಲ್ಲಿ ಯಾವುದೇ ಸಂಶಯವಿಲ್ಲ.

ಇದಕ್ಕೆ ಪರಿಹಾರ ಏನೆಂದರೆ, ಎಲ್ಲಾದರೂ ಒಂದು ಕಡೆ storage ಅನ್ನು ಕಟ್ಟಿ, ನಮಗೆ ಅದರಿಂದ ಬರತಕ್ಕಂಥ ನೀರಿನಲ್ಲಿ power generation ಅನ್ನಾದರೂ ಮಾಡಿಕೊಳ್ಳತಕ್ಕಂಥ ವ್ಯವಸ್ಥೆಯಾಗಬೇಕು. ಆಗ ಮಾತ್ರ ಪರಿಹಾರವಾಗಬಹುದೇ ಹೊರತು, ಇಲ್ಲಿ ನಾವು ನಿಮಗೆ ಎಷ್ಟೇ ಹೇಳಿದರೂ ಕೂಡ, ಸುಪ್ರೀಂಕೋರ್ಟಿನ ಆರ್ಡರ್ ಅನ್ನು ನೀವು ಉಲ್ಲಂಘನೆ ಮಾಡುವುದಿಲ್ಲ. ನೀವು ನೀರನ್ನು ಬಿಟ್ಟೇ ಬಿಡುತ್ತೀರಿ. ಇದಕ್ಕೆ ಪರಿಹಾರಕ್ಕೆ all party leader ಅನ್ನು ನೀವು ದೆಹಲಿಗೆ ಕರೆದುಕೊಂಡು ಹೋಗಿ, ಕೇಂದ್ರ ಸರ್ಕಾರದ ಮುಂದೆ ಈ ಬಗ್ಗೆ ನಿವೇದನೆ ಮಾಡುವುದು ಬಹಳ ಒಳ್ಳೆಯದು ಎಂದು ನನ್ನ ಸಲಹೆ ನೀಡಿ, ನನ್ನ ಮಾತುಗಳನ್ನು ಮುಗಿಸುತ್ತೇನೆ. ಧನ್ಯವಾದಗಳು.

(ಗೊಂದಲ)

ಅಧ್ಯಕ್ಷರು:– ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಗಳು ಮಾತನಾಡಲು ಎದ್ದು ನಿಂತಿದ್ದಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿ):- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಎಲ್ಲಾ ಶಾಸಕರು ಇವತ್ತು ನಾನು ಈ ಒಂದು ಕಾವೇರಿ ಜಲವಿವಾದಕ್ಕೆ ಸಂಬಂಧಿಸಿದಂತೆ ಏನೊಂದು ಹೇಳಿಕೆಯನ್ನು ಇಲ್ಲಿ ಕೊಟ್ಟಿದ್ದೇನೋ, ಅದರ ಮೇಲೆ ಸಾಕಷ್ಟು ವಿಚಾರಗಳನ್ನು ಮತ್ತು ಇನ್ನಿತರ ಹಲವಾರು ಭಾವನೆಗಳನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ. ಸುಪ್ರೀಂ ಕೋರ್ಟಿನ ಒಂದು ಆಜ್ಞೆಯ ಹಿನ್ನೆಲೆಯಲ್ಲಿ ಏನೇನು ಬೆಳವಣಿಗೆಗಳಾಗಿದೆ ಎನ್ನುವುದನ್ನು ನಾನು ಸದನದ ಗಮನಕ್ಕೆ ತೆಗೆದುಕೊಂಡು ಬಂದಿದ್ದೇನೆ. ಇಲ್ಲಿ ನಮ್ಮ ಶಾಸಕರು ತಮ್ಮ ಎಲ್ಲಾ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ಇಲ್ಲಿಯ ಪರಿಸ್ಥಿತಿ, ರೈತರ ಬವಣೆ, standing crop,ಅದಕ್ಕೆ ಬೇಕಾದಂತಹ ನೀರು, ಕುಡಿಯುವ ನೀರಿಗೆ ಬೇಕಾದಂತಹ quantity, ನಮ್ಮ ಜಲಾಶಯಗಳಲ್ಲಿ ಇರುವಂತಹ ನೀರಿನ ಸಂಗ್ರಹದ ಬಗ್ಗೆ ಎಲ್ಲವನ್ನೂ ಹೇಳಿದ್ದಾರೆ. ಇವೆಲ್ಲಾ facts ಹಿಂದೆ ಕೇಂದ್ರದ ಟೀಮ್ ಬಂದಾಗಲೂ ನಾವು ಅವರಿಗೆ ಇದೆಲ್ಲವನ್ನೂ ಕೂಡ ಹೇಳಿದ್ದೇವೆ. ಎಲ್ಲಾ ಮಾಹಿತಿಯನ್ನು ಪೂರ್ತಿಯಾಗಿ ಅವರಿಗೆ ಕೊಟ್ಟಿದ್ದೆವು. ಕೇಂದ್ರದಿಂದ ಬಂದತಹ ಟೀಮ್‌ನವರೂ ಸಹಿತ ತಮ್ಮ ರಿಪೋರ್ಟ್‌ನಲ್ಲಿ ಬಹಳಷ್ಟು details ಆಗಿ ಈ ಒಂದು ವಸ್ತುಸ್ಥಿತಿಯನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಇವತ್ತು ಅದು ದಾಖಲೆಯಲ್ಲಿ ಇದೆ. ಯಾವ್ಯಾವಾಗ CMC ಸಭೆಗಳು ನಡೆದವೋ, ಆ CMC ಸಭೆಗಳಲ್ಲಿ ನಮ್ಮ Chief Secretary ಯವರು ಮತ್ತು ನಮ್ಮ ಅಧಿಕಾರಿಗಳು ಅಲ್ಲಿಗೆ ಹೋಗಿ ಎಲ್ಲಾ ರೀತಿಯಾದಂತಹ ವಸ್ತುಸ್ಥಿತಿಯನ್ನು ಹೇಳಿದ್ದಾರೆ. ಅದಾದ ಮೇಲೆ ಅಲ್ಲಿ ಇರುವಂತಹ observations ಏನಾಗಿದೆ ಅದರ ಬಗ್ಗೆ ಇವತ್ತು ನಮ್ಮ ಮುಂದೆ ದಾಖಲೆಗಳಲ್ಲಿದೆ. ಈ CMC ಯಲ್ಲಿ ಆದಂತಹ ಒಂದು ವರದಿ, ಅವರು ಅಂತಿಮವಾಗಿ ಕೊಟ್ಟಂತಹ ತೀರ್ಪು, ಇವೆಲ್ಲವನ್ನೂ ಸಹಿತ ಸುಪ್ರೀಂಕೋರ್ಟಿನ ಮುಂದೆ ನಮ್ಮ advocates ಹೇಳಿದ್ದಾರೆ. ಇದೆಲ್ಲದರ ಬಗ್ಗೆಯೂ ತಮ್ಮ ವಾದವನ್ನು ಮಂಡನೆ ಮಾಡಿದ್ದಾರೆ. ಇವತ್ತು ತಮಿಳುನಾಡಿನ ವಾದ ಏನಿತ್ತು, ಅದಕ್ಕೆ counter ಆಗಿ ನಮ್ಮ ವಕೀಲರು ಏನೊಂದು ವಾದವನ್ನು ಮಾಡಬೇಕಾಗಿತ್ತೋ, ಎಲ್ಲವನ್ನೂ ಸವಿಸ್ತಾರವಾಗಿ ಹೇಳಿದ್ದಾರೆ. ಅಷ್ಟು ಆದ ಮೇಲೂ ಸಹಿತ ಈ ತೀರ್ಪು ಬಂದಿದೆ. ಎಲ್ಲಾ ನಮ್ಮ ಸಂಕಷ್ಟವನ್ನು, ನಮ್ಮ ಪರಿಸ್ಥಿತಿಯನ್ನು, ನಮ್ಮ ಜನರ ಬವಣೆಯನ್ನು ಆ ಭಾಗದಲ್ಲಿ ಇರುವಂತಹ ಸ್ಥಿತಿಗತಿ ಎಲ್ಲವನ್ನೂ ಸಹಿತ in-detail ಆಗಿ ನಾವು ಸುಪ್ರೀಂಕೋರ್ಟಿನ ಮುಂದೆ ವಾದವನ್ನು ಮಂಡಿಸಿದ್ದೇವೆ. ಇಷ್ಟಾದ ಮೇಲೂ ಇವತ್ತು ಈ ತೀರ್ಪು ಬಂದಿದೆ. ಇದಕ್ಕೇನಾದರೂ

ಒಂದು ಶಾಶ್ವತವಾದಂತಹ ಪರಿಹಾರ ಹುಡುಕಬೇಕು ಎನ್ನುವಂತಹ ದಿಕ್ಕಿನಲ್ಲಿ ಚಿಂತಿಸಬೇಕು ಎಂದು ನಮ್ಮ ಬಹಳಷ್ಟು ಶಾಸಕ ಮಿತ್ರರು ಹೇಳಿದರು. ಏಕೆಂದರೆ, ಇದಕ್ಕೆ ನೂರಾರು ವರ್ಷಗಳ ಇತಿಹಾಸವಿದೆ. ಕಾವೇರಿ ಜಲವಿವಾದ ಇವತ್ತು ಅಥವಾ ನಿನ್ನೆ ಹುಟ್ಟಿರುವಂತಾದ್ದಲ್ಲ. ನೂರಾರು ವರ್ಷಗಳ ಇತಿಹಾಸ ಇದಕ್ಕಿದೆ. ಯಾರ್ಯಾರ ಕಾಲದಲ್ಲಿ ಏನೇನಾಯಿತು ಎನ್ನುವುದನ್ನು ಡೀಟೈಲ್ಸಾಗಿ ನಾನು ಇಲ್ಲಿ ಹೇಳೀದ್ದೇನೆ. ಯಾವ್ಯಾವ ಸಂದರ್ಭದಲ್ಲಿ ಸುಪ್ರೀಂಕೋರ್ಟಿನವರು interim order ಮಾಡಿದರು, ಆಜ್ಞೆಯನ್ನು ಮಾಡಿದರು, ನೀರು ಬಿಡಬೇಕೆಂದು ಹೇಳಿದರು, ಆ ಸಂದರ್ಭದಲ್ಲಿ ನಮ್ಮ ಕರ್ನಾಟಕ ಸರ್ಕಾರ ಏನೊಂದು ನಿರ್ಣಯವನ್ನು ಕೈಗೊಂಡಿತು? ಅದರ ಮೇಲೆ ಯಾವ ರೀತಿಯಾಗಿ ನಾವು comply ಮಾಡಿದ್ದೇವೆ ಎಲ್ಲಾ details ಅನ್ನು ನಾನು ಕೊಟ್ಟಿದ್ದೇನೆ. ಇದು ಸದನದ ಮುಂದೆ ನಾನು ಇಟ್ಟಿದ್ದೇನೆ. ನಮ್ಮ ರಾಜ್ಯದ ನೆಲ ಜಲದ ರಕ್ಷಣೆ ಮಾಡುವುದು ನಮ್ಮ ಕರ್ತವ್ಯ. ಅದನ್ನು ಮಾಡುವುದು ನಾವು ಮಾಡುತ್ತೇವೆ. ಮಾಡುವಂತಹ ಸಂದರ್ಭದಲ್ಲಿ ಈ ರೀತಿಯ ಕಾನೂನು ವ್ಯವಸ್ಥೆ ಏನಿದೆ ಆ ಕಾನೂನು ವ್ಯವಸ್ಥೆಯಲ್ಲಿ ಸಹಿತ ಯಾವ ರೀತಿ ಹೋರಾಟ ಮಾಡಬಹುದು, ಹೋರಾಟ ಮಾಡಿ ನಮ್ಮ ನೆಲ ಜಲದ ರಕ್ಷಣೆ ಮಾಡಬೇಕು. ಆ ಪ್ರಾಮಾಣಿಕ ಪ್ರಯತ್ನ ನಾವು ಇಲ್ಲಿಯವರೆಗೆ ಮಾಡಿಕೊಂಡು ಬಂದಿದ್ದೇವೆ. ಕಳೆದ ಎರಡು ತಿಂಗಳುಗಳಿಂದ ಪ್ರತಿ ಹಂತದಲ್ಲಿ ನಮ್ಮ ಸರ್ಕಾರ ಇದರ ಬಗ್ಗೆ ಕಾನೂನು ಹೋರಾಟ ಮಾಡುವುದಕ್ಕೆ ಎಲ್ಲಾ ರೀತಿಯ ಪ್ರಾಮಾಣಿಕ ಪ್ರಯತ್ನ ನಾವು ಮಾಡಿಕೊಂಡು ಬಂದಿದ್ದೇವೆ. ಸಣ್ಣ ಪುಟ್ಟ ತೊಂದರೆ ಆಗದೆ ಇರುವ ರೀತಿಯಲ್ಲಿ ತಪ್ಪಾಗದ ರೀತಿಯಲ್ಲಿ ಕೆಲಸಗಳನ್ನು ಮಾಡಿದ್ದೇವೆ. ಹೀಗಾಗಿ ಇಷ್ಟು ಆದರೂ ಸಹ ಸುಪ್ರೀಂ ಕೋರ್ಟ್ ಆಜ್ಞೆ ಬಂದಿದೆ. ಈ ಆಜ್ಞೆ ಬಂದ ಮೇಲೆಯೂ ಸಹ, ನಿನ್ನೆ ಸಹ ನಮ್ಮ ಶಾಸಕರು ಹಲವಾರು ಭಾವನೆಗಳನ್ನು ವ್ಯಕ್ತಪಡಿಸಿದರು. ನಾವು Advocate ಜೊತೆ ಚರ್ಚೆ ಮಾಡುತ್ತಿದ್ದೇವೆ. ಪ್ರತಿ ಪಕ್ಷದ ನಾಯಕರು ಎಲ್ಲಾ ಹಿರಿಯರ ಜೊತೆ ಚರ್ಚೆ ಮಾಡುತ್ತಿದ್ದೇವೆ. ಇವತ್ತು ಸಹಿತ ಹಲವಾರು ಅಭಿಪ್ರಾಯಗಳನ್ನು ಕೊಟ್ಟರು. ಬೇರೆ ಬೇರೆ ದಾರಿಗಳನ್ನು ಹುಡುಕಬೇಕು ಹೇಗೆ ಏನು ಎನ್ನುವ ಬಗ್ಗೆ ಹಲವಾರು ಸಲಹೆಗಳನ್ನು ಕೊಟಿದ್ದಾರೆ. ಅದನ್ನೂ ಸಹಿತ ನಮ್ಮ Advocate ರವರ ಜೊತೆ ಚರ್ಚೆ ಮಾಡುತ್ತೇವೆ. ಅದರ ಜೊತೆಗೆ ಇನ್ನೂ ರಾಜಕೀಯವಾಗಿ ಯಾವ ರೀತಿ ಒತ್ತಡ ಮಾಡಲಿಕ್ಕೆ ಸಾಧ್ಯವಿದೆ ಎನ್ನುವುದನ್ನು ನಾಳೆ ನಾನು ಮತ್ತು ನಮ್ಮ ನೀರಾವರಿ ಸಚಿವರು ಬೆಳಿಗ್ಗೆ ದೆಹಲಿಗೆ ಹೋಗಿ ಅಲ್ಲಿರುವಂತಹ ಆ ಭಾಗದ ಲೋಕಸಭಾ ಸದಸ್ಯರು ಮತ್ತು ಕೇಂದ್ರದ ಸಚಿವರು ಎಲ್ಲರನ್ನು ಸಭೆಗೆ ಕರೆದಿದ್ದೇನೆ. ಅವರ ಜೊತೆ ಸಮಾಲೋಚನೆ

ಮಾಡಿಕೊಂಡು ಸನ್ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿ ಆಗುವುದಕ್ಕೆ ಕಾಲಾವಕಾಶವನ್ನು ಕೇಳಿದ್ದೇವೆ. ಕೇಂದ್ರದ ನಮ್ಮ ನೀರಾವರಿ ಸಚಿವರನ್ನು ಭೇಟಿ ಆಗುತ್ತೇವೆ. ಅಲ್ಲಿ ಯಾವ ವಿಷಯಗಳನ್ನು ಮಂಡನೆ ಮಾಡಬೇಕೆಂದು ನಾವು ಪ್ರಯತ್ನ ಮಾಡುತ್ತಿದ್ದೇವೆ. ಅದರ ಜೊತೆ ನಮ್ಮ Advocate ಜೊತೆ ಸಮಾಲೋಚನೆ ಮಾಡಿ ಮಾಡುತ್ತೇವೆ. ಈ ರೀತಿಯ ಪ್ರೊಸೆಸ್ ನಾವು ಮಾಡುತ್ತಿದ್ದೇವೆ. ಹಾಗಾಗಿ ಕಾವೇರಿ ಜಲಾನಯನದ ಪ್ರದೇಶದಲ್ಲಿರತಕ್ಕಂತಹ ನಮ್ಮ ರೈತ ಬಂಧುಗಳಿಗೆ ಹಾಗೂ ಅಲ್ಲಿರತಕ್ಕಂತಹ ಜನರ ಭಾವನೆಗಳಿಗೆ ಸ್ಪಂದನೆ ಮಾಡುವಂತಹ ಕೆಲಸ ಮತ್ತು ನೆಲ ಜಲ ರಕ್ಷಣೆ ಮಾಡುವ ಪ್ರಯತ್ನ ನಾವು ಎಲ್ಲಾ ರೀತಿಯಿಂದ ಮಾಡುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಶಾಂತತೆ ಕಾಪಾಡಿಕೊಳ್ಳುವ ವಿನಂತಿ ನಾನು ಮಾಡುತ್ತಿದ್ದೇನೆ. ಕಾನೂನು ರೀತಿಯಲ್ಲಿ ಹೋರಾಟ ಮಾಡುವುದು ಯಾವ ಪ್ರಯತ್ನ ಮಾಡಬೇಕು ಅವೆಲ್ಲಾ ಮಾಡುತ್ತಿದ್ದೇವೆ. ನಾಳೆ ಮುಂದಿನ ಪ್ರಯತ್ನಕ್ಕೆ ನಾವು ಹೋಗುತ್ತಿದ್ದೇವೆ. ಎಲ್ಲಾ ವಿವರಗಳನ್ನು ಕೊಟ್ಟಿದ್ದೇನೆ. ಇನ್ನು ಏನು ಪ್ರಯತ್ನ ಮಾಡಬೇಕು, ಇನ್ನೂ ಏನು ಕ್ರಮ ಕೈಗೊಳ್ಳಬೇಕು ಎನ್ನುವಂಥದ್ದನ್ನು ನಾವು ಮುಂದುವರೆಸುತ್ತಿದ್ದೇವೆ. ಆ ದೃಷ್ಟಿಯಿಂದ ನಮ್ಮ ವಿರೋಧ ಪಕ್ಷದ ನಾಯಕರು ಹಾಗೂ ಜೆ.ಡಿ.ಎಸ್ ಶಾಸಕಾಂಗ ಪಕ್ಷದ ನಾಯಕರು ಆದ ಮಾನ್ಯ ರೇವಣ್ಣರವರು ಮತ್ತು ಇನ್ನಿತರ ಎಲ್ಲಾ ಶಾಸಕರು, particularly ಆ ಭಾಗದಿಂದ ಬಂದಂತಹ ಶಾಸಕರು ಅಲ್ಲಿದ್ದಂತಹ ಪರಿಸ್ಥಿತಿಯ ವಿವರಗಳನ್ನು ಕೊಟ್ಟಿದ್ದಾರೆ. ಅವೆಲ್ಲವನ್ನೂ ನಾವು ಗಮನದಲ್ಲಿಟ್ಟುಕೊಂಡು ಮುಂದೆ ಯಾವ ರೀತಿ ಕ್ರಮ ಕೈಗೊಳ್ಳಬೇಕೆಂದು ನಿರ್ಣಯ ಕೈಗೊಳ್ಳುತ್ತೇವೆ.

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ಅವರು ಏನು ಕ್ರಮ ತೆಗೆದುಕೊಂಡಿದ್ದಾರೆ ಇವರು CMC ಮುಂದೆ CRE ಮುಂದೆ ಸುಪ್ರೀಂ ಕೋರ್ಟ್ ಮುಂದೆ ಏನು ಮಂಡಿಸಿದ್ದಾರೆ ಎನ್ನತಕ್ಕಂಥದ್ದು, ಇದರಿಂದ ಜನಗಳಿಗೆ ಸಮಾಧಾನ ಆಗುವುದಿಲ್ಲ. ನಮ್ಮ ಹತ್ತಿರ ನೀರು ಇಲ್ಲ. ನೀರು ಕೊಡಬಾರದು ಎಂದು ಜನರ ಇಚ್ಛೆ, ಮಾನ್ಯ ಮುಖ್ಯಮಂತ್ರಿಗಳು ಬಹಳ ಸುಧೀರ್ಘವಾಗಿ ಹೇಳಿದರು. ಅವರ ರಿಪ್ಲೇಯಲ್ಲಿ ನೀರು ಬಿಡುತ್ತೇವೆ ಅಥವಾ ಬಿಡುವುದಿಲ್ಲವೆಂದು ಏನೂ ಹೇಳಲಿಲ್ಲ. ಅವರ ಮಾತು ಮತ್ತು ಅವರ statement ನೋಡಿದರೆ ನಾಳೆ ಭೇಟಿ ಆಗಲಿದ್ದೇವೆ, ಈ ಮಧ್ಯೆ ನಮ್ಮ ಹಿರಿಯ ನ್ಯಾಯವಾದಿಗಳು ಹಾಗೂ ಕಾನೂನು ತಜ್ಞರ ಜೊತೆ ಚರ್ಚೆ ಮಾಡಿ ಮುಂದಿನ ಕ್ರಮಗಳನ್ನು ಕೈಗೊಳ್ಳುತ್ತೇವೆಂದು ಹೇಳಿದರು. ನೀರು ಬಿಡುತ್ತಾರೆಂದು ಭಾಸವಾಗುತ್ತಿದೆ. ನೀರು ಬಿಡುವುದಕ್ಕೆ ಇವರು ತಯಾರಾಗಿದ್ದಾರೆ. ಅದು ಬಿಟ್ಟರೆ ನಮ್ಮ ಭಾಗದ ರೈತರು ಯಾರೂ ಕೂಡ ಉಳಿಯುವುದಿಲ್ಲ.

ಅಲ್ಲಿ ಯಾವ ಬೆಳೆಯೂ ಉಳಿಯುವುದಿಲ್ಲ. ರೈತರು ಬಹಳ ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳುತ್ತಾರೆ. ಬೆಂಗಳೂರು ನಗರ, ಮೈಸೂರು ನಗರ, ಮಂಡ್ಯ ಹಾಸನ ಹಾಗೂ ಇನ್ನಿತರೆ ಬೇರೆ ಬೇರೆ ನಗರಗಳಿಗೆ ಕುಡಿಯುವುದಕ್ಕೆ ನೀರು ಇಲ್ಲದ ಹಾಗಾಗುತ್ತದೆ. ಬಹಳ ತೊಂದರೆಗೆ ಸಿಕ್ಕಿ ಹಾಕಿಕೊಳ್ಳುತ್ತೇವೆ. ಆದ್ದರಿಂದ ಇವತ್ತು ನಾವು ಐದು ದಿನ 10,000 ಕ್ಯೂಸೆಕ್ಸ್ ನೀರು ಬಿಡುತ್ತೇವೆಂದರೆ, ಸುಮಾರು ಐದು ಟಿಎಮ್‌ಸಿ. ನೀರು ಹೋಗಿ ಬಿಡುತ್ತದೆ. ಎಲ್ಲಾ ನಾಲ್ಕು ಜಲಾಶಯಗಳಿಂದ ಇರುವುದೇ 35 ಟಿಎಂಸಿ ನೀರು ನಮಗೆ ಇನ್ನು ಯಾವ ಮಳೆಯೂ ಬರುವುದಿಲ್ಲ. ಇನ್ನು ಮಳೆ ಬರುವುದು ಮೇ ತಿಂಗಳಲ್ಲಿಯೇ. ಅಲ್ಲಿಯವರೆಗೆ ಯವ ಮಳೆಯೂ ಇಲ್ಲ. ನಿಮ್ಮಲ್ಲಿಯೂ ಮಳೆ ಬರುವುದಿಲ್ಲ. KRS ಮಳೆ ನೀರು ಬರುವುದಿಲ್ಲ. ಹೇಮಾವತಿ, ಹಾರಂಗಿ ಹಾಗೂ ಕಬಿನಿ ಜಲಾಶಯಗಳಿಗೂ ನೀರು ಬರುವುದಿಲ್ಲ. ಅಲ್ಲಿ ನೀರು ಇದೆ, ಅವರಿಗೆ ನೀರು ಬೇಕಾಗಿಲ್ಲ. ಅವರಿಗೆ ಇನ್ನೂ ಮಳೆ ಬರುತ್ತದೆ. ಇನ್ನೂ ಎರಡು–ಮೂರು ತಿಂಗಳವರೆಗೆ ಅವರಿಗೆ ಮಳೆ ಬರುತ್ತದೆ. ನಮಗೆ ಆ ಮಳೆಗಳು ಇಲ್ಲ. ಇಷ್ಟೆಲ್ಲಾ ಇದ್ದರೂ ಕೂಡ ಕುಮಾರಿ ಜಯಲಲಿತಾರವರು ನಮ್ಮ ರಾಜ್ಯದ ಮೇಲೆ ಏಕೆ ಈ ತರಹ ಕೆಂಗಣ್ಣು ಮತ್ತು ವಕ್ರದೃಷ್ಟಿ ಬೀರಿದ್ದಾರೆಂದು ಗೊತ್ತಿಲ್ಲ. ಕರುಣಾನಿಧಿಯವರು ಇದ್ದಾಗ ಇಷ್ಟೊಂದು ಸಮಸ್ಯೆಗಳು ಉದ್ಭವವಾಗುತ್ತಿರಲಿಲ್ಲ. ಅವರು ಸ್ವಲ್ಪ ರೀಸನಬಲ್ ಆಗಿರುತ್ತಿದ್ದರು. ಈ ಅಮ್ಮ ಬಹಳ most un reasonable lady, ಬಹುಶಃ ಮದುವೆ ಆಗದೇ ಇರುವುದೇ ಕಾರಣವೇನೋ ಎಂದು ನಾನು ಅಂದುಕೊಂಡಿದ್ದೇನೆ. She is most unreasonable women ನಾನು ಇದನ್ನು ಬೇಕೆಂದು ಹೇಳುತ್ತಿಲ್ಲ. ಯಾವಾಗಲೂ ಅವರು ಅಧಿಕಾರದಲ್ಲಿ ಇದ್ದಾಗ ನಮಗೆ ಇದೇ ಸಮಸ್ಯೆಗಳು. ಅವರಿಗೆ under ground water ಇದೆ, ಮಳೆ ಬರುತ್ತದೆ. ಮೆಟ್ಟೂರು ಡ್ಯಾಂನಲ್ಲಿ 15 ಟಿಎಮ್‌ಸಿ ನೀರಿದೆ, ತತ್‌ಕ್ಷಣಕ್ಕೆ ಅವರಿಗೆ ಏನೂ ತೊಂದರೆ ಇಲ್ಲ. ನಾವು ತೊಂದರೆಯಲ್ಲಿ ಸಿಕ್ಕಿ ಹಾಕಿಕೊಂಡಿದ್ದೇವೆ. ಇದನ್ನು ಅವರು ಅರ್ಥ ಮಾಡಿಕೊಳ್ಳಬೇಕಾಗಿತ್ತು. ಈ ಭಾಗದ ರೈತರು ಬಹಳ ಅನ್ಯಾಯಕ್ಕೆ ಒಳಗಾಗುತ್ತಾರೆ. ಬೆಳೆ ನಷ್ಟವಾಗುತ್ತದೆ. ಎರಡು ವರ್ಷಗಳಿಂದ ಬರಗಾಲ ಇದೆ, ಮುಂಗಾರು ಬೆಳೆ ಎಲ್ಲಾ ಹೋಯಿತು, ಹಿಂಗಾರು ಬೆಳೆಯೂ ಒಂದಷ್ಟು ಬರುವುದು ಹೋಗಿಬಿಟ್ಟರೆ ಅವರು ಎಲ್ಲಿ ಹೋಗಬೇಕು? ರೈತರೆಲ್ಲರೂ ಕೂಲಿ ಹುಡುಕಿಕೊಂಡು ಊರು ಬಿಟ್ಟು ಗುಳೆ ಹೊಗಬೇಕಾಗುತ್ತದೆ. ಇಂತಹ ಕೆಟ್ಟ ಪರಿಸ್ಥಿತಿ ನಿರ್ಮಾಣವಾಗುತ್ತದೆ. ನಾವು ಆ ಭಾಗದ ಜನರ ಪ್ರತಿನಿಧಿಗಳಾಗಿ ಅವರಿಗೆ ಸಾಂತ್ವಾನ ಹೇಳುವುದು ಬಹಳ ಕಷ್ಟ. ಮಾನ್ಯ ಮುಖ್ಯಮಂತ್ರಿಗಳು ಧೈರ್ಯ ತೆಗೆದುಕೊಂಡು ಸ್ಪಷ್ಟವಾಗಿ ನೀರು ಬಿಡುವುದಿಲ್ಲವೆಂದು ಹೇಳಬೇಕು. ಇಲ್ಲದೇ ಹೋದರೆ ಅವರ ಈ ಹೇಳಿಕೆಯಲ್ಲಿ ಏನೂ ಇಲ್ಲ. 1892ನೇ

ಅಗ್ರಿಮೆಂಟ್, 1924ನೇ ಅಗ್ರಿಮೆಂಟ್ ಅಲ್ಲಿಂದ ಏನೇನಾಯಿತು, ಟ್ರಿಬ್ಯುನಲ್ ಏನು ಮಾಡಿತು, ಇಂಟರಿಮ್ ಆರ್ಡರ್, ಫೈನಲ್ ಅವಾರ್ಡ್, ಈಗ ಸುಪ್ರೀಂ ಕೋರ್ಟಿನ ಮುಂದೆ ಕೇಸ್ ಇರುವುದು, ಈ ತರಹ ಹೇಳಿಕೊಂಡು ಬಂದರೆ ಅದರಿಂದ ಅವರಿಗೆ ನೀರು ಸಿಕ್ಕ ಹಾಗಾಗುವುದಿಲ್ಲ. ನಮ್ಮಲ್ಲಿ ನೀರು ಇಲ್ಲದೆ ಇರುವುದರಿಂದ ಇವರ ಹೇಳಿಕೆ ನಮಗೆ ಏನೇನು ತೃಪ್ತಿ ತಂದಿಲ್ಲ, ಇವರ ಹೇಳಿಕೆ ನೋಡಿದರೆ ನೀಡು ಬಿಡುವುದಕ್ಕೆ ತಯಾರಾಗಿರುವ ಹಾಗೆ ಕಾಣುತ್ತದೆ. ಸುಪ್ರೀಂಕೋರ್ಟಿನ ಆದೇಶವನ್ನು ಪಾಲನೆ ಮಾಡುವುದಕ್ಕೆ ಇವರು ಹೊರಟಿದ್ದಾರೆ. ರೈತರ ಪರವಾಗಿ ನಾವು ನಿಲ್ಲಬೇಕಾಗುತ್ತದೆ. ಇದನ್ನು ಪ್ರತಿಭಟನೆ ಮಾಡಿ ಧರಣಿ ಮಾಡುವುದಕ್ಕೆ ಪ್ರಾರಂಭ ಮಾಡುತ್ತೇವೆ.

(ಕಾಂಗ್ರೆಸ್ ಹಾಗೂ ಜೆಡಿಎಸ್ ಶಾಸಕಾಂಗ ಪಕ್ಷದ ಶಾಸಕರು ಬಾವಿಗೆ ಬಂದು ಧರಣಿ ಮಾಡಲು ಪ್ರಾರಂಭಿಸಿದರು)

ಶ್ರೀ ಹೆಚ್.ಡಿ. ರೇವಣ್ಣ:– (ಹೊಳೆನರಸೀಪುರ):– ಮನ್ಯ ಅಧ್ಯಕ್ಷರೆ, ನಾನು ಮತ್ತು ನಮ್ಮ ಪಕ್ಷದ ಮಾನ್ಯ ಸದಸ್ಯರುಗಳು ಎಲ್ಲಾ ವಿಷಯಗಳನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇವೆ. ಒಂದು ಕಡೆ ಕುಡಿಯುವ ನಿರು ಇಲ್ಲ. ಒಂದು ಕಡೆ ಕೆರೆ ಕಟ್ಟೆಗಳಲ್ಲಿ ನೀರು ಇಲ್ಲ. ಸುಮಾರು ಐದು ಲಕ್ಷ ರೂಪಾಯಿಗಳ ಬೆಳೆ ಹಾಳಾಗಿ ಹೋಗುತ್ತಿದೆ. ನಾವು ಇದನ್ನು ಮಾನ್ಯಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇವೆ. ನೆನ್ನೆ ಸಾಯಂಕಾಲದವರೆಗೆ ಕೂಡ ಮಾನ್ಯ ಮುಖ್ಯಮಂತ್ರಿಗಳು ನೀರು ಬಿಡುವುದಿಲ್ಲವೆಂದು ದೃಢ ನಿಲುವು ತೆಗೆದುಕೊಂಡಿದ್ದರು. ಮಾನ್ಯ ಮುಖ್ಯಮಂತ್ರಿಗಳು ಇವತ್ತು ಹೇಳಬೇಕಾಗುತ್ತದೆ. ಅವರು ಕೇಂದ್ರ ಸರ್ಕಾರಕ್ಕೆ ನಿಯೋಗ ತೆಗೆದುಕೊಂಡು ಹೋಗಿ ಮನವರಿಕೆ ಮಾಡಬೇಕಾಗುತ್ತದೆ. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ಇವೆರಡರಿಂದಲೂ ಈ ರಾಜ್ಯದ ಜನತೆಗೆ ಅನ್ಯಾಯವಾಗುತ್ತಿದೆ. ಕಾವೇರಿ ಬೇಸಿನ್ ಜನತೆಗೆ ಅನ್ಯಾಯವಾಗಿದ್ದರೆ ಇದಕ್ಕೆ ಈ ಎರಡೂ ಸರ್ಕಾರಗಳು ಕಾರಣಕರ್ತರು ಎಂದು ಹೇಳಬೇಕಾಗುತ್ತದೆ. ಕೇಂದ್ರ ಸರ್ಕಾರ ಇವತ್ತು ಇದರ ಮಧ್ಯಪ್ರವೇಶ ಮಾಡಬೇಕಾಗುತ್ತದೆ. ಈ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಾಳಾಗುವಂತಹ ಸನ್ನಿವೇಶ ಇದೆ. ಇದಕ್ಕೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ನೇರ ಹೊಣೆಯಾಗುತ್ತದೆ ಎಂದು ಹೇಳಿ ನಾವೂ ಸಹ ಧರಣಿ ಮಾಡುತ್ತೇವೆ.

(ಈ ಹಂತದಲ್ಲಿ ಮಾನ್ಯ ಸದಸ್ಯರುಗಳೆಲ್ಲರೂ ಬಾವಿಗೆ ಬಂದು ಧರಣಿ ಪ್ರಾರಂಭಿಸಿದರು)

(ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಜೆ.ಡಿ.(ಎಸ್) ಪಕ್ಷದ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು)

ಅಧ್ಯಕ್ಷರು:– ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ. ಮುಖ್ಯಮಂತ್ರಿಗಳು ಮಾತನಾಡುತ್ತಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ಕಾವೇರಿ ವಿಚಾರದಲ್ಲಿ ಸುಧೀರ್ಘವಾದ ಹೇಳಿಕೆಯನ್ನು ಸದನದಲ್ಲಿ ನೀಡಿದ್ದೇನೆ. ಈ ವಿಚಾರದಲ್ಲಿ ನಮ್ಮ ಕಡೆಯಿಂದ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡಿದ್ದೇವೆ. ಇನ್ನೂ ಕೂಡ ಪ್ರಯತ್ನವನ್ನು ಮಾಡುತ್ತೇವೆ. ನಾಳೆ ನಾವು ಮತ್ತೆ ದೆಹಲಿಗೆ ಹೋಗುತ್ತೇವೆ. ಅಲ್ಲಿ ಸಿ.ಎಂ.ಸಿ. ಮೀಟಿಂಗ್ ಇದೆ. ಅಲ್ಲಿಯೂ ಕೂಡ ನಮ್ಮ ವಾದವನ್ನು ಮಂಡನೆ ಮಾಡುತ್ತೇವೆ. ಇನ್ನೂ ಏನು ಪ್ರಯತ್ನವನ್ನು ಮಾಡಬೇಕೋ ಅವೆಲ್ಲ ಕೂಡ ನಾವು ಮಾಡುತ್ತಿದ್ದೇವೆ. ನಮ್ಮ ಜಲ ರಕ್ಷಣೆಯನ್ನು ಮಾಡಲು ಪ್ರಯತ್ನಗಳನ್ನು ಮಾಡಬೇಕೋ ಆ ಎಲ್ಲಾ ಪ್ರಯತ್ನಗಳನ್ನು ನಾವು ಮಾಡುತ್ತಿದ್ದೇವೆ. ಇಲ್ಲಿ ಕಾನೂನಿನ ಪ್ರಶ್ನೆ ಇದೆ. ಆ ಕಾನೂನು ವ್ಯಾಪ್ತಿಯಲ್ಲಿ ಏನು ಮಾಡಬಹುದೋ ಆ ಎಲ್ಲಾ ಪ್ರಯತ್ನಗಳನ್ನು ನಾವು ಮಾಡುತಿದ್ದೇವೆ.

(ಗೊಂದಲ)

ಅಧ್ಯಕ್ಷರು:– ದಯವಿಟ್ಟು ಧರಣಿನಿರತರಾಗಿರುವ ಎಲ್ಲಾ ಸದಸ್ಯರುಗಳು ತಮ್ಮ ಸ್ಥಾನಗಳಿಗೆ ಹೋಗಿ ಮುಂದಿನ ಕಲಾಪ ನಡೆಸುವುದಕ್ಕೆ ಸಹಕಾರವನ್ನು ಕೊಡಿ.

(ಗೊಂದಲ)

ಅಧ್ಯಕ್ಷರು:– ಈಗ ಸದನವನ್ನು ನಾಳೆ ಬೆಳಿಗ್ಗೆ 10.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಂಜೆ 5 ಗಂಟೆ 41 ನಿಮಿಷಕ್ಕೆ ಮುಂದೂಡಿ ಮತ್ತೆ ದಿನಾಂಕ 07ನೇ ಡಿಸೆಂಬರ್ 2012ರ ಶುಕ್ರವಾರದಂದು ಬೆಳಿಗ್ಗೆ 10.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಲಾಯಿತು)

ಕರ್ನಾಟಕ ವಿಧಾನ ಸಭೆ

ಶುಕ್ರವಾರ, ದಿನಾಂಕ ೭ನೇ ಡಿಸೆಂಬರ್ ೨೦೧೨ ರಂದು ಸದನವು
ಬೆಳಗಾವಿಯ ಸುವರ್ಣ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೧೦ ಗಂಟೆ ೨೩ ನಿಮಿಷಗಳಿಗೆ ಸಮಾವೇಶಗೊಂಡಿತು

ಅಧ್ಯಕ್ಷರು : ಶ್ರೀ ಕೆ. ಜಿ. ಬೋಪಯ್ಯ ರವರು ಪೀಠವನ್ನು ಅಲಂಕರಿಸಿದ್ದರು